
॥ ಶ್ರೀಃ ಹರಿಃ ಓಂ ॥

ಶ್ರೀಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀ ಜಗನ್ನಾಥದಾಸವರ್ಯ ವಿರಚಿತ

# ಶ್ರೀಮದ್ಧರಿಕಥಾಮೃತಸಾರ

## ಶ್ರೀವಿಘ್ನೇಶ್ವರಸ್ತೋತ್ರ ಸಂಧಿ

ಸಂಧಿ–28

ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

ನಂ. 61, "ಶ್ರೀ ಉರಗಾದ್ರಿ", 5ನೇ ಅಡ್ಡರಸ್ತೆ,

ನರಸಿಂಹರಾಜಾ ಕಾಲೋನಿ, ಬೆಂಗಳೂರು–560 019

ದೂರವಾಣಿ : 602351

ಶ್ರೀಮದ್ಹರಿಕಥಾಮೃತಸಾರ
ಸರ್ವವ್ಯಾಖ್ಯಾನಸಾರಸಂಗ್ರಹ
ಶ್ರೀವಿಘ್ನೇಶ್ವರಸ್ತೋತ್ರ ಸಂಧಿ
ಸಂಧಿ–28

ಪುಟಗಳ ಸಂಖ್ಯೆ : 132
ಪ್ರಥಮ ಮುದ್ರಣ : 1996
ಪ್ರತಿಗಳ ಸಂಖ್ಯೆ : 1000

ಬೆಲೆ : 60 ರೂಗಳು

ಪ್ರತಿಗಳು ದೊರೆಯುವ ಸ್ಥಳ :

1) ಹೆಚ್. ಎಸ್. ಶ್ರೀನಿವಾಸಮೂರ್ತಿ
ನಂ. 61, "ಶ್ರೀ ಉರಗಾದ್ರಿ"
5ನೇ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ
ಬೆಂಗಳೂರು–560 019
ದೂರವಾಣಿ : 602351

2) ವೇದಾಂತ ಬುಕ್ ಹೌಸ್
ಉಮಾ ಚಿತ್ರಮಂದಿರದ ಸಮೀಪ
ಚಾಮರಾಜಪೇಟೆ, ಬೆಂಗಳೂರು–560 019
ದೂರವಾಣಿ : 600480

3) ನ್ಯೂ ವೇದಾಂತ ಬುಕ್ ಹೌಸ್
8ನೆಯ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

ಮುದ್ರಕರು :
ಶ್ರೀರಂಗ ಪ್ರಿಂಟರ್ಸ್ ಅಂಡ್ ಬೈಂಡರ್ಸ್
ಹನುಮಂತನಗರ, ಬೆಂಗಳೂರು–19
ದೂರವಾಣಿ : 602333

15th Cross, Near Vidhyapeetha Circle
Ashoknagar Bangalore - 560050.

॥ ಶ್ರೀ ಹರಿಃ ಓಂ ॥

# ಪ್ರಕಾಶಕರ ನುಡಿ

ಹರಿದಾಸ ಸಾಹಿತ್ಯಾಭಿಮಾನಿಗಳಾದ ಭಗವದ್ಭಕ್ತರಲ್ಲಿ ವಿಜ್ಞಾಪನೆಗಳು,

ಶ್ರೀಹರಿವಾಯುಗುರುಗಳ ಅನುಗ್ರಹದಿಂದಲೂ, ಹಾಗೂ ತಮ್ಮೆಲ್ಲರ ಅಭಿಮಾನದ ಸಹಕಾರದಿಂದಲೂ, ಇಲ್ಲಿಯ ಪರ್ಯಂತ 27 ಸಂಧಿಗಳ ಪ್ರಕಟಣಾ ಕಾರ್ಯವು ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ದಿನಾಂಕ 17-3-1996ರಂದು, ಶ್ರೀಪಾದರಾಜ ಮಠಾಧೀಶರಾದ ಪೂಜ್ಯ ಶ್ರೀ 108 ಶ್ರೀ ಶ್ರೀವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು ಶ್ರೀಮದ್ಧರಿಕಥಾಮೃತಸಾರದಲ್ಲಿ ಸಂಧಿ 24 ಮತ್ತು 25-26-27 ಈ ಸಂಧಿಗಳ ಸಂಯುಕ್ತ ಸಂಪುಟಗಳನ್ನು ತಮ್ಮ ಅಮೃತಹಸ್ತದಿಂದ ಬಿಡುಗಡೆ ಮಾಡಿದರು.

ಆ ಸಂಧಿಗಳು ಬಿಡುಗಡೆಯಾದ ಒಂದು ಮಾಸದ ಅವಧಿಯೊಳಗಾಗಿ, ಪ್ರಸಕ್ತ "ಶ್ರೀ ವಿಘ್ನೇಶ್ವರ ಸ್ತೋತ್ರಸಂಧಿ" (ಸಂಧಿ–28)ಯನ್ನು ತಮ್ಮ ಕೈಯೊಳಗಿಡಲು ಪ್ರಕಾಶಕರಿಗೆ ಪರಮ ಸಂತಸದ ಸಂಗತಿ.

ಆದಿಪೂಜಿತನೂ, ಸರ್ವ ವಿಘ್ನಪರಿಹಾರಕನೂ ಆದ ಗಣನಾಯಕನು ಉಳಿದಿರುವ ಸಂಧಿಗಳ (29 ರಿಂದ 33ರವರೆಗೆ) ಮುದ್ರಣಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಶ್ರೀಹರಿವಾಯು ಗುರುಗಳ ಪ್ರೇರಣೆಯಾನುಸಾರ ನಾವು ಕೈಗೊಂಡಿರುವ ಈ ಪ್ರಕಟಣಾ ರೂಪವಾದ ಸತ್ಕಾರ್ಯವನ್ನು ಪೂರೈಸಲೆಂದು ಶ್ರೀವಿನಾಯಕಾಂತರ್ಗತ

ಶ್ರೀಭಾರತೀರಮಣಾಂತರ್ಗತ ಶ್ರೀ ವಿಶ್ವಂಭರ ಸ್ವಾಮಿಯಲ್ಲಿ ನಮ್ಮ ಭಕ್ತಿಪೂರ್ವಕವಾದ ಪ್ರಾರ್ಥನೆ.

**ಕೃತಜ್ಞತೆ :**

(1) ಈ ಗ್ರಂಥದ ಪ್ರಕಟಣೆಯ ಪ್ರಾರಂಭದಿಂದಲೂ, ಜಾಹೀರಾತುಗಳನ್ನು ನೀಡಿ, ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿರುವ ಕಿರ್ಲೋಸ್ಕರ್ ಇನ್‌ವೆಸ್ಟ್‌ಮೆಂಟ್ಸ್ ಮತ್ತು ಫೈನಾನ್ಸ್ ಲಿಮಿಟೆಡ್-ಹಣಕಾಸು ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಛೇರ್‌ಮನ್‌ರಾದ ಶ್ರೀಯುತ ಪಿ. ಆರ್. ಮುಂಡೇವಾಡಿಯವರಿಗೆ ಪ್ರಕಾಶಕರು ಆಭಾರಿಗಳಾಗಿದ್ದಾರೆ. ಅವರಿಗೂ ಮತ್ತು ಆ ಸಂಸ್ಥೆಗೂ ನಮ್ಮ ಹೃತ್ಪೂರ್ವಕ ವಂದನೆಗಳು.

(2) ಮತ್ತೀಕೆರೆ ಗೋಕುಲ ಬಡಾವಣೆಯ ನಿವಾಸಿಗಳಾದ ಶ್ರೀಮತಿ ಮಂಜುಳಾ ಬಾಯಿಯವರು ಪ್ರಸಕ್ತಸಂಧಿಯ ಪ್ರಕಟಣೆಗಾಗಿ 1000 ರೂ.ಗಳ ಧನಸಹಾಯವನ್ನು ಉದಾರ ಮನಸ್ಸಿನಿಂದ ನೀಡಿರುತ್ತಾರೆ. ಆ ಪುಣ್ಯವಂತ ದಂಪತಿಗಳಿಗೆ ನಮ್ಮ ಹಾರ್ದಿಕ ವಂದನೆಗಳು.

ಮೇಲ್ಕಂಡ ಮಹನೀಯರ ಆದರ್ಶವನ್ನು ಅನುಸರಿಸಿ, ಉದಾರ ಮನಸ್ಸಿನ ಇತರ ಮಹನೀಯರು ಸ್ವಯಂಪ್ರೇರಿತರಾಗಿ ಮುಂದೆ ಬಂದು, ಮುದ್ರಣದಲ್ಲಿರುವ 29ನೆಯ ಸಂಧಿ ಮತ್ತು ಇವರ ಸಂಧಿಗಳಿಗೆ ಧನಸಹಾಯ ನೀಡಬೇಕೆಂದು ಅವರಲ್ಲಿ ಸವಿನಯಪೂರ್ವಕ ಪ್ರಾರ್ಥನೆ. ಇವರಿಂದ ಮುದ್ರಣದ ವೆಚ್ಚಕ್ಕೆ ತುಂಬಾ ಸಹಾಯ ಮಾಡಿದಂತಾಗುವುದು. ಅಲ್ಲದೇ ಶೀಘ್ರಕಾಲದಲ್ಲಿ ಉಳಿದ ಸಂಧಿಗಳು ಭಗವದ್ಭಕ್ತರ ಕೈಸೇರಲು ಅವಕಾಶವಾಗುವುದು. ನಿಮ್ಮ ಅಭಿಮಾನದ ರಕ್ಷೆ-ಇರಲಿ ಎಂದು ಪ್ರಾರ್ಥಿಸುತ್ತೇವೆ.

**ನೂತನ ಯೋಜನೆ ಸದಸ್ಯರಲ್ಲಿ ವಿನಂತಿ :**

ದಿನಾಂಕ 1-1-1992ರಿಂದ ಜಾರಿಗೆ ಬಂದಿರುವ ನೂತನ ಯೋಜನೆಗೆ ನೋಂದಾಯಿತರಾಗಿರುವ ಸದಸ್ಯರು ಇದುವರೆಗೆ ತಾವು ಪಾವತಿ ಮಾಡಿದ

ಮೊಬಲಗಿನ ನಂತರ, ಉಳಿದಿರುವ ಮೊಬಲಗನ್ನು ಒಟ್ಟಾಗಲೀ ಅಥವಾ 2-3 ಮಾಸಿಕ ಕಂತುಗಳಲ್ಲಾಗಲೀ ನೀಡಬೇಕೆಂದು ವಿನಂತಿ. ಇದರಿಂದ ಈಗ ಬೇರೆ ಬೇರೆ ಮುದ್ರಣಾಲಯಗಳಲ್ಲಿ ಏಕಕಾಲದಲ್ಲಿ ಮುದ್ರಿತವಾಗುತ್ತಿರುವ 29 ರಿಂದ 33ರವರೆಗಿನ ಮುಂದಿನ ಸಂಧಿಗಳ ಪ್ರಕಟಣೆಗೆ ತುಂಬಾ ಸಹಾಕರ ನೀಡಿದಂತಾಗುವುದು. ತಮ್ಮ ಅಭಿಮಾನದ ಸಹಕಾರದ ಹಸ್ತವನ್ನು ನೀಡುವಿರಾ?

**ಹಳೆಯ ಯೋಜನೆಯ ಸದಸ್ಯರು :**

7 ಸಂಪುಟಗಳ ಹಳೆಯ ಯೋಜನೆಯು ಜಾರಿಯಲ್ಲಿದ್ದಾಗ, ಅನೇಕರು (ಶೇ. 70 ಹೆಚ್ಚು ಮಂದಿ) ಕೇವಲ 108 ರೂ.ಗಳನ್ನು ನೀಡಿ, 7 ಸಂಪುಟ ಗಳನ್ನು ಪಡೆದು, ಮುಂದಿನ ಮಾಸಿಕ ಕಂತುಗಳನ್ನು ನೀಡದೆ, ತಟಸ್ಥರಾಗಿ, ಉದಾಸೀನಭಾವದಿಂದ ಕುಳಿತುಬಿಟ್ಟಿದ್ದಾರೆ. ಅವರಿಗೆಲ್ಲಾ ಪ್ರಕಾಶಕರು ಮೇಲಿಂದ ಮೇಲೆ ವಿನಂತಿಪತ್ರ ಹಾಕಿದರೂ, ಅವರ ಶ್ರಮ ಸಾರ್ಥಕ ವಾಗಿಲ್ಲ. ಅಂಚೆವೆಚ್ಚಕ್ಕೆ ಹಣ ಖರ್ಚಾಯಿತೇ ಹೊರತು, ಅವರ ಕಠಿಣ ಮನಸ್ಸನ್ನು ಆ ವಿನಂತಿಪತ್ರಗಳು ಮೆದುವಾಗಿಸಲು ಯಶಸ್ವಿ ಯಾಗಿಲ್ಲ.

ಆದರೆ ಈಗಲೂ ಕಾಲ ಮಿಂಚಿಲ್ಲ. ಅವರೆಲ್ಲರೂ ತಮ್ಮ ಮನಸ್ಸನ್ನು ಬದಲಾಯಿಸಿ, ಶ್ರೀಹರಿವಾಯುಗುರುಗಳಿಗೆ ಅತ್ಯಂತ ಪ್ರೀತಿಗೆ ವಿಷಯವಾದ ಈ ಪುಣ್ಯರೂಪವಾದ ಸತ್ಕಾರ್ಯದಲ್ಲಿ ಭಾಗವಹಿಸಿ, ಪ್ರಕಾಶಕರು ಕೈಗೊಂಡಿರುವ ಮಹದ್ ಯೋಜನೆಯು ಯಶಸ್ವಿಯಾಗಿ ಪೂರ್ಣ ಗೊಳಿಸಲು ಈಗಲಾದರೂ ಪಾತ್ರರಾಗುತ್ತಾರೆಂದು ಪ್ರಕಾಶಕರು ಮನವಿ ಮಾಡಿಕೊಳ್ಳುತ್ತಿದ್ದಾರೆ. ಅವರ ಕನಸ್ಸನ್ನು ನನಸಾಗಿಸಲು ಈ ಪುಣ್ಯಕಾರ್ಯದ ಕಡೆಗೆ ಈಗಲಾದರೂ ಮನಸ್ಸು ಹರಿಸುತ್ತೀರಾ?

ಪ್ರಸಕ್ತ "ಶ್ರೀ ವಿಘ್ನೇಶ್ವರಸ್ತೋತ್ರ ಸಂಧಿ"-ಯ 21 ಪದ್ಯಗಳ ಸಮಗ್ರ ಭಕ್ತಿಪುರಸ್ಸರವಾದ ಪಾರಾಯಣರಿಂದ ಭಗವದ್ಭಕ್ತರ ಸಕಲ ವಿಘ್ನಗಳೂ

ಪರಿಹಾರವಾಗಿ, ಅವರ ಸತ್ಸಾಧನಾರೂಪವಾದ ಅಭಿಲಾಷೆಗಳು ಶ್ರೀಶನ ಪ್ರೇರಣೆಯಿಂದ ಕೈಗೂಡುವುದರಲ್ಲಿ ಸಂದೇಹವೇ ಇಲ್ಲ. ಇದರ ಸಮಗ್ರ ಪಾರಾಯಣವನ್ನು ಸಕಲ ಸಜ್ಜನರೂ ಮಾಡಬೇಕಾಗಿ ಪ್ರಕಾಶಕರ ಸವಿನಯ ಪೂರ್ವಕ ಪ್ರಾರ್ಥನೆ.

ಅತ್ಯಲ್ಪಕಾಲದಲ್ಲಿ ಈ ಸಂಧಿಯನ್ನು DTPಯಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಶ್ರೀರಂಗ ಬೈಂಡರ್ಸ್ ಮಾಲೀಕರಾದ ಶ್ರೀ ಬಾಲಕೃಷ್ಣ ಅವರಿಗೂ ಮತ್ತು ಅವರ ಸಹೋದ್ಯೋಗಿಗಳಿಗೂ ಪ್ರಕಾಶಕರು ಆಭಾರಿಯಾಗಿದ್ದಾರೆ.

ಮುಂದಿನ ಪ್ರಕಟಣೆ

**"ಅಣುತಾರತಮ್ಯಸಂಧಿ"–(ಸಂಪುಟ–29)**

ಶೀಘ್ರದಲ್ಲಿಯೇ ಪ್ರಕಟಣೆಯಾಗಲಿದೆ.

ಅಭಿಮಾನವಿರಲಿ

ಇಂತೀ ವಿಜ್ಞಾಪನೆಗಳು,
ಹೆಚ್. ಎಸ್. ಶ್ರೀನಿವಾಸಮೂರ್ತಿ
(ಪ್ರಕಾಶಕರು)

ಬೆಂಗಳೂರು
ದಿನಾಂಕ 10-4-1996

# ಅರ್ಪಣೆ



**ಕೀರ್ತಿಶೇಷರಾದ ಶ್ರೀ ಹೊಳೆನರಸೀಪುರದ ಭೀಮರಾಯರು**
**(ಕ್ರಿ.ಶ. 1902-1963)**

ಶ್ರೀಯುತ ಹೆಚ್. ಭೀಮರಾಯರ ಸ್ಥಳ-ಹಾಸನ ಜಿಲ್ಲೆಯ ಹೊಳೆ ನರಸೀಪುರ ಕ್ಷೇತ್ರವಾಸೀ ಶ್ರೀಲಕ್ಷ್ಮೀನರಸಿಂಹದೇವರ ಅಂತರಂಗ ಭಕ್ತರು. ಪ್ರಕಾಶರಾದ ಶ್ರೀ ಹೆಚ್. ಎಸ್. ಶ್ರೀನಿವಾಸಮೂರ್ತಿಗಳ ಚಿಕ್ಕಪ್ಪಂದಿರು ಕ್ರಿ.ಶ. 1902ರಲ್ಲಿ ಜನಿಸಿ, ತಮ್ಮ ಉನ್ನತ ವ್ಯಾಸಂಗವನ್ನು ಮೈಸೂರು ಮತ್ತು ಬೆಂಗಳೂರಿನಲ್ಲಿ ಪೂರ್ಣಗೊಳಿಸಿ, ಬಿ.ಎಲ್. ಪದವೀಧರರಾದರು. ನಂತರ, ಮದ್ರಾಸಿನಲ್ಲಿ ಸುಪ್ರಸಿದ್ಧ ವಕೀಲರಾಗಿದ್ದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರ ಕೆಳಗೆ ಕೆಲವು ವರ್ಷಗಳು ಕೆಲಸ ಮಾಡಿ, ಪೂರ್ಣಾನುಭವ ಪಡೆದು, ಮದ್ರಾಸಿನ ಹೈಕೋರ್ಟ್ ವಕೀಲರಾದರು. ಲೌಕಿಕ ವೃತ್ತಿಯಲ್ಲಿ ಮುಂದುವರಿಯುವ ಚೇತನವಲ್ಲವಾದ ಕಾರಣದಿಂದ, ಶ್ರೀಮಂತ್ರಾಲಯ

ರಾಯರ ಸೇವೆ ಮಾಡಿ, ಅಲ್ಲಿಂದ ಆಜ್ಞಪ್ತರಾಗಿ ಮಳಖೇಡ ಕ್ಷೇತ್ರಕ್ಕೆ ತೆರಳಿ, ಅಲ್ಲಿ ಒಂದುವರ್ಷಗಳ ವರ್ಷಗಳ ಕಾಲ ಕಠಿಣ ಸೇವೆಯನ್ನು ಮಾಡಿದರು. ಅವರ ನಿಸ್ವಾರ್ಥದ ಸೇವೆಗೆ ಮೆಚ್ಚಿ ಶ್ರೀಜಯತೀರ್ಥ ಶ್ರೀಮಚ್ಚರಣರು ಪರಮಾನುಗ್ರಹಮಾಡಿ, ಆ ಕ್ಷೇತ್ರದಲ್ಲಿ ಪೂಜೆಗೊಳ್ಳುತ್ತಿದ್ದ ಮೃತ್ತಿಕಾ ವೃಂದಾವನವನ್ನು ಅನುಗ್ರಹಿಸಿದರು. ಕ್ರಿ.ಶ. 1935ರಲ್ಲಿ ಶ್ರೀ ಟೀಕಾಕೃತ್ಪಾದರ ವೃಂದಾವನದೊಡನೆ ಶ್ರೀಮಳಖೇಡ ಕ್ಷೇತ್ರದಿಂದ ಹೊರಟು, ಮಾರ್ಗ ಮಧ್ಯದಲ್ಲಿ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ಬೆಂಗಳೂರನ್ನು ಸೇರಿದರು. ಕ್ರಿ.ಶ. 1935 ರಿಂದ ಕ್ರಿ.ಶ. 1963ರವರೆಗೆ ಪ್ರತಿ ವರ್ಷವೂ ಅತ್ಯಂತ ವೈಭವದಿಂದ ಶ್ರೀಟೀಕಾಚಾರ್ಯರ ಪುಣ್ಯದಿನವನ್ನು ವಿದ್ಯುಕ್ತವಾಗಿ ಆಚರಿಸುತ್ತಿದ್ದರು.

ಚಿತ್ರದುರ್ಗದಲ್ಲಿದ್ದ ಶ್ರೀ ಉರಗಾದ್ರಿ ವಾಸ ವಿಠ್ಠಲದಾಸವರ್ಯರ ಶಿಷ್ಯರಾಗಿ, ಅವರಿಂದ "ಶ್ರೀಕೃಷ್ಣವಿಠಲ" ಎಂಬ ಅಂಕಿತೋಪದೇಶವನ್ನು ಪಡೆದರು. ನಂತರ, ಶ್ರೀಕೃಷ್ಣವಿಠ್ಠಲಾಂಕಿತದಲ್ಲಿ ಕೀರ್ತನೆ, ಉಗಾಭೋಗಗಳನ್ನು ರಚಿಸಿರುತ್ತಾರೆ. ಅಲ್ಲದೆ ದಶೋಪನಿಷತ್ತುಗಳನ್ನು ನುಡಿಯಲ್ಲಿ ಭಾಮಿನೀ ಷಟ್ಪದಿಯಲ್ಲಿ ರಚಿಸಿರುತ್ತಾರೆ.

ಶ್ರೀಯುತರ ಮೇರುಕೃತಿ–ಶ್ರೀಕೃಷ್ಣಚರಿತಾಮೃತ–ಶ್ರೀಮದ್ಭಾಗವತರ ದಶಮಸ್ಕಂಧಗತ ಸಮಗ್ರ ಕಥಾನಕವು ಗದ್ಯ–ಪದ್ಯ ವೃತ್ತನಾಮಗಳಿಂದ ಕೂಡಿದ ಈ ಗ್ರಂಥರತ್ನದಲ್ಲಿ ಸುಂದರವಾಗಿ ಮೂಡಿಬಂದಿದೆ. ಅವರ ಕೀರ್ತನೆಗಳು ಪ್ರಕಟವಾಗಿ, ಭಕ್ತರ ಕೈಸೇರಬೇಕಾಗಿದೆ. ಶ್ರೀಹರಿಯ ಚಿತ್ತವಿದ್ದರೆ, ಆಗಲಿ.

ಈ ಪ್ರಸಕ್ತಸಂಧಿಯನ್ನು ಕೀರ್ತಿಶೇಷ ಶ್ರೀ ಹೆಚ್. ಭೀಮರಾಯರ ಜ್ಞಾಪಕಾರ್ಥವಾಗಿ ಅವರಿಗೆ ಅರ್ಪಿಸಿ ಪ್ರಕಟಿಸಲಾಗಿದೆ.

ಪ್ರಕಾಶಕರು

॥ ಶ್ರೀ ಹರಿಃ ಓಂ ॥



ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸಮಹಾತ್ಮಾ ಸುದುರ್ಲಭಃ ॥
-ಗೀತಾವಾಕ್ಯ (ಅಧ್ಯಾಯ-7, ಶ್ಲೋಕ-19)


**WITH BEST COMPLIMENTS FROM :**

## KIRLOSKAR INVESTMENTS AND FINANCE LTD.

**REGD. OFFICE :**
**UNITY BUILDINGS, II FLOOR, C-BLOCK**
**J.C. ROAD**
**BANGALORE-560 002**

॥ ಶ್ರೀಃ ಹರಿಃ ಓಂ ॥

॥ ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ
ಶ್ರೀ ಜಗನ್ನಾಥವಿಠ್ಠಲಾಯಾನಮಃ ॥

# ಶ್ರೀವಿಘ್ನೇಶ್ವರಸ್ತೋತ್ರ ಸಂಧಿ

## (ಸಂಧಿ–೨೮)

**ಹರಿಕಥಾಮೃತಸಾರ ಗುರುಗಳ ।**
**ಕರುಣದಿಂದಾಪನಿತು ಪೇಳುವೆ ।**
**ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥**

**ಟೀಕಾ :**

ತಾರತಮ್ಯಪ್ರಕಾರ, ಸರ್ವದೇವತಾಸ್ತುತಿ ಇದ್ದರೂ, ಸಕಲ ವಿಘ್ನ
ರಾರ್ಥವಾಗಿ, ಪ್ರತ್ಯೇಕವಾಗಿ ಆದಿಪೂಜಿತನಾದ ಶ್ರೀ ವಿಘ್ನೇಶ್ವರ
ಯನ್ನು ಪ್ರತಿಕಾರ್ಯಾರಂಭದಲ್ಲಿ ಮಾಡಬೇಕೆಂದು ಶಾಸ್ತ್ರನಿಯಮ.
ಂದ, ಶ್ರೀವಿಘ್ನೇಶಾಂತರ್ಗತ ಶ್ರೀಭಾರತೀರಮಣಮುಖ್ಯ
ಂತರ್ಗತ ಶ್ರೀವಿಶ್ವಂಭರಮೂರ್ತಿಯನ್ನು ಪ್ರಥಮತಃ ಪ್ರಾರ್ಥನಾ–
ಾ ಪೂಜಾ ಮಾಡಿದಂತಾಗುವುದು. ಇದು ಅತ್ಯಗತ್ಯವಾಗಿರುವುದ
ದಾಸವರ್ಯರು ಪ್ರತ್ಯೇಕವಾಗಿ ೨೧ ಪದ್ಯಗಳಿಂದ ಪ್ರಸಕ್ತ
**ಘ್ನೇಶ್ವರಸ್ತೋತ್ರ ಸಂಧಿಯನ್ನು** ಪ್ರಾರಂಭಿಸುತ್ತಾರೆ. ॥ ಪ ॥

① ಮನದಲ್ಲಿ ಪ್ರಣಾಸು

ಪದ್ಯ–೧

**ಮೂಲ :**

**ಶ್ರೀಶನಂಘ್ರಿ ಸರೋಜಭೃಂಗ ಮ ।**
**ಹೇಶಸಂಭವ ಮನ್ಮನದೊಳು ಪ್ರ ।**
**ಕಾಶಿಸನುದಿನ ಪ್ರಾರ್ಥಿಸುವೆ ಪ್ರೇಮಾತಿಶಯದಿಂದ ॥**
**ನೀ ಸಲಹು ಸಜ್ಜನರ ವೇದ ।**
**ವ್ಯಾಸಕರುಣಾಪಾತ್ರ ಮಹದಾ ।**
**ಕಾಶಪತಿ ಕರುಣಾಳು ಕೈಪಿಡಿದೆಮ್ಮನುದ್ಧರಿಸು ॥ ೧ ॥**

**ಪ್ರತಿಪದಾರ್ಥ :**

**ಶ್ರೀಶನ** = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ, **ಅಂಘ್ರಿ ಸರೋಜ** = ಪಾದಕಮಲಗತ ಮಹಾತ್ಮ್ಯ ಎಂಬ ಮಕರಂದವನ್ನು ಪಾ ಮಾಡುವ, **ಭೃಂಗ** = ದುಂಬಿ ಸದೃಶನಾದ, **ಮಹೇಶಸಂಭವ** = ಮಹಾ ದೇವರ ಪುತ್ರನಾದ, **ವೇದವ್ಯಾಸ ಕರುಣಾಪಾತ್ರ** = ಶ್ರೀಮನ್ಮಹಾಭಾ ಗ್ರಂಥವನ್ನು ಸಂಪೂರ್ಣವಾಗಿ ಬರೆದು, ತದ್ವಾರಾ ಶ್ರೀವೇದವ್ಯಾ **ಪೂರ್ಣಅನುಗ್ರಹಕ್ಕೆ** ಪಾತ್ರನಾದ, **ಮಹದಾಕಾಶಪತಿ** = ಭೂತಾಕಾಶಾಭಿಮಾ ಯಾದ, **ಕರುಣಾಳು** = ದಯಾಳುವಾದ, **ಮನ್ಮನದೊಳು** = ನನ್ನ ಮನಸ್ಸಿನ **ಅನುದಿನ** = ನಿರಂತರವೂ (ಪ್ರತಿನಿತ್ಯವೂ) **ಪ್ರೇಮಾತಿಶಯದಿಂದ** ಭಕ್ತ್ಯುದ್ರೇಕಭಾವದಿಂದ, **ಪ್ರಾರ್ಥಿಸುವೆ** = ನಿನ್ನನ್ನು ಪ್ರಾರ್ಥಿಸುತ್ತೇನೆ. **ಸಜ್ಜ** = ಮುಕ್ತಯೋಗ್ಯರಾದ ಸಚ್ಚೇತನರನ್ನು, **ನೀಸಲಹು** = ನೀನು ಸಂರಕ್ಷಿ **ಎಮ್ಮನು** = ನಮ್ಮಗಳನ್ನು, **ಕೈಪಿಡಿದು** = ಕರಾವಲಂಬನ ನೀಡಿ, **ಉದ್ಧರಿಸು** ವಿಷ್ಣುಭಕ್ತಿಯನ್ನು ನೀಡಿ, ತದ್ವಾರಾ ಉದ್ಧಾರಮಾಡು. ॥ ೧ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

**ಅವತರಣಿಕಾ :**

ಶ್ರೀವಿಘ್ನೇಶ್ವರ ಎಂಥಾವನೆಂದರೆ, ತಾರತಮ್ಯಪ್ರಕಾರ ಸರ್ವದೇವಾ **ಸ್ತುತಿ** ಇದ್ದರೂ, ವಿಘ್ನಪರಿಹಾರಾರ್ಥವಾಗಿ ಪ್ರತ್ಯೇಕವಾಗಿ,

ವಿಘ್ನೇಶಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವಿಶ್ವಂಭರಮೂರ್ತಿಯನ್ನು ಸರ್ವಕಾಲದಲ್ಲೂ ಪ್ರಥಮತಃ ಪ್ರಾರ್ಥನಾ ಮಾಡುವುದು, ಪೂಜಾ ಮಾಡುವುದು–ಅವಶ್ಯವೆಂದು ಇರುವದ್ದರಿಂದ, ಪ್ರತ್ಯೇಕವಾಗಿ ೨೧ ಶ್ಲೋಕಗಳಿಂದ ಶ್ರೀವಿಘ್ನೇಶ್ವರನನ್ನು ಈ ಸಂಧಿಯಲ್ಲಿ ಸ್ತೋತ್ರ ಮಾಡತಾರೆ.

ಲಕ್ಷ್ಮೀಪತಿಯಾದ ಶ್ರೀನಾರಾಯಣದೇವರ ಪಾದಗಳೆಂಬೋ ಕಮಲಗತ ಮಾಹಾತ್ಮ್ಯ–ಎಂಬ ಮಕರಂದ ಪಾನಮಾಡತಕ್ಕ ಭ್ರಮರ ಸ್ಥಾನಾಪನ್ನನಾದವ. ರುದ್ರದೇವರಿಂದ ಶಿರಚ್ಛೇದನ ಮಾಡಿಸಿಕೊಳ್ಳಲ್ಪಟ್ಟು, ಪುನಃ ಅದೇ ರುದ್ರದೇವರಿಂದ ಗಜಮುಖ ಸಂಬಂಧದಿಂದ ಜೀವಿತನಾದ, ಈ ರೀತ್ಯಾ ರುದ್ರದೇವರಿಂದ ಉತ್ಪನ್ನನಾದವ. ಶ್ರೀವೇದವ್ಯಾಸದೇವರ ಕರುಣಾಪಾತ್ರನಾದ ದೊಡ್ಡನಾದ ಅಂಡಾಂತರ್ಬಹಿರ್ವ್ಯಾಪ್ತವಾದ, ಆಕಾಶಾಭಿಮಾನಿಯಾದ ದಯಾಳುವಾದ ವಿನಾಯಕನೇ, ಅತ್ಯಂತ ಭಕ್ತಿ–ಅತಿಶಯದಿಂದ ಪ್ರಾರ್ಥನ ಮಾಡುವೆ. ಪ್ರತಿದಿನದಲ್ಲೂ, ನನ್ನ ಮನಸ್ಸಿನಲ್ಲಿ ಮನುವನ್ನು ಅನ್ಯವಿಷಯದಲ್ಲಿ ಪ್ರವರ್ತಿಸಿ, ಭಗವಂತನ ಇದೇ ಪ್ರಕಾಶ ಸರ್ವ ಸಜ್ಜನರ ರಕ್ಷಿಸೋವನಾಗು. ಸೇವಾಕ್ಕೆ ವಿಘ್ನಗಳ ಮಾಡುವಂಥವುಗಳನ್ನು ಪರಿಹಾರ ಮಾಡಿ, ಅವಿಘ್ನಗಳ ಪ್ರಕಾಶ ಮಾಡೋವನಾಗು. ಶ್ರೀ ಪರಮಾತ್ಮನ ಸೇವಾಕ್ಕೆ ವಿಘ್ನಗಳೆಂಬ ಸಮುದ್ರದಲ್ಲಿ ಇರತಕ್ಕ ನಮ್ಮನ್ನ ಕೈಪಿಡಿದು, ದಡ ಸೇರಿಸಿ, ಉದ್ಧಾರ ಮಾಡೋವನಾಗು–ಎಂತ ತಾತ್ಪರ್ಯ. ॥ ೧ ॥

೨. ಭಾವಪ್ರಕಾಶಿಕೆ :

ಶ್ರೀಗಣಪತಿಯನ್ನು ಪ್ರಾರ್ಥಿಸುತ್ತಾರೆ : ಎಲೈ ಗಣಪತಿಯೇ! ನೀನು ಸಾಕ್ಷಾಲ್ಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನ ಪಾದವೆಂಬ ಕಮಲದಲ್ಲಿ ಭ್ರಮರದಂತಿರುವೆ! ಅಂದರೆ, ಭ್ರಮರವು ಹೇಗೆ ಜೇನಿಗೋಸ್ಕರ ಕಮಲದಲ್ಲಿ ಸೇರಿಕೊಳ್ಳುವದೋ, ಹಾಗೆ ನಿನ್ನ ಮನಸ್ಸು ಅವಿಚ್ಛಿನ್ನವಾಗಿ ಪರಮಾತ್ಮನ ಪಾದದಲ್ಲಿ ನೆಲಸಿರುವುದೆಂಬ ತಾತ್ಪರ್ಯ. ಎಲೈ ರುದ್ರದೇವರಿಂದ

ಜನಿಸಿದವನೆ! ಯದ್ಯಪಿ ಪಾರ್ವತೀದೇವಿಯರು ತಮ್ಮ ದೇಹ
ಕೊಳೆಯಿಂದ ಗಣಪತಿಯನ್ನು ಸೃಷ್ಟಿಮಾಡಿದುದಾಗಿ, ಗಣೇಶನ ಕಥೆಯೊಳ
ಬರುವುದು. ಪಾರ್ವತೀದೇವಿಯರ ಮಗನಾದುದರಿಂದ ರುದ್ರದೇವ
ಮಗನೆಂದು ಹೇಳಬಹುದು; ಆದರೆ "ಮಹೇಶಸಂಭವ"–ಎಂದ
ದಾಸಾರ್ಯರು ಹೇಳಿರುವರು. ಸಂಭವನೆಂದರೆ, ಜನಿಸಿದವನೆಂದರ್ಥ
ರುದ್ರದೇವರ ದೆಸೆಯಿಂದ ಗಣಪತಿ ಜನಿಸಲಿಲ್ಲ; ಹೀಗಿರಲು, ಮ
ಸಂಭವನೆಂದೇಕೆ ಹೇಳಿದರೆಂದರೆ: ಅದೇ ಗಣೇಶನ ಕಥೆಯ
ಹೇಳುವುದೇನೆಂದರೆ : ಪಾರ್ವತೀದೇವಿಯರು ಗಣಪತಿಯನ್ನು ಸೃಷ್ಟಿ
ತಮ್ಮ ಮನೆಯಲ್ಲಿ ದ್ವಾರಪಾಲಕನನ್ನಾಗಿ ಇಟ್ಟು, ತಾವು ಸ್ನಾನಮಾಡ
ಹೋಗುವದಾಗಿಯೂ, ಆವರೆಗೂ ಯಾರನ್ನೂ ಒಳಗೆ ಬಿಡಬೇಡವೆಂದ
ಅಪ್ಪಣೆಯನ್ನಿತ್ತು, ಒಳಭಾಗದಲ್ಲಿ ಸ್ನಾನಕ್ಕೆ ಹೊರಟುಹೋದರು.
ಸಮಯದಲ್ಲಿ ಹೊರಗೆ ಹೋಗಿದ್ದ ರುದ್ರದೇವರು ಒಳಗೆ ಪ್ರವೇಶಿಸಲುದ್ಯು
ದಾಗಲು, ಅವರನ್ನು ತಂದೆಯೆಂದರಿಯದೆ, ಒಳಗೆ ಪ್ರವೇಶ ಮಾಡಕೂ
ದೆಂದು ತಡೆದನು. ರುದ್ರದೇವರು ಕೋಪದಿಂದ ಅವನ ತಲೆಯನ್ನು ಛೇದಿ
ಸಂಹರಿಸಿದರು. ತದನಂತರ ಪಾರ್ವತೀದೇವಿಯರು ಇದನ್ನು ತಿಳಿದ
ತಮ್ಮ ಪುತ್ರನು ಹೋದನೆಂದು ಪ್ರಲಾಪ ಮಾಡಲು, ರುದ್ರದೇವ
ಸಮಾಧಾನಗೊಳಿಸಿ, ತಮ್ಮ ಭೃತ್ಯರನ್ನು ಕರೆದು ಉತ್ತರಾಭಿಮುಖವಾ
ತಲೆಯನ್ನಿಟ್ಟು ಯಾವನು ಮಲಗಿದ್ದರೂ, ಅವನ ತಲೆಯನ್ನು ಕತ್ತ
ತೆಗೆದುಕೊಂಡು ಬನ್ನಿರಿ–ಎಂದು ಅಪ್ಪಣೆ ಇತ್ತರು. ಅದರಂತೆ, ರುದ್ರಭಟ
ಹುಡುಕುವಾಗ, ಒಂದು ಆನೆಯ ಹೊರತು ಬೇರೆ ಯಾವ ಮನುಷ್ಯ
ಉತ್ತರ ಶಿರಸ್ಸಾಗಿ ಮಲಗಿರಲಿಲ್ಲ. ಆಗ ಅದೇ ಆನೆಯ ತಲೆಯನ್ನು ಕಡಿ
ತಂದರು. ರುದ್ರದೇವರು ಆ ತಲೆಯನ್ನು ಮೃತನಾದ ಪುತ್ರನ ಮುಂಡಕ್ಕೆ
ಜೋಡಿಸಿ, ಅವನನ್ನು ಬದುಕಿಸಿ, ಅವನನ್ನು ತಮ್ಮ ಭೂತಗಣಗಳ
ಪ್ರತಿಯನ್ನಾಗಿ ಮಾಡಿ, ವರವನ್ನಿತ್ತರು. ಆದ್ದರಿಂದ, ಗಣಪತಿಯ ಪೂಜೆಯನ್ನ
ಮಾಡಬೇಕೆಂದು ಹೇಳಿರುವರು. ಇದರಿಂದ ಮೊದಲು ಸೃಷ್ಟಿ

ಪಾರ್ವತೀದೇವಿಯರಿಂದಲೂ, ಅವನು ಮೃತನಾದ ಮೇಲೆ ಪುನಃ ರುದ್ರದೇವರೇ ಸೃಷ್ಟಿಸಿದುದರಿಂದ, ಮಹೇಶಸಂಭವನೆಂದು ಹೇಳಲು ಕಾರಣವಾಯಿತು. ನಿನ್ನನ್ನು ಪ್ರತಿದಿವಸದಲ್ಲೂ ಪ್ರಾರ್ಥಿಸುವೆನು; ನನ್ನ ಮನಸ್ಸಿನಲ್ಲಿ ನೀನು ಪ್ರಕಾಶಿಸುತ್ತಾ, ನಾನು ಮಾಡುವ ಕಾರ್ಯಗಳು ನಿರ್ವಿಘ್ನವಾಗಿ ನಡೆಯುವಂತೆ ಮಾಡು. ಸಜ್ಜನರನ್ನು ಇದರಂತೆಯೇ ಉದ್ಧರಿಸು! ಎಲೈ ವೇದವ್ಯಾಸ ಕರುಣಾ ಪಾತ್ರ! ಇದೇನು? ಭಗವದವತಾರಗಳು ಅನೇಕವಿರಲು, ಮೂಲರೂಪವಿರಲು, ವೇದವ್ಯಾಸ ಕೃಪಾಪಾತ್ರನೆಂದೇಕೆ ಹೇಳಬೇಕೆಂದರೆ; ವೇದವ್ಯಾಸದೇವರು ಮಹಾಭಾರತ ವನ್ನು ಮಾಡಿದಾಗ ಈ ದೊಡ್ಡ ಗ್ರಂಥವನ್ನು ಬರೆದು ಮುಗಿಸುವರು– ಯಾರೆಂದು ಯೋಚಿಸಿ; ಗಣಪತಿಯನ್ನು ಸ್ಮರಣೆ ಮಾಡಲು, ಗಣಪತಿಯು ಅಲ್ಲಿಗೆ ಬಂದು, ವೇದವ್ಯಾಸರ ಅಪ್ಪಣೆಯಂತೆ, ಭಾರತವನ್ನು ಬರೆದು ಮುಗಿಸಿದನು. ಆದುದರಿಂದ, ಇವನಲ್ಲಿ ಪರಮಾನುಗ್ರಹಮಾಡಲು ಕಾರಣವಾಯಿತು. ಅದನ್ನು ಮನಸ್ಸಿನಲ್ಲಿಟ್ಟು, ದಾಸಾರ್ಯರು ವೇದವ್ಯಾಸ ಕೃಪಾಪಾತ್ರನೆಂದರು. ಮಹದಾಕಾಶಪತಿ ಎಂದರು. ೨೪ ತತ್ವಗಳ ಪೈಕಿ, ಪಂಚಮಹಾಭೂತಗಳು ೫, ಅವುಗಳಲ್ಲಿ ಒಂದಾದ ಆಕಾಶತತ್ವಕ್ಕೆ ಅಧಿಪತಿಯು ಗಣಪತಿ–ಎಂದು ತತ್ವನ್ಯಾಸ ಮಂತ್ರದಲ್ಲಿ "ಓಂ ಪರ್ಯಾಯ ಆಕಾಶಾತ್ಮನೇ–ಮಹಾಗಣಪತಯೇ ನಮಃ"–ಎಂದು ಹೇಳಿರುವರು. ಇವಕ್ಕೆ ಆಧಾರವು ಶ್ರೀಮನ್ಮಧ್ವಾಚಾರ್ಯರು ಮಾಡಿದ ತಂತ್ರಸಾರವೆಂಬ ಗ್ರಂಥವು. ಎಲೈ ಕರುಣಾಳೀ! ನನ್ನನನು ಕೈಪಿಡಿದು ಉದ್ಧರಿಸೋ–ಎಂದು ಪ್ರಾರ್ಥನೆ ಮಾಡಿದರೆಂಬ ತಾತ್ಪರ್ಯ. ॥ ೧ ॥

**೩. ಭಾವದರ್ಪಣ ಟೀಕಾ :**

ಪರರಲೋಕ ಸಾಧನವು ಯಾವಾತನ ಪರಮಾನುಗ್ರಹದಿಂದ ನಿರ್ವಿಘ್ನಪೂರ್ವಕ ನಡೆಯುತ್ತದೋ, ಅಂಥ ವಿಘ್ನರಾಜನ ಗುಣಗಣಸ್ತವನ ಪೂರ್ವಕ ಸಂಧಿ ಉಪಕ್ರಮಿಸುತ್ತಾರೆ.

ಶ್ರೀಪರಮಾತ್ಮನ ಪಾದಕಮಲಮಕರಂದಾಸ್ವಾದನ ವಿಷಯದಲ್ಲಿ

ಭ್ಯಂಗವತ್ ಚರಿಸತ್ಕ ಪಾರ್ವತೀಪುತ್ರನೇ, ನಮ್ಮಮನಸ್ಸಿನಲ್ಲಿ ಹೊಳಿ-
ಎಂದು ಪ್ರಾರ್ಥಿಸುತ್ತಾರೆ-ಶ್ರೀಶನಂಭ್ಯೈ-ಎಂದು. ॥ ೧ ॥

೪. ಶ್ರೀಮ್ಯಾಸದಾಸಸಿದ್ಧಾಂತ ಕೌಮುದೀ :

ಪೂರ್ವೋಕ್ತ ಸರ್ವಸತ್ಸಾಧನೇ (ಗಂ) ಅಧಿಕರಿಣಾಂ ಅಂತರಾಯಾ ಪನೋನೇನ ಭಾವ್ಯಮ್ । ಅತಃ – "ಮಹೋದರಃ ಗಜಮುಖಃ ಪಾಶದಂತಾಂಕುಶಾಭಯಾನ್ ॥ ಬಭ್ರುದ್ದೇಯೋ ವಿಘ್ನಹರಃ ಕಾಮದತ್ವರಯಾಹ್ವಯಮ್ ॥ ಇತ್ಯುಕ್ತೇರೇಕವಿಂಶತಿ ಪತ್ರಪುಷ್ಪಫಲ ಭಕ್ಷ್ಯಪ್ರಿಯಂ ಹೇರಂಬಂ ಏಕವಿಂಶತಿಪದ್ಯೈಃ ವಿಶ್ವಾಧಿಷ್ಠಾನಮಿತ್ರವಾಗ್ಭಿಃ ಸ್ತೋತುಂ ಉಪಕ್ರಮತೇ-"ಶ್ರೀಶ" ಇತಿ ॥ "ಸಂಭವಃ"-ತದ್ಗೃಹೀತ ಪಾರ್ವತ್ಯಾ॥ ಆಕಾಶದೇವಾತಾ ವಿಘ್ನಪಃ ॥ ೧ ॥

## ಕನ್ನಡಾರ್ಥ

ಹಿಂದೆ ಹೇಳಿದ ಸತ್ಸಾಧನಗಳೆಲ್ಲ ಅಧಿಕಾರಿಗಳಿಗೆ ನಿರ್ವಿಘ್ನದಿಂದ ಸಾಂಗವಾಗಬೇಕು. ಆದುದರಿಂದ, ಶ್ರೀಮದಾಚಾರ್ಯರು ತಂತ್ರಸಾರದಲ್ಲಿ "ರಕ್ತಾಂಬರೋ ರಕ್ತತನುಃ · ರಕ್ತಮಾಲ್ಯಾನುಲೇಪನಃ ॥ ಮಹೋದರಃ ಗಜಮುಖಃ"-ಎಂಬುದಾಗಿ ವಿಘ್ನೇಶನನ್ನೂ, ಧ್ಯಾನಪದ್ಯವನ್ನೂ, ಅವನ ಮಹಿಮೆಯನ್ನೂ ಹೇಳಿದ್ದಾರೆ.

ಗಜಮುಖನು, ಮಹೋದರನು, ಪಾಶದಂತ (ಆನೆಯ ಕೋರೆ) ಅಭಯಮುದ್ರಿಕೆಯನ್ನು ಧರಿಸಿದವನು: ಹೀಗೆ, ಗಜೇಂದ್ರನನ್ನು ಧ್ಯಾನಿಸ ಬೇಕು. ಯಾಕೆಂದರೆ, ಗಜೇಂದ್ರನು ಶೀಘ್ರವಾಗಿ ಕಾಮಿತಪ್ರದನು. ಹೀಗೆ ಹೇಳಿದ್ದಾರೆ. ಆದುದರಿಂದ, ಇಪ್ಪತ್ತೊಂದು ಪತ್ರಪುಷ್ಪ-ಮೋದಕಗಳಿಗೆ ಪ್ರಿಯನಾದ ಗಣಪತಿಯನ್ನು ಇಪ್ಪತ್ತೊಂದು ಪದ್ಯಗಳಿಂದ ವಿಶ್ವಾಮಿತ್ರನ ವಾಕ್ಯಗಳಿಂದ ಸ್ತೋತ್ರಮಾಡಲು-"ಶ್ರೀಶ" ಈ ಪದ್ಯದಿಂದ ಉಪಕ್ರಮಿಸು ತ್ತಾರೆ.

"ಮಹೇಶಸಂಭವ"-ಮಹೇಶ (ರುದ್ರ) ನಿಂದ ಪಾಣಿಗ್ರಹಣವನ್ನು ಹೊಂದಿದ ಪಾರ್ವತೀದೇವಿಯ ದೇಹದಿಂದ (ಮಲದಿಂದ) ಹುಟ್ಟಿದವನು.

ಹೀಗೆ ಈ ಪದದ ಅರ್ಥ. "ಆಕಾಶಪತಿ"-ಆಕಾಶತತ್ವಕ್ಕೆ ಅಧಿಪತಿ ಯಾದವನು ವಿಘ್ನರಾಜ-ಗಣಪತಿ. ॥ ೧ ॥

## ಶ್ರೀಗುರುಹೃದಯಪ್ರಕಾಶಿಕೆ

ತಾರತಮ್ಯಪ್ರಕಾರ ಸರ್ವದೇವತಾಸ್ತುತಿ ನಿಬಂಧನೆಯಿದ್ದವರು, ವಿಘ್ನ ಪರಿಹಾರಾರ್ಥವಾಗಿ, ಕ್ವಚಿತ್ ಗಣಪತಿ ಪ್ರಾರ್ಥನೆ ಮಾಡುವದುಂಟೆಂದು ಸೂಚಿಸುವ, ತದಂತರ್ಗತ ಶ್ರೀಹರಿ ಮಹಿಮೆಯೆಂಬ ಕಥಾರೂಪ ಅಮೃತದ ರುಚಿಯನ್ನು ಯಥಾಶಕ್ತಿ ಗುರುಕೃಪೆಯಿಂದ ವರ್ಣಿಸುವುದನ್ನು ಅತ್ಯಂತ ಹರಿಭಕ್ತರು ಕೇಳಬೇಕು ॥ ಪ ॥

ಶ್ರೀಶನೆಂಬ ಲಕ್ಷ್ಮೀಪತಿಯ ಪಾದಕಮಲಕ್ಕೆ ಭ್ರಮರದಂತೆ ಆಸಕ್ತನಾದವನೇ, ಮಹೇಶನೆಂಬ ರುದ್ರಸುತನೆ, ನನ್ನ ಮನಸ್ಸಿನಲ್ಲಿ ಸದಾ ಪ್ರಕಾಶನಾಗು-ಎಂದು ಪ್ರೇಮಾತಿಶಯದಿಂದ ಪ್ರಾರ್ಥಿಸುವೆನು. ವೇದವ್ಯಾಸ ಕರುಣಾಪಾತ್ರನೇ, ನೀನು ಸಜ್ಜನರನ್ನು ಸಲಹು. ಮಹಾ ಆಕಾಶಾಭಿಮಾನಿಯೇ, ದಯಾಳುವೆ, ನನ್ನ ಕೈಹಿಡಿದು ರಕ್ಷಿಸು. ॥ ೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀವಿಘ್ನೇಶ್ವರನು ಶ್ರೀಲಕ್ಷ್ಮೀಪತಿಯ ಏಕಾಂತಭಕ್ತನು. ಶ್ರೀನಾಮಕಳಾದ ಪರಮಮಂಗಳಪ್ರದಳಾದ ಸತ್ವಾಭಿಮಾನಿಯಾದ ಶ್ರೀ ಲಕ್ಷ್ಮೀದೇವಿಗೆ ಶ್ರೀಮನ್ನಾರಾಯಣನು ಪತಿಯು ಹಾಗೂ ನಿಯಾಮಕನು. ಇದರಿಂದ **ಶ್ರೀಶ-ನಾಮಕನು.**

ಶ್ರೀಶನ ಚರಣಕಮಲಗಳಿಗೆ ವಿನಾಯಕನು ಭ್ರಮರಸದೃಶನು. ದುಂಬಿಯು ಕಮಲಪುಷ್ಪವನ್ನು ಪ್ರವೇಶಿಸಿ, ಪುಷ್ಪಗತ ಮಕರಂದವನ್ನು ಪಾನಮಾಡುವುದು. ಅದರಂತೆ, ಗಣನಾಯಕನು ಶ್ರೀಶನ ಪಾದಕಮಲಗತ ಮಹಾತ್ಮ್ಯ-ಎಂಬ ಮಕರಂದ ಪಾನಿಯಾದ ಮತ್ತಭೃಂಗನು.

೨. ಶ್ರೀಪಾರ್ವತೀದೇವಿಯು ತನ್ನ ಶರೀರದ ಮಲದಿಂದ ಒಬ್ಬ ಬಾಲಕನನ್ನು ಸೃಷ್ಟಿಸಿ, ದ್ವಾರಮುಖದಲ್ಲಿ ಇಟ್ಟದ್ದಳು. ಆಗ ಶ್ರೀ ರುದ್ರದೇವರು

ಅಲ್ಲಿಗೆ ಬಂದು ಒಳಗೆ ಹೋಗಲು ಉದ್ಯುಕ್ತರಾದಾಗ, ಬಾಲಕನು ತಡೆದನು. ಆದರಿಂದ ಕೋಪಗೊಂಡ ಮಹದೇವರು, ಬಾಲಕನ ಕತ್ತನ್ನು ಕತ್ತರಿಸಿ, ಒಳಗೆ ಪ್ರವೇಶಿಸಿದರು. ಪಾರ್ವತಿಯ ದುಃಖ ಪರಿಹಾರಕ್ಕಾಗಿ, ತನ್ನ ಸೇವಕರು ತಂದ ಗಜದ ಮಸ್ತಕವನ್ನು ಮೃತಬಾಲಕನಿಗೆ ಇಟ್ಟು, ಅಮೃತಸೇಚನದಿಂದ ಬದುಕಿಸಿದರು. ಅದರಿಂದ ಬಾಲಕನು ಗಜಮುಖನೆಂದು ಪ್ರಸಿದ್ಧನಾದನು. ಈ ಕಾರಣದಿಂದ, ಗಣಪತಿಯು ಮೂಲತಃ ಪಾರ್ವತೀಪುತ್ರನಾದರೂ ರುದ್ರದೇವರಿಂದ ಪುನಃ ಪ್ರಾಣಪ್ರತಿಷ್ಠಾಪನದ ಕಾರಣದಿಂದ **ಮಹೇಶಸಂಭವ**–ಎಂದಿದ್ದಾರೆ.

೨. ಗಣಪತಿಯು ಆದಿಪೂಜಿತನು. ಇದಕ್ಕೆ ಶ್ರೀಹರಿಯ ಆಜ್ಞೆ ಉಂಟು. ಸರ್ವವಿಘ್ನಪರಿಹಾರಕನಾದ ಹೇರಂಬನು ತಮ್ಮ ಮನಸ್ಸಿನಲ್ಲಿ ನೆಲೆಸಲೆಂದು ಪ್ರಾರ್ಥಿಸಿದ್ದಾರೆ–ದಾಸಾರ್ಯರು. ಆ ರೀತಿಯಲ್ಲಿ ಮನೋಮಂದಿರದಲ್ಲಿ ಕಾಂತಿಯಿಂದ ಬೆಳಗುವಂತೆ, ಭಕ್ತ್ಯಾತಿಶಯದಿಂದ ಪ್ರಾರ್ಥಿಸುತ್ತಾರೆ.

ಪ್ರೇಮ–ಭಕ್ತಿ, ಪ್ರೇಮಾತಿಶಯ–ಅಧಿಶಯವಾದ ಶುದ್ಧಭಕ್ತಿಭಾವ.

೪. ಭಗವಾನ್ ಶ್ರೀವೇದವ್ಯಾಸರು ಶ್ರೀಮನ್ಮಹಾಭಾರತವನ್ನು ಬರೆಯಲು ಗಣಪತಿಯನ್ನು ಕುರಿತು ಹೇಳಿದರು. ಅದಕ್ಕೆ ಗಣನಾಯಕನು ವೇದವ್ಯಾಸರಿಗೆ ಹಾಕಿದ ಷರತ್ತು–"ಹೇ ಭಗವಾನ್, ನೀನು ಏಕರೀತಿಯಾಗಿ ಮಧ್ಯದಲ್ಲಿ ನಿಲ್ಲಿಸದೆ, ಹೇಳಬೇಕು." ಈ ಷರತ್ತಿನ ವಾಕ್ಯಕ್ಕೆ ಬಾದರಾಯಣರ ಸವಾಲು – "ಹೇ! ಲೇಖಕಾಗ್ರಣಿ, ಪ್ರತಿಹಂತದಲ್ಲಿಯೂ ಗ್ರಂಥಸ್ಥ ಪ್ರಮೇಯಾರ್ಥಗಳನ್ನು ತಿಳಿದುಕೊಂಡು ಬರೆಯಬೇಕು". ಹೀಗೆ ಷರತ್ತು ಸವಾಲುಗಳ ದ್ವಾರಾಇತಿಹಾಸಪ್ರಸ್ಥಾನ ಪ್ರಸಿದ್ಧವಾದ ಶ್ರೀಮನ್ಮಹಾಭಾರತವನ್ನು ಸಂಪೂರ್ಣವಾಗಿ ಬರೆದ ಲೇಖಾಗ್ರಣಿಯು – **ಶ್ರೀವೇದವ್ಯಾಸಕರುಣಾಪಾತ್ರನು.**

೫. ಭೂತಪಂಚಕಗಳಲ್ಲಿ ಮೊದಲನೆಯದಾದ ಭೂತಾಕಾಶತತ್ತ್ವಕ್ಕೆ ಗಣಪತಿಯು ಅಭಿಮಾನಿಯು. ಇದರಿಂದ, **ಮಹಾದಾಕಾಶಪತಿಯು.**

ಸರ್ವತ್ರ ವ್ಯಾಪ್ತನ್ಯಾಗಿರುವುದರಿಂದ, ಆಕಾಶವೆಂಬ ಪ್ರದೇಶವು ಮಹಾದಾಕಾಶ ವೆನಿಸುವುದು.

"ಓಂ ಪರಾಯ ಆಕಾಶಾತ್ಮನೇ ಮಹಾಗಣಪತಯೇ ನಮಃ"–ಎಂದು **ತತ್ತ್ವನ್ಯಾಸ ಮಂತ್ರದ ಪ್ರಮಾಣ.**

ಆಕಾಶದ ಧರ್ಮ–**ಶಬ್ದವು.** ಆಕಾಶಪತಿಯಾದ ಆಖುವಾಹನನು **ಶಬ್ದಗುಣಗ್ರಹಕನು.**

೬. ಸಜ್ಜನರಿಗೆ ಪ್ರತಿಹಂತದಲ್ಲೂ ಒಳಗಿ ಬರುತ್ತಿರುವ ವಿಘ್ನ ಸಮೂಹಗಳನ್ನು ನಿವಾರಿಸಿ, ಶ್ರೀಹರಿಯ ಉಪಾಸನಾರೂಪವಾದ ಸಾಧನ ಮಾರ್ಗದಲ್ಲಿ ಸರ್ವವಿಘ್ನಪರಿಹಾರಕನಾಗಿ ನಡೆಯಿಸೆಂದು ಪ್ರಾರ್ಥಿಸುತ್ತಾರೆ– ಗಣೇಶನಲ್ಲಿ.

೭. ನಿನ್ನ ಕರಾಂಬಲವನ್ನಿತ್ತು ನಮ್ಮನ್ನು ಉದ್ಧರಿಸಬೇಕೆಂದು ಭಕ್ತಿಭಾವದಿಂದ ಮೊರೆ ಇಟ್ಟದ್ದಾರೆ–ದಾಸಾರ್ಯರು.

**ಮುಖ್ಯ ವಿಷಯ :**

೧) ವಿಘ್ನೇಶ್ವರನು ಭೂತಾಂಬರಾಧಿಪತಿಯು.

೨) ಶಬ್ದಗುಣಗ್ರಾಹಕನು.

೩) ಸಜ್ಜನರ ಸರ್ವವಿಘ್ನಪರಿಹಾರಕನು.

೪) ವಿಶ್ವಂಬರಮೂರ್ತಿಯ ಉಪಾಸಕನು. ವಿಶ್ವನಾಮಕ ಶ್ರೀಪರಮಾತ್ಮನಿಗೆ ೧೬ ಮುಖಗಳು. ಅವುಗಳಲ್ಲಿ ಮಧ್ಯಮುಖವು ಗಜಮುಖ. ಗಣಪತಿಯು ವಿಶ್ವನ ಪ್ರತಿಬಿಂಬನಾದ್ದರಿಂದ, ಅವನಿಗೂ ಗಜಮುಖವಿದೆ. ಇದೇ ಮಂಡೂಕೋಪನಿಷತ್ತಿನ ರಹಸ್ಯ. ॥ ೧ ॥

## ಪದ್ಯ-೨

**ಮೂಲ :**

**ಏಕದಂತ ಇಭೇಂದ್ರಮುಖ ಚಾ ।**
**ಮೀಕರಕೃತ ಭೂಷಣಾಂಗ ಕೃ ।**
**ಪಾಕ ಕಟಾಕ್ಷದಿ ನೋಡು ವಿಜ್ಞಾಪಿಸುವೆನಿನಿತೆಂದು ॥**
**ನೋಕನೀಯನ ನುತಿಸುತಿಪ್ಪ ವಿ ।**
**ವೇಕಿಗಳ ಸಹವಾಸ ಸುಖಗಳ ।**
**ನೀ ಕರುಣಿಸುವೆಮಗೆ ಸಂತತ ಪರಮ ಕರುಣದಲಿ ॥ ೨ ॥**

**ಅವತರಣಿಕೆ :**

ಸಜ್ಜನರ ಸಹವಾಸವನ್ನು ಕೊಡೆಂದು ವಿಘ್ನೇಶ್ವರನಲ್ಲಿ ಪ್ರಾರ್ಥಿಸುತ್ತಾರೆ. ॥ ೨ ॥

**ಪ್ರತಿಪದಾರ್ಥ :**

**ಏಕದಂತ** = ಒಂದೇ ದಂತವುಳ್ಳವನೇ, **ಇಭೇಂದ್ರಮುಖ** = ಗಜವದನನೇ, **ಚಾಮೀಕರ** = ಬಂಗಾರದಿಂದ, **ಕೃತಭೂಷಣಾಂಗ** = ನಿರ್ಮಿತವಾದ ಆಭರಣಗಳಿಂದ ಅಲಂಕೃತನಾದವನೇ, **ಕೃಪಾಕಟಾಕ್ಷದಿ ನೋಡು** = ನಿನ್ನ ದಯಾಪೂರಿತವಾದ ನೋಟದಿಂದ ನನ್ನನ್ನು ಅವಲೋಕಿಸು. **ನೋಕನೀಯನ** = ಸರ್ವೋತ್ತಮನಾದ ಶ್ರೀಪರಮಾತ್ಮ (ಕನೀಯ–ಕನಿಷ್ಠ ನೋಕನೀಯ–ಸರ್ವಶ್ರೇಷ್ಠ) **ನುತಿಸುತಿಪ್ಪ** = ನಿರಂತರವಾ ಸ್ತೋತ್ರ ಮಾಡುತ್ತಿರುವ, **ವಿವೇಕಿಗಳ** = ಜ್ಞಾನಿಗಳ, **ಸಹವಾಸ ಸುಖಗಳ** = ಸಂಗಸುಖಗಳನ್ನು, **ಪರಮ ಕರುಣದಲಿ** = ಅತ್ಯಂತ ದಯೆಯಿಂದ, **ಸಂತತ** = ನಿರಂತರದಲ್ಲಿ, **ಎಮಗೆ** = ನಮ್ಮಗಳಿಗೆ, **ನೀ ಕರುಣಿಸು** = ನೀನು ಅನುಗ್ರಹಿಸುವವನಾಗು. ॥ ೨ ॥

### ವ್ಯಾಖ್ಯಾನಗಳು

**ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :**

ಶ್ರೀವಿಘ್ನೇಶ್ವರನ್ನ ಸಜ್ಜನರ ಸಹವಾಸ ಕೊಡೆಂದು ಪ್ರಾರ್ಥಿಸತಾರೆ.

ಗಜಶ್ರೇಷ್ಠ ಮುಖವುಳ್ಳವನೇ, ಈ ಮುಖದಲ್ಲಿ ಏಕದಂತ ಉಳ್ಳವನೇ, ಬಂಗಾರದಿಂದ ನಿರ್ಮಿತವಾದ ಆಭರಣಗಳಿಂದ ಭೂಷಿತವಾದ ಶರೀರ ವುಳ್ಳವನೇ, ಈ ಪ್ರಕಾರ ಪ್ರಾರ್ಥಿಸತೇನೆ. ಆ ಪ್ರಾರ್ಥನೆ ದಾವದೆಂದರೆ, ಅವರನಲ್ಲದ ಸರ್ವೋತ್ತಮನಾದ ಶ್ರೀಪರಮಾತ್ಮನ, ಜ್ಞಾನ ಭಕ್ತಿ ವೈರಾಗ್ಯ ಪೂರ್ವಕದಿಂದ ಸ್ತೋತ್ರಮಾಡತಾ ಇರತಕ್ಕ, ಅಹಂ ಮಮತಾದಿಗಳ ಸಕಾಮಕರ್ಮಗಳ ತ್ಯಾಗ ಮಾಡಿದ ಜ್ಞಾನಿಗಳ ಸಹವಾಸವೇನು; ತಜ್ಜನಿತ ಸುಖಗಳೇನು–ಇದರನ್ನ ಪ್ರಾರ್ಥಿಸುವೆ. ನಿನ್ನ ಅಂತಃಕರಣಾಯುಕ್ತವಾದ ನೋಟದಿಂದ ನೋಡು. ನೋಡಿದವನಾಗಿ, ಅತ್ಯಂತ ಕರುಣದಿಂದ ನಿರಂತರದಲ್ಲೂ ನಮ್ಮಗಳಿಗೆ ಸಜ್ಜನ ಸಾಂಗತ್ಯ ನೀನು ಕರುಣಿಸೋವನಾಗು–ಎಂತ ಪ್ರಾರ್ಥಿಸಿದ್ದಾರೆಂತ ತಾತ್ಪರ್ಯ. ॥ ೨ ॥

**೨. ಭಾವಪ್ರಕಾಶಿಕೆ :**

ಎಲೈ ಏಕದಂತ ! ಇಭೇಂದ್ರಮುಖನೆಂದರೆ–ಆನೆ ಶ್ರೇಷ್ಠದ ಮುಖವೆಂದರ್ಥ. ವಿಘ್ನರಾಜನಿಗೆ ಆನೆಯ ಮುಖಬರಲು ಕಾರಣವನ್ನು ಮೊದಲನೆಯ ಪದ್ಯದ ತಾತ್ಪರ್ಯದಲ್ಲಿ ಬರೆದಿದೆ. ಎಲೈ ಗಜಮುಖನೆ, ಬಂಗಾರದ ಆಭರಣಗಳಿಂದ ಅಲಂಕರಿಸಲ್ಪಟ್ಟ ಅಂಗವುಳ್ಳವನೆ, ನನ್ನನ್ನು ಕರುಣಾಕಟಾಕ್ಷದಿಂದ ನೋಡು! ನೋಕನೀಯನೆಂದರೆ, ಕನೀಯನೆಂದರೆ ಚಿಕ್ಕವನೆಂದರ್ಥ. ನೋಕನೀಯನೆಂದರೆ – ಅದಲ್ಲದವನು. ದೊಡ್ಡವ ನೆಂದರ್ಥ. ಬ್ರಹ್ಮದೇವರಿಗೂ ತಂದೆಯಾದುದರಿಂದ, ತಾರತಮ್ಯದಲ್ಲಾಗಲಿ, ಮಿಕ್ಕಯಾವ ವಿಷಯದಲ್ಲಾದರೂ ಪರಮಾತ್ಮನನ್ನು ಮೀರಿದವರಾರು? ಆದುದರಿಂದ "<u>ನ ಕರ್ಮಣಾ ವರ್ಧತೇ ನೋಕನೀಯಾನ್</u>"–ಎಂಬ ಶ್ರುತಿಯು ಕರ್ಮಾದಿಗಳಿಂದ ವೃದ್ಧಿಯನ್ನು ಹೊಂದುವವನಲ್ಲ. ಯಾವಾಗಲೂ ದೊಡ್ಡವನಾಗಿಯೇ ಇರುವವನೆಂದು ಹೇಳುವರು. ಆ ಅಭಿಪ್ರಾಯವನ್ನೇ ಇಲ್ಲಿ ತೆಗೆದುಕೊಳ್ಳಬೇಕು. ಇಂತಹಾ ಪರಮಾತ್ಮನನ್ನು ಸದಾ ಸ್ತುತಿಸುತ್ತಿರುವ ಮಹಾತ್ಮರ ಸಹವಾಸವೇ ಒಂದು ಮಹಾನಂದವು! ಅಂತಹಾ ಆನಂದವು ಸರ್ವದಾ ನನಗೆ ದೊರಕುವಂತೆ ನೀನು ಕರುಣದಿಂದ

ದಯಪಾಲಿಸಬೇಕೆಂದು ನಿನ್ನಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆಂದು ದಾಸಾರ್ಯರು ಪ್ರಾರ್ಥಿಸಿರುತ್ತಾರೆ. ॥ ೨ ॥

**೨. ಭಾವದರ್ಪಣ ಟೀಕಾ :**

ಏಕದಂತ ॥ ಒಂದೇ ಹಲ್ಲನ್ನು ಉಳ್ಳ–ಇಭೇಂದ್ರಮುಖ–ಶ್ರೇಷ್ಠವಾದಂಥ ಗಜದ ಆನನವುಳ್ಳವ. ಚಾಮೀಕರಕೃತಭೂಷಣಾಂಗ–ಬಂಗಾರದಿಂದ ಮಾಡಲ್ಪಟ್ಟ ಆಭರಣಗಳಿಂದ ಅಲಂಕೃತವಾದವ ಅಂಗವುಳ್ಳವ. ನೋಕನೀಯನ – ಶ್ರೀಪರಮಾತ್ಮನ – ಎಂಬರ್ಥ. "ನ ಕರ್ಮಣಾ ವರ್ಧತೇ ನೋಕನೀಯ"–ಇತಿಶ್ರುತೇಃ ॥ ಸಂತತ–ನಿರಂತರ ॥ ೨ ॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

"ಏಕದಂತ"–ಇತಿ "ಅಪರಸ್ಯಹಸ್ತಗತತ್ವಾತ್" "ಇಭ" ಇತಿ ॥ "ವಿನಾಯಕೋsಪಿ ವಿಶ್ವಸ್ಯ ಧ್ಯಾನಾದ್ವೈತ್ ಗಜವಕ್ತ್ರತಾಮ್ ॥ ಇತ್ಯುಕ್ತೇಃ ॥ ನೋಕನೀಯಃ"–"ಉತ್ತಮಃ". ॥ ೧ ॥

## ಕನ್ನಡಾರ್ಥ

ಇನ್ನೊಂದು ದಂತ (ಆನೆಕೋರೆ) ತನ್ನ ಕೈಯಲ್ಲಿ ಇದ್ದುದರಿಂದ, ಒಂದೇ ದಂತವಿದ್ದುದರಿಂದ, "ಏಕದಂತ"ನೆಂದೆನಿಸಿರುತ್ತಾನೆ. ವಿನಾಯಕನೂ ಸಹ–"ವಿಶ್ವ"ನಾಮಕ ಭಗವದ್ರೂಪವನ್ನು ಧ್ಯಾನದಿಂದ ಉಪಾಸಿಸುದರಿಂದ, ಗಜಮುಖವನ್ನು ಹೊಂದಿದನು. ಹೀಗೆ ಪುರಾಣವಚನಗಳಿದ್ದುದರಿಂದ, "ಇಭೇಂದ್ರಮುಖ"–ಎಂಬ ಪದವನ್ನು ಇಲ್ಲಿ ಉಪಯೋಗಿಸಿದ್ದು. ॥ ೨ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಇಭೇಂದ್ರ–ಎಂದರೆ, ಗಜಮುಖನಾಗಿ ಒಂದೇ ದಂತವನ್ನು ಧರಿಸಿರುವವನೆ, ಚಾಮೀಕರವೆಂಬ ಬಂಗಾರದಿಂದ ನಿರ್ಮಿತ ಸುಭೂಷಣಗಳಿಂದ ಭೂಷಿತಶರೀರನೇ, ಕೃಪಾಕಟಾಕ್ಷದಿಂದ ನೋಡು. **ನವರ್ಧತೇ ಕರ್ಮಣಾ ನೋಕನೀಯಾನ್**–ಎಂಬ ಶ್ರುತಿರೀತ್ಯಾ, ಸರ್ವೋತ್ತಮನಾಗಿ ನೋಕನೀಯ

ನೆಂದು ಹೆಸರುಳ್ಳ-ದೇವರನ್ನು ಸ್ತುತಿಸುತ್ತಿರುವ ವಿವೇಕಿಗಳ ಸಹವಾಸ ಸುಖವನ್ನು ನನಗೆ ಕರುಣದಿಂದ ಸದಾ **ಕೊಡಬೇಕೆಂದು** ನಿನಗೆ ವಿಜ್ಞಾಪಿಸುವೆನು. ॥ ೨ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಚಂದ್ರನು ತನ್ನ ರೂಪಾತಿಶಯಗಳಿಂದ ಮದೋನ್ಮತ್ತನಾಗಿ, ಇಲಿಯನ್ನೇ ತನ್ನ ವಾಹನವನ್ನಾಗಿ ಉಳ್ಳ ಗಣಪತಿಯು ಬರುತ್ತಿರುವಾಗ, ಅವನ ದೇಹಾಕಾರವನ್ನು ನೋಡಿ, ಹಾಸ್ಯ ಮಾಡಿ ನಕ್ಕನು. ಆದರಿಂದ, **ವಿಘ್ನೇಶ್ವರನು** ತನ್ನ ಎರಡು **ಕೊಂಬುಗಳಲ್ಲಿ** ಒಂದನ್ನು ಮುರಿದು, ಚಂದ್ರನ **ಕಡೆಗೆ** ಎಸೆದನು. ಚಂದ್ರನಿಗೆ ಕ್ಷಯತ್ವ ಪ್ರಾಪ್ತಿಯಾಗುವಂತೆ ಶಪಿಸಿದನು. ಇದರಿಂದ ದಂತಭಗ್ನನಾದ ವಿನಾಯಕನು **ಏಕದಂತನೆಂದು** ಪ್ರಸಿದ್ಧನಾದನು.

೨. ಇಭ-ಆನೆ ಇಭೇಂದ್ರ-ಗಂಡಾನೆ (ಸಲಗ). ಗಣಪತಿಯ ಮುಖವು ಗಜವದನವಾಗಿದೆ. ಇದರಿಂದ ಗಣೇಶನಿಗೆ-ಗಜಾನನ (**ಕರಿಮುಖ**) ಎಂಬ ಹೆಸರು ಬಂದಿದೆ. ಇದರಿಂದ ಗಣೇಶನು **ಇಭೇಂದ್ರಮುಖನು**.

ಗಜಾನನನು ವಿಶ್ವಂಭರೋಪಾಸಕನು. ವಿಶ್ವನಾಮಕ ಶ್ರೀಹರಿಯ ಜಾಗ್ರತಾವಸ್ಥೆ ಪ್ರೇರಕನು. ಅವನಿಗೆ ೧೯ ಮುಖಗಳಿವೆ. (ಮಾಂಡೂಕೋಪ ನಿಷತ್ತು) ಅವುಗಳಲ್ಲಿ ಮಧ್ಯಮುಖವು ಗಜದಂತಿದೆ. ವಿನಾಯಕನು ವಿಶ್ವಂಭರಮೂರ್ತಿಯ ಪ್ರತಿಬಿಂಬಭೂತನು. ಇದರಿಂದ, ಗಣಪತಿಗೆ ಗಜಮುಖವಿದೆ-ಎಂಬ ತಾತ್ಪರ್ಯ.

೩. ಚಾಮೀಕರ-ಚಿನ್ನ (ಸುವರ್ಣ). ಕೃತ-ಸುವರ್ಣದಿಂದ ನಿರ್ಮಿತವಾದ, ಭೂಷಣಾಂ-ಭೂಷಣಗಳಿಂದ ಅಲಂಕೃತನಾದವನು.

ಇಭೇಂದ್ರಮುಖನ ಅವಯವಗಳು ಸುವರ್ಣಾಭರಣಗಳಿಂದ ಅಲಂಕೃತವಾಗಿವೆ. ಆದರಿಂದ ಏಕದಂತನು **ಚಾಮೀಕರಕೃತ ಭೂಷಣಾಂಗನು**.

೪. ಎಲ್ಲೈ ಏಕದಂತನೇ, ಗಜಾನನನೇ, ಸ್ವರ್ಣಾಭರಣಗಳಿಂದ ವಿಭೂಷಿತನೇ, ನಿನಗೆ ಭಕ್ತಿ ಪುರಸ್ಸರವಾದ ನಮನವು. ನಮ್ಮ ಕಡೆಗೆ ದಯಾಪಾಂಗದಿಂದ ನೋಡು. ನಿನ್ನ ಅನುಗ್ರಹಕ್ಕಾಗಿ ಪ್ರಾರ್ಥಿಸುವೆ-ಎಂದಿದ್ದಾರೆ ದಾಸಾರ್ಯರು.

೫. ಕನೀಯ-ಎಂದರೆ, ಕನಿಷ್ಠ ಅಥವಾ ಕೆಳಗಿನವನು-ಎಂದರ್ಥ. ನೋಕನೀಯ-ನಿಷೇದಾರ್ಥದಲ್ಲಿ ಕನಿಷ್ಠನಲ್ಲದವನು. ಅಂದರೆ, ಸರ್ವಶ್ರೇಷ್ಠನೆಂದರ್ಥ. ಸರ್ವೋತ್ತಮನಾದ ಶ್ರೀಪರಮಾತ್ಮನು-ನೋಕನೀಯನು.

೬. ಆ ನೋಕನೀಯನನ್ನು ಸದಾ ಸ್ಮರಿಸುತ್ತಾ, ಉಪಾಸನೆ ಮಾಡುತ್ತಿರುವ ಜ್ಞಾನಿಗಳ (ವಿವೇಕಿಗಳ) ಸತ್ಸಂಗಸುಖವನ್ನು ದಯಪಾಲಿಸೆಂದು ದಾಸರಾಯರು, ಶ್ರೀ ಪರಮಾತ್ಮನ ಏಕಾಂತಭಕ್ತನಾದ ಏಕದಂತನಿಗೆ ವಿನಂತಿಸಿಕೊಂಡಿದ್ದಾರೆ.

೭. ಎಲ್ಲೈ, ಆದಿಪೂಜಿತನೇ. ನೀನು ನಮಗೆ ಸುಮುಖನಾಗು. ಭಗವದ್ವಿಷಯಕವಾದ ಸತ್ಸಾಧನಾಪಥದಲ್ಲಿ ಒದಗುವ ಸಕಲ ವಿಘ್ನಗಳನ್ನು ನಿವಾರಿಸಿ, ಜ್ಞಾನಿಗಳ ಸಂಗಸುಖವನ್ನು ನೀಡಿ, ತದ್ವಾರಾ, ಅನುಗ್ರಹಿಸೆಂದು ಮನವಿ ಸಲ್ಲಿಸಿರುತ್ತಾರೆ. ॥ ೨ ॥

## ಪದ್ಯ–೩

**ಮೂಲ :**

**ವಿಘ್ನರಾಜನೆ ದುರ್ವಿಷಯದೊಳು ।**
**ಮಗ್ನವಾಗಿಹ ಮನವ ಮಹದೋ ।**
**ಷಘ್ನನಂಘ್ರಿ ಸರೋಜಯುಗಳದಿ ಭಕ್ತಿಪೂರ್ವಕದಿ ॥**
**ಲಗ್ನವಾಗಲಿ ನಿತ್ಯ ನರಕ ಭ ।**
**ಯಾಗ್ನಿಗಳಿಗಾನಂಜೆ ಗುರುವರ ।**
**ಭಗ್ನಗೈಸೆನ್ನವಗುಣಗಳನು ಪ್ರತಿದಿವಸದಲಿ ॥ ೩ ॥**

**ಅವತರಣಿಕೆ :**

ದುರ್ವಿಷಗಳಲ್ಲಿ ಮನಸ್ಸು ಹೋಗದಂತೆ, ಸದಾ ಶ್ರೀ ಪರಮಾತ್ಮನಲ್ಲಿ ಮನ ಆಸಕ್ತವಾಗಲೆಂದು, ದಾಸಾರ್ಯರು ಶ್ರೀವಿಘ್ನೇಶ್ವರನನ್ನು ಪ್ರಾರ್ಥಿಸುತ್ತಾರೆ. ॥ ೩ ॥

**ಪ್ರತಿಪದಾರ್ಥ :**

**ವಿಘ್ನರಾಜನೆ** = ಭಗವದ್ಭಕ್ತರಿಗೆ ಭಗವತ್ಸೇವಾ ಮಾಡೋದರಲ್ಲಿ ಬರತಕ್ಕ ವಿಘ್ನಗಳ ಪರಿಹರಿಸುವುದರಲ್ಲಿ ಮುಖ್ಯನಾದವನೇ, **ದುರ್ವಿಷಯದೊಳು** = ದುಷ್ಟವಾದ ಪ್ರಾಪಂಚಿಕ ವಿಷಯಗಳಲ್ಲಿ, **ಮಗ್ನವಾಗಿಹ** = ಆಸಕ್ತವಾಗಿರುವೆ, **ಮನವ** = ನನ್ನ ಮನಸ್ಸನ್ನು, **ಮಹದೋಷಘ್ನ** = ಮಹಾದೋಷಗಳನ್ನು ನಾಶಮಾಡತಕ್ಕ ಶ್ರೀ ಪರಮಾತ್ಮನ, **ಅಂಘ್ರಿಸರೋಜಯುಗಳದಿ** = ಪಾದಗಳೆಂಬೋ ಕಮಲದ್ವಯಗಳಲ್ಲಿ, **ಭಕ್ತಿಪೂರ್ವಕದಿ** = ಭಕ್ತಿಪುರಸ್ಸರವಾಗಿ, **ಲಗ್ನವಾಗಲಿ** = ಸೇರಲಿ. (ಆಸಕ್ತವಾಗಲಿ), **ನಿತ್ಯ** = ಸದಾ, **ನರಕ** = ನರಕವೇನು, **ಭಯ** = ಇತರ ಭಯಗಳೇನು, **ಅಗ್ನಿಗಳಿಗೆ** = ಅಗ್ನಿಭಯವೇನು, **ಆನಂಜೆ** = ನಾನು ಅಂಜುವುದಿಲ್ಲ (ಭಯಪಡುವುದಿಲ್ಲ) **ಗುರುವರ** = ಗುರುಸ್ಥಾನಾಪನ್ನನೇ, (ದಾಸಾರ್ಯರ ಗುರುಗಳು ಶ್ರೀ ಗೋಪಾಲದಾಸರು. ಅವರು

ಗಣೇಶಾಂಶರೆಂದು ಪ್ರಸಿದ್ಧರಾಗಿದ್ದಾರೆ). **ಪ್ರತಿದಿವಸದಲಿ** = ಪ್ರತಿನಿತ್ಯವೂ, ಎನ್ನ **ಅವಗುಣಗಳನು** = ಹರಿವಾಯುಗಳಿಗೆ ಪ್ರೀತಿಕರವಲ್ಲದ ದುರ್ಗುಣಗಳನ್ನು, **ಭಗ್ನಗೈಸು** = ನಾಶಮಾಡು. ॥ ೩ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನಲ್ಲಿ ಮನ ಆಸಕ್ತವಾಗಲೆಂದು ಶ್ರೀ ವಿಘ್ನೇಶ್ವರನನ್ನು ಪ್ರಾರ್ಥಿಸುತ್ತಾರೆ.

ಭಗವದ್ಭಕ್ತರಿಗೆ ಭಗವತ್ಸೇವಾ ಮಾಡೋದರಲ್ಲಿ ಪ್ರಾಪ್ತವಾಗತಕ್ಕ ವಿಘ್ನಗಳ ಪರಿಹಾರ ಮಾಡೋದರಲ್ಲಿ ರಾಜನಾದವನೇ, ಅಭಕ್ತರಾದ ಅಸುರರ ಅಭೀಷ್ಟಸಿದ್ಧಿ ವಿಷಯದಲ್ಲಿ, ವಿಘ್ನ ಮಾಡೋದರಲ್ಲಿ ರಾಜನಾದವನೇ, ನರಕವೇನು, ಅಗ್ನಿಯೇನು-ಇವುಗಳ ಭಯಗಳಿಗೆ ನಾನು ಅಂಜೋದಿಲ್ಲ. ದುಷ್ಟವಾದ ಅಹಂ ಮಮತಾದಿಂದ ಸಹಿತವಾಗಿ, ಪ್ರಾಕೃತಧನ ಧಾನ್ಯ ವನಿತಾದಿ ವಿಷಯದೊಳು ಮುಣುಗಿ, ಅದರಲ್ಲೇ ಮಗ್ನನಾಗಿ, ಶ್ರೀ ಪರಮಾತ್ಮನ ಪಾದಮಹಾತ್ಮ್ಯ ಸ್ಮರಿಸದೆ ಇರತಕ್ಕ ಮನವೇನು ಮತ್ತು ಪ್ರತಿದಿನದಲ್ಲೂ ಶ್ರೀ ಪರಮಾತ್ಮಗೆ ಪ್ರೀತಿಕರವಲ್ಲದ ಧಾರಾ ಪುತ್ರಾದಿಗಳೇ ತಾರಕರೆಂದು ತಿಳಿದು, ಭಗವದ್ಭಕ್ತರಲ್ಲಿ ಆದರ ರಹಿತನಾಗಿ, ಅವರ ಸನ್ಮಾನಾದಿಗಳ ಮಾಡದೆ, ಧಿಕ್ಕಾರಾದಿಗಳ ಮಾಡತಕ್ಕ, ಇತ್ಯಾದಿ ಅವಗುಣಗಳೇನು-ನಾಶಮಾಡಿ, ಎನ್ನ ಮನ ಪ್ರತಿದಿನದಲ್ಲೂ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸರ್ವತೋಧಿಕ ಸ್ನೇಹಲಕ್ಷಣೋತವಾದ ಭಕ್ತಿಪೂರ್ವಕವಾಗಿ ಮಹಾದೋಷಗಳ ನಾಶಮಾಡತಕ್ಕ ಹೃದಯಾಕಾಶಗತ ಬಿಂಬರೂಪಿಯಾದ ಶ್ರೀಪರಮಾತ್ಮನ ಪಾದಗಳೆಂಬೋ ಕಮಲದ್ವಯ ಗಳಲ್ಲಿ ಮತ್ತು ಸ್ವೋತ್ತಮಗುರುಗಳೊಳಗೆ ಉತ್ತಮರಾದ, ಜೀವೋತ್ತಮರಾದ ವಾಯುದೇವರ ಪಾದದ್ವಯಗಳಲ್ಲಿ, ಆಸಕ್ತವಾಗಲಿ-ಎಂದರೆ, ನಿನ್ನ ಅನುಗ್ರಹದಿಂದ ವಿಷಯಾದಿಗಳಲ್ಲಿ ಮನ ಸಂಚರಿಸಿದ ಕಾಲಕ್ಕೂ, ಅದರಲ್ಲಿ ಜ್ಞಾಪಕ ತಪ್ಪಿಸಿ, ತದಂತರ್ಗತ ಶ್ರೀ ಭಾರತೀರಮಣ

ಮುಖ್ಯಪ್ರಾಣಾಂತರ್ಗತ ಶ್ರೀ ಪರಮಾತ್ಮನಲ್ಲಿ ಜ್ಞಾಪಕ ಇರಿಸಿ, ನಿನ್ನ ಅನುಗ್ರಹದಿಂದ ಮನ ಅಲ್ಲೇ ಲಗ್ನವಾಗಲಿ, ಇಂಥಾ ಅನುಗ್ರಹ ಮಾಡೆಂದು ತಾತ್ಪರ್ಯ. ॥ ೩ ॥

೨. ಭಾವಪ್ರಕಾಶಿಕೆ :

ವಿಷಯಸುಖಗಳೆಂದರೆ, ದಶೇಂದ್ರಿಯಗಳಿಗೆ ಮನಸ್ಸಂಬಂಧದಿಂದ ಅನುಭವಿಸುವ ಸುಖದುಃಖಗಳು. ಅಂದರೆ, ಕಣ್ಣಿಂದ ನೋಡುವುದು, ಕಿವಿಯಿಂದ ಕೇಳುವುದು-ಮೊದಲಾದವು ಜ್ಞಾನೇಂದ್ರಿಯ ವ್ಯಾಪಾರಗಳು; ಕೈಯಿಂದ ಕೆಲಸಗಳನ್ನು ಮಾಡುವುದು; ಕಾಲಿಂದ ನಡೆಯುವುದು; ಗುಹ್ಯೇಂದ್ರಿಯಾದಿಗಳಿಂದ ಸ್ತ್ರೀಯಾದಿ ಭೋಗವನ್ನನುಭವಿಸುವುದು ಮೊದಲಾದವು ಕರ್ಮೇಂದ್ರಿಯ ವ್ಯಾಪಾರವು. ಈ ಇಂದ್ರಿಯಗಳನ್ನು ಭಗವತ್ಪ್ರೀತಿಗೋಸ್ಕರವಾಗಿ ಉಪಯೋಗಿಸಿದರೆ, ಸದ್ವಿಷಯವೆಂತಲೂ, ತನ್ನ ದೇಹಸೌಖ್ಯಕ್ಕಾಗಿ ಉಪಯೋಗಿಸಿದರೆ, ದುರ್ವಿಷಯವೆಂತಲೂ ಹೆಸರಾಗುವುದು; ನಾನು ಸ್ತ್ರೀಯಾದಿ ಭೋಗದಿಂದ ಅನುಭವಿಸುವ ಸುಖವು ಎಷ್ಟು ಮಾತ್ರವೆಂದರೆ, ಸಪ್ತಮ ಸ್ಕಂಧ ಭಾಗವತದಲ್ಲಿ ಪ್ರಹ್ಲಾದನ ಸ್ತುತಿಯಲ್ಲಿ-"ಯನ್ಮೈಥುನಾದಿಗೃಹಮೇಧಿ ಸುಖಂಹಿ ತುಚ್ಛಂ ಕಂಡೂಯನೇಕರ ಯೋರಿವ ದುಃಖ ದುಃಖಂ ॥ ತೃಪ್ಯಂತಿತ ದೇಹಕೃಪಣಾಬಹುದುಃಖಭಾಗಃ ಕಂದೂತಿ ವನ್ಮನ ಸಿಜಂ ವಿಷಯೇಪ ಧೀರಃ ॥" ಗೃಹಸ್ಥಾಶ್ರಮದಲ್ಲಿದ್ದು, ಸ್ತ್ರೀಯಾದಿಭೋಗದಿಂಧ ಆಗುವ ಸುಖವನ್ನು ಗೃಹಸ್ಥರು ಸುಖವೆಂದು ಭಾವಿಸುವರು; ಆದರೆ, ಅದು ನಿಜವಾದ ಸುಖವಲ್ಲ. ದುಃಖಗೊಳಗೂ ಪರಮ ದುಃಖಕರವೆಂದು ಹೇಳಬೇಕಾಗುವುದು; ಏಕೆಂದರೆ, ಕೈಗಳಿಗೆ ತುರಿಹತ್ತಿ ತಿಂಡಿಗೆ ಆರಂಭವಾದಾಗ ಕೈಗೆ ಏನು ಸಿಕ್ಕಿದರೂ, ಅದರಿಂದ ತಿಕ್ಕಲುಪಕ್ರಮಿಸಿ, ಆ ತಿಂಡಿಯನ್ನು (ನವೆಯನ್ನು) ಪರಿಹರಿಸಿಕೊಳ್ಳುವರು. ಆದರಿಂದ ಸ್ವಲ್ಪ ಹೊತ್ತು ನವೆ ತೀರುವವರೆಗೂ ಸ್ವಲ್ಪ ಸುಖ ಕಾಣುವದು. ಅದರ ಮೇಲೆ ಆದರಿಂದ ದುರ್ನೀರು ಅಥವಾ ರಕ್ತವು ಬಂದು ಪರಮ

ದುಃಖವನ್ನನುಭವಿಸುವರು. ಇದರಂತೆ, ತಿಂಟ ಹತ್ತಿದಾಗ ತುರಿಸಿ ಕೊಳ್ಳುವವನಿಗೆ ಎಷ್ಟು ಆನಂದವೋ, ಅಷ್ಟು ಆನಂದವು ವಿಷಯ ಭೋಗದಿಂದಾಗವದು. ತದನಂತರ, ದುಃಖಪ್ರಾಪ್ತಿ ಹೇಗೋ ಹಾಗೆಯೇ ಉತ್ತರೋತ್ತರ ನರಕಾದಿಗಳಲ್ಲಿ ನಾನಾ ಯಾತನೆಯನ್ನನುಭವಿಸ ಬೇಕಾಗುವದು. ಈ ಅಲ್ಪವಾದ ವಿಷಯ ಸುಖದಿಂದ ತೃಪ್ತಿಪಡುವವರು ಕೇವಲ ತಮ್ಮ ಉದರ ಪೋಷಣ ನಿರತರಾರೋ, ಅವರೇ ಇದರಿಂದ ತೃಪ್ತರಾಗುವರೇ ಹೊರತು, ಜ್ಞಾನಿಗಳು ವಿಷಯವನ್ನಪೇಕ್ಷಿಸರು. ಧೀರನಾದವನು ತಿಂಡಿ ಹತ್ತಿದಕಾಲದಲ್ಲಿ ಸ್ವಲ್ಪ ನವೆಯನ್ನು ತಡೆದುಕೊಂಡು ಕೈಯಿಂದ ಮುಟ್ಟದೆ ಇದ್ದುಬಿಟ್ಟರೆ, ತುರಿಸುವ ಕಾಲದಲ್ಲಿ ಆಗುವ ಅಲ್ಪ ಸುಖವೂ ಇಲ್ಲ. ತದನಂತರವಾಗುವ ಅಪಾರವಾದ ದುಃಖವೂ ಇಲ್ಲ. ಇದರಂತೆ, ಕಾಮಕ್ಕೊಳಗಾಗಿ ಸ್ತ್ರೀಯಾದಿ ಭೋಗಗಳ ಅಲ್ಪಸುಖಕ್ಕಾಗಿ ಆಸೆಪಟ್ಟು, ಅನಂತರ ಅಪಾರ ದುಃಖವನ್ನನುಭವಿಸುವುದಕ್ಕಿಂತಲೂ ತಿಂಡಿಯನ್ನು ತಡೆಯುವಂತೆ, ಕಾಮವನ್ನು ತಡೆದು ಅದರಲ್ಲಿ ಪ್ರವರ್ತಿಸದಿದ್ದರೆ, ಅದರಿಂದಾಗುವ ಅಲ್ಪಸುಖವೂ, ಅನಂತರದಲ್ಲಾಗುವ ಅಪಾರವಾದ ದುಃಖವೂ ಆಗುವ ಸಂಭವವೇ ಇಲ್ಲ. ಧೀರನಾದವನು ಇಂದ್ರಿಯ ನಿಗ್ರಹ ಮಾಡಬೇಕೆಂದು ಪ್ರಹ್ಲಾದನ ವಾಕ್ಯವಿರುವದು. ಆದುದರಿಂದ, ದಾಸಾರ್ಯರು ದುರ್ವಿಷಯಗಳಲ್ಲಿ ನನ್ನ ಮನಸ್ಸು ಮಗ್ನವಾಗದೆ, ಪರಮಾತ್ಮನ ಪಾದಾರವಿಂದಗಳಲ್ಲಿ ಮನಸ್ಸು ನೆಲೆಸಿರುವಂತೆ ಮಾಡೆಂದು ಪ್ರಾರ್ಥಿಸುವರು. ಈ ಇಂದ್ರಿಯನಿಗ್ರಹವು ಸಾಮಾನ್ಯವಲ್ಲ. ಬಹಳ ಕಷ್ಟ ಸಾಧ್ಯವು. ಆದುದರಿಂದ, ಅದು ದೇವತಾಪ್ರಸಾದದಿಂದ ಆಗಬೇಕೆಂದು ವಿಘ್ನೇಶ್ವರನನ್ನು ಬೇಡಿದರೆಂಬ ತಾತ್ಪರ್ಯ. ಇದಲ್ಲದೆ ಜ್ಞಾನಿಗಳು ಸಂಸಾರವನ್ನು ಕಂಡು ಹೆದರುವಂತೆ ನರಕಕ್ಕಾಗಲಿ, ಅಗ್ನಿ ಮೊದಲಾದ ಯಾವ ವಿಧವಾದ ಬಾಧೆಯು ಬಂದರೂ, ಅವುಗಳಿಗೆ ಹೆದರುವುದಿಲ್ಲ. ಪ್ರತ್ಯುತ ಕಷ್ಟ ಬರಲೆಂದು ಬೇಡುವರು. ಸುಖ ಬಂದಾಗ ಪರಮಾತ್ಮನನ್ನು ಬಿಡದೆ ಸ್ಮರಿಸುವರು. ಭಾಗವತ ಪ್ರಥಮ ಸ್ಕಂಧದಲ್ಲಿ ಕುಂತೀ ದೇವಿಯೂ ಶ್ರೀ

ಕೃಷ್ಣನನ್ನು ಸ್ತೋತ್ರ ಮಾಡುವ ಸಂದರ್ಭದಲ್ಲಿ–"ವಿಪದಸ್ಯಂತುನಃ ಶಶ್ವತ್ತತ್ರ ತತ್ರ ಜಗತ್ಪ । ಭವತೋ ದರ್ಶನಂ ಯತ್ಸ್ಯಾತ ಪುನರ್ಭವದರ್ಶನಂ ॥" ಎಲೈ ಜಗತ್ಪತಿಯೇ ! ನಮಗೆ ಆಗಿಂದಾಗ್ಗೆ ಈಗಿನಂತೆಯೇ ಮೇಲೆ ಮೇಲೆ ವಿಪತ್ತುಗಳು ಬರುತ್ತಿರಲಿ. ಇದೇ ನನ್ನ ಕೋರಿಕೆಯು. ಏಕೆಂದರೆ ವಿಪತ್ತು ಬಂದರೆ ನಿನ್ನ ಸ್ಮರಣೆಯು ಬರುವದು. ನಿನ್ನ ಸ್ಮರಣೆಯಿಂದ ನಿನ್ನ ದರ್ಶನವಾಗುವುದು. ನಿನ್ನ ದರ್ಶನದಿಂದ, ಯಾವ ಲೋಕಕ್ಕೆ ಹೋದರೆ ಪುನರ್ಜನ್ಮವಿಲ್ಲವೋ, ಅಂತಹಾ ಮುಕ್ತಿಯು ಲಭಿಸುವದು–ಎಂದು ಕಷ್ಟವನ್ನೇ ಬೇಡಿರುವಳು. ಸಂಸಾರದಲ್ಲಿ ಬಿದ್ದು ಕಷ್ಟಪಡುವ ವಿಷಯದಲ್ಲಿ ಭಗವದ್ಭಕ್ತರು ಎಷ್ಟು ಭಯಪಡುವರೋ, ಅಷ್ಟು ಭಯವು ಮತ್ತಾವುದರಿಂದಲೂ ಅವರಿಗಿಲ್ಲ. ಪ್ರಹ್ಲಾದನ ಸ್ತೋತ್ರದಲ್ಲಿ, ಭಯಂಕರವಾದ ಉಗ್ರನರಸಿಂಹ ರೂಪವು ಇಂದ್ರಾದಿ ದೇವತೆಗಳೆಲ್ಲರೂ ಭಯಪಡುವಂತೆ ಭಯಂಕರವಾಗಿದ್ದಾಗ, ಪ್ರಹ್ಲಾದನು ಹೇಳಿದ ಮಾತೆಂತೆನೆ : "ನಾಹಂ ಭಿಬೇಮ್ಯಜಿತ ತೇತಿಭಯಾನಕಸ್ಯ ಜಿಹ್ವಾಗ್ನಿನೇತ್ರ ಭ್ರುಕುಟೀ ರಭಸೋಗ್ರದಂಷ್ಟ್ರಾತ್। ಅಂಧ್ರಸ್ರಜಃ ಕ್ಷತಜಕೇಸರ ಶಂಕುಕರ್ಣಾನ್ನಿರ್ಹ್ರಾದ ಭೀತದಿಗಿಭಾದರಿ ಭಿನ್ನಖಾಗ್ರಾತ್ ॥ ತ್ರಸ್ತೋಸ್ಮ್ಯಹಂ ಕೃಪಣವತ್ಸಲ ದುಸ್ಸಹರೋಗ್ರ ಸಂಸಾರಚಕ್ರಕದನಾತ್ಗ್ರಸತಾಂ ಪ್ರಣೀತಃ ॥" ಎಲೈ ಅಜಿತ! ನಿನ್ನ ಭಯಂಕರ ವಾದ ಈ ರೂಪದ, ನಾಲಿಗೆ, ಅಗ್ನಿಯಂತೆ ಪ್ರಜ್ವಲಿಸುವ ಕಂಗಳು, ಹುಬ್ಬುಗಳು, ಉಗ್ರವಾದ ಕೋರೆಹಲ್ಲುಗಳು; ಈ ಕರುಳುಮಾಲೆ, ದೇಹದಲ್ಲಲ್ಲಿ ನಮ್ಮ ತಂದೆಯನ್ನು ಸೀಳಿ ಅದರಿಂದ ಹೊರಟ ರಕ್ತದಿಂದ ತೋಯಲ್ಪಟ್ಟ ರಾಡಿ, ತಲೆಯ ಮೇಲೆ ಗೂಟದಂತೆ ಕಾಣುವ ಕಿವಿಗಳು ದಿಗ್ಗಜಗಳನ್ನು ಹೆದರಿಸಿದ ನಿನ್ನ ಸಿಂಹಧ್ವನಿ. ಶತ್ರುವನ್ನು ಸೀಳಿದ ಉಗುರುಗಳು–ಇವುಗಳಿಗೆಲ್ಲಾ ನಾನು ಹೆದರುವವನಲ್ಲ. ಮತ್ತಾವುದಕ್ಕೆ ಹೆದರುವೆ ? ಅಂದರೆ, ದುಃಸಹವಾದ, ರುದ್ರದೇವರನ್ನು ಸಹ ನುಂಗಿ ಬಿಡುವಷ್ಟು ಉಗ್ರವಾದ ಸಂಸಾರಚಕ್ರದಲ್ಲಿ ಎಲ್ಲ ತಗಲು ಬೇಕಾಗುವದೋ ಎಂಬ ಹೆದರಿಕೆಯು ನನ್ನನ್ನು ಕೃಶಾಂಗನನ್ನಾಗಿ ಮಾಡುವದು. ಇದರಿಂದ

ಕೃಶನ್ನೇಕವೆ ಎಂದರೆ-"ಚಿಂತಾ ಸಮೋನಾಸ್ತಿ ಶರೀರಶೋಷಣೇ"-ಎಂಬ ವಾಕ್ಯದಂತೆ ಚಿಂತೆಗೆ ಸಮವಾಗಿ ದೇಹವನ್ನು ಶುಷ್ಕ ಮಾಡುವುದು ಮತ್ತಾವುದೂ ಅಲ್ಲ. ಆದ್ದರಿಂದ ನನ್ನನ್ನೆಲ್ಲ ಸಂಸಾರದಲ್ಲಿ ಹಾಕಿಬಿಡುವಿಯೋ ಎಂಬ ಚಿಂತೆಯೇ ನನ್ನನ್ನು ಕೃಶನನ್ನಾಗಿ ಮಾಡುವುದು-ಎಂದು ಪ್ರಹ್ಲಾದನು ನರಸಿಂಹದೇವರನ್ನು ಸ್ತುತಿಸಿರುವನು. ಅದರಂತೆ, ದಾಸಾರ್ಯರು ನರಕ, ಅಗ್ನಿ-ಮೊದಲಾದುವುಗಳಿಗೆ ನಾನು ಹೆದರುವದಿಲ್ಲ. ದುರ್ವಿಷಯದಲ್ಲಿ ಮನಸ್ಸು ಎಲ್ಲಿ ಬೀಳುವದೋ ಎಂಬ ಹೆದರಿಕೆಯುಂಟೆಂದು ಅದರ ಪರಿಹಾರವನ್ನು ಬೇಡಿದರೆಂಬ ಭಾವ. ದುರ್ವಿಷಯರೂಪವೇ ಸಂಸಾರ ವೆಂದು ತಾತ್ಪರ್ಯ. ಎಲೈ ವಿಘ್ನೇಶ್ವರನೆ! ನನ್ನಲ್ಲಿ ಏನು ಅವಗುಣಗಳು ಇದ್ದರೂ, ಅವುಗಳನ್ನು ಪರಿಹರಿಸಿ ನನ್ನನ್ನುದ್ಧರಿಸು. "ಗುರುವರ"-ಎಂದು ಗಣಪತಿಯನ್ನು ಸಂಬೋಧಿಸುವರು. ಬ್ರಹ್ಮದೇವರು ಮೊದಲು ಮನುಷ್ಯೋತ್ತಮರ ಪರ್ಯಂತರ ತಾರತಮ್ಯಪ್ರಕಾರ ಎಲ್ಲರೂ ಗುರುಗಳಾದುದರಿಂದ, ಗಣಪತಿಯು ಅವನ ತಾರತಮ್ಯಪ್ರಕಾರ ಗುರುಶ್ರೇಷ್ಠ ನೆಂಬ ತಾತ್ಪರ್ಯ. ॥ ೩ ॥

**೩. ಭಾವದರ್ಪಣಟೀಕಾ :**

ವಿಘ್ನರಾಜನೇ – ಮಹಾದೋಷಘ್ನ – ಸಮಸ್ತದೋಷಪರಿಹಾರ ಮಾಡತಕ್ಕ ಪರಮಾತ್ಮನ ಅಂಘ್ರಿ-ಪಾದ. ॥ ೩ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :**

ವಿಘ್ನ ಇತಿ. ॥ ೩ ॥

## ಶ್ರೀಗುರುಹೃದಯಪ್ರಕಾಶಿಕೆ.

ವಿಘ್ನರಾಜನೆ ದುರ್ವಿಷಯವೆಂಬ ಭೋಗದಲ್ಲಿ ಮಗ್ನವಾಗಿರುವ ನನ್ನ ಮನಸ್ಸು, ಮಹಾದೋಷ ಪರಿಹಾರಕ ಶ್ರೀಹರಿಯ ಪಾದಕಮಲದಲ್ಲಿ ಭಕ್ತಿಪೂರ್ವಕ ಲಗ್ನವೆಂಬ ಆಸಕ್ತಿವುಳ್ಳದ್ದು ಮಾತ್ರ ಆಗಲಿ. ಸದಾ ನರಕಭಯವೆಂಬ ಅಗ್ನಿಗೂ ಸಹ ನಾನು ಅಂಜುವುದಿಲ್ಲ. ಗುರುವರನಾದ ಗಣಪತಿಯೇ ಸದಾ ನನ್ನ ಅವಗುಣಗಳನ್ನು ಪರಿಹರಿಸಿ ಉದ್ಧರಿಸು. ॥ ೩॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಆದಿಪೂಜಿತನಾದ ಶ್ರೀಗಣೇಶನು ಸಜ್ಜನರಿಗೆ ಒದಗುತ್ತಿರುವ ಸಕಲವಿಧವಾದ ವಿಘ್ನಗಳನ್ನೂ ಪರಿಹಾರ ಮಾಡುವನಾದ್ದರಿಂದ– **ವಿಘ್ನರಾಜನು.** ಈ ಸಾಮರ್ಥ್ಯವಿಶೇಷವು ಶ್ರೀಪರಮಾತ್ಮನಿಂದ ಗಣಪನಿಗೆ ಕೊಡಲ್ಪಟ್ಟದೆ. ಸತ್ಸಾಧನೆಗೆ ಪ್ರತಿಬಂಧಕರೂಪವಾದ ಸಮಸ್ತ ವಿಘ್ನಗಳನ್ನೂ ಪರಿಹರಿಸುವ ದಯಾಮಯನು ವಿಘ್ನರಾಜನು. ಇದರಿಂದಲೇ ಆದಿಪೂಜಿತನು.

೨. ಎಲೈ ವಿಘ್ನರಾಜ! ನನ್ನೀ ಮನಸ್ಸು ನಿರಂತರವೂ ದುಷ್ಟ ವಿಷಯಗಳಲ್ಲಿಯೇ ಆಸಕ್ತವಾಗಿದೆ. ಇದರಿಂದ ಸತ್ಸಾಧನೆಗೆ ಪ್ರತಿಕೂಲ ವಾಗಿದೆ. ಈ ಕಾರಣದಿಂದ ಕರುಣಾಮಯನಾದ ನೀನು ಸದಾ ದುರ್ವಿಷ ಗಳಲ್ಲಿಯೇ ಸೇರಿಕೊಂಡಿರುವ (ಲಗ್ನವಾಗಿಹ) ನನ್ನ ಮನಸ್ಸನ್ನು ದುರ್ವಿಷಯಗಳ ಸಂಪರ್ಕದಿಂದ ತಪ್ಪಿಸು.

೩. ಮಹತ್ತರವಾದ ದೋಷಗಳನ್ನು ಪರಿಹರಿಸುವ ನಿರ್ದೋಷಿಯಾದ ಶ್ರೀಪರಮಾತ್ಮನು **ಮಹದೋಷಘ್ನನು.** (ಮಹಾ–ಮಹತ್ತರವಾದ, ದೋಷಘ್ನ – ದೋಷಪರಿಹಾರಕ) ಅಂತಹ ಮಹದೋಷಘ್ನನಾದ ಶ್ರೀಪರಮಾತ್ಮನ ಪಾದಕಮಲಗಳಲ್ಲಿ ಸದಾ ಆಸಕ್ತವಾಗಿರುವಂತೆ ನನ್ನ ಮನಸ್ಸನ್ನು ಸೇರಿಸು. ಭಕ್ತಿಪುರಸ್ಸರವಾಗಿ ಭಗವಂತನ ಚರಣಾವಿಂದ ಯುಗ್ಮಗಳನ್ನು ಸೇವಿಸುವಂತೆ ನನ್ನನ್ನು ಅನುಗ್ರಹಿಸೆಂದು ವಿನಾಯಕನನ್ನು ಪ್ರಾರ್ಥಿಸಿರುತ್ತಾರೆ–ಭಾಗವತೋತ್ತಮರಾದ ದಾಸಾರ್ಯರು.

೪. ನಾನು ನರಕಭಯಗಳಿಗಾಗಲೀ, ಅಗ್ನಿ ಸಂಬಂಧವಾದ ಭಯಗಳಿಗಾಗಲೀ ಯಾವಾಗಲೂ ಅಂಜುವವನಲ್ಲ (ನಿತ್ಯ ನಾನಂಜೆ).

೫. ಗಣನಾಯಕನನ್ನು **ಗುರುವರ**–ಎಂದು ಸಂಬೋಧಿಸಿದ್ದಾರೆ. ಆಕಾಶಾಭಿಮಾನಿಯಾದ ಅಂಬಿಕಾತನಯನು ಶಬ್ದಗುಣಗ್ರಹಕನು. ವಿದ್ಯಾ ದಾಯಕನು. ಸಕಲೇಷ್ಟಪ್ರದನು. ಇದರಿಂದ ಗುರುವರ ಎಂದಿದ್ದಾರೆ. ಅಲ್ಲದೇ, ದಾಸರಾಯರ ಸ್ವರೂಪೋದ್ಧಾರಕರಾದ ಶ್ರೀಗೋಪಾಲದಾಸಾರ್ಯರು

ಗಣೇಶಾಂಶರು. ಇದರಿಂದಲೂ ಗುರುವರ ಶಬ್ದಪ್ರಯೋಗ ಪರಮಔಚಿ ಪೂರ್ಣವಾಗಿದೆ.

೬. ಪ್ರತಿನಿತ್ಯಕಥಾ ಎನ್ನ ದುರ್ಗುಣಗಳನ್ನು ಪರಿಹರಿಸಿ, (ಭಗ್ನಗೈಸು ಅವಗುಣಗಳನು) ಸುಜ್ಞಾನವನ್ನು ಅನುಗ್ರಹಿಸಿ, ನನ್ನ ತನುಮನ ಸಮಸ್ತ ಸಾಧನ ಸವಲತ್ತುಗಳನ್ನು ಈ ಸರ್ವೇಶ್ವರನ ಪಾದಕಂಜಗಳ ಅರ್ಪಿಸುವಂತೆ ಅನುಗ್ರಹಿಸೆಂದು ವರಸಿದ್ಧಿ ವಿನಾಯಕನನ್ನು ಭಕ್ತಿಯಿಂ ಪ್ರಾರ್ಥಿಸಿರುತ್ತಾರೆ. ॥ ೩ ॥

ಭಕ್ತಿ ಜ್ಞಾನದ ಕೊಟ್ಟು ಸಲಹುವುದು

## ಪದ್ಯ-೪

) :

**ಧನಪ ವಿಷ್ವಕ್ಸೇನ ವೈದ್ಯಾ ।**
**ಶ್ವಿನಿಗಳಿಗೆ ಸರಿಯೆನಿಪ ಷಣ್ಮುಖ ।**
**ನನುಜ ಶೇಷಶತಸ್ಥ ದೇವೋತ್ತಮ ವಿಯದ್ಗಂಗಾ ॥**
**ವಿನುತ ವಿಶ್ವೋಪಾಸಕನೆ ಸ ।**
**ನ್ಮನದಿ ವಿಜ್ಞಾಪಿಸುವೆ ಲಕುಮೀ ।**
**ವನಿತೆಯರಸನ ಭಕ್ತಿ ಜ್ಞಾನವ ಕೊಟ್ಟು ಸಲಹುವುದು ॥ ೪ ॥**

**ಹಣಿಕೆ :**

ಕುಬೇರ, ವಿಷ್ವಕ್ಸೇನ, ಅಶ್ವಿನೀ ದೇವತೆಗಳಿಗೆ ಸಮಾನ ಕಕ್ಷಾಪನ್ನನಾದ ಭ್ವೇಶ್ವರನನ್ನು ಲಕುಮೀವಲ್ಲಭನಲ್ಲಿ ಭಕ್ತಿ ಜ್ಞಾನ ಸಂಪತ್ತನ್ನು ನೀಡಿ, ಸಬೇಕೆಂದು ಪ್ರಾರ್ಥಿಸುತ್ತಾರೆ. ॥ ೪ ॥

**ದಾರ್ಥ :**

**ಧನಪ** = ಧನಾಧಿಪತಿಯಾದ ಕುಬೇರ, **ವಿಷ್ವಕ್ಸೇನ** = ವಾಯು ಎದ ವಿಷ್ವಕ್ಸೇನ, **ವೈದ್ಯಾಶ್ವಿನಿಗಳಿಗೆ** = ದೇವತೆಗಳಿಗೆ ಧನ್ವಂತ್ರಿಗಳಾದ ವೈದ್ಯರು) ಅಶ್ವಿನೀದೇವತೆಗಳಿಗೆ, **ಸರಿಯೆನಿಪ** = ಸಮಾನರೆಂದು ಸ ತಕ್ಕ, **ಷಣ್ಮುಖನನುಜ** = ರುದ್ರಪುತ್ರನಾದ ಷಣ್ಮುಖನಿಗೆ ನಾದವನು. **ಶೇಷಶತಸ್ಥ** = ೧೮ನೆಯ ಕಕ್ಷಾಪನ್ನರಾದ ಖನಾರ್ಹರರಾದ ೧೦೦ ಮಂದಿ ದೇವತೆಗಳಲ್ಲಿ ಉತ್ತಮ ಕಕ್ಷಕ್ಕೆ ೧೫ ಮಂದಿ ಹೋಗತಾ, ಅವಶಿಷ್ಟ ಸಂಖ್ಯಾಕರಾದ ೮೫ ಮಂದಿ ತಸ್ಥ ದೇವತೆಗಳು. **ದೇವೋತ್ತಮ** = ಈ ಶೇಷಶವಸ್ಥರಿಗಿಂತಲೂ ಉತ್ತಮನಾದ, **ವಿಯದ್ಗಂಗಾ** = ಆಕಾಶಗಂಗೆಯಾದ ಶ್ರೀ ರಥೀ ದೇವಿಯರಿಂದ, **ವಿನುತ** = ವಿಶೇಷರಾಗಿ ಸ್ತುತ್ಯನಾಗಿ, **ಪಾಸಕನೆ** = ವಿಶ್ವರೂಪಿ ಶ್ರೀಪರಮಾತ್ಮನನ್ನು ನಿರಂತರ ಉಪಾಸನಾ

ಮಾಡುತ್ತಿರುವವನೇ, **ಸನ್ಮನದಿ** = ವಿಷಯಾಸಕ್ತರಹಿತವಾದ ಸಮೀಚೀನ ವಾದ ಮನಸ್ಸಿನಿಂದ, **ವಿಜ್ಞಾಪಿಸುವೆ** = ನಿನ್ನನ್ನು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಏನೆಂದರೆ, **ಲಕುಮೀವನಿತೆಯರಸನ** = ಲಕ್ಷ್ಮೀರಮಣನಾದ, ಶ್ರೀಪರಮಾತ್ಮನ, **ಭಕ್ತಿ** = ದೃಢವಾದ ಭಕ್ತಿ, **ಜ್ಞಾನವ** = ನಿಸ್ಸಂಶಯವಾದ ಜ್ಞಾನವನ್ನು, **ಕೊಟ್ಟು**, **ಸಲಹುವುದು** = ನೀಡಿ ನಮ್ಮನ್ನು ಸಂರಕ್ಷಿಸು. ॥ ೪ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ವಿಘ್ನೇಶ್ವರನ್ನ ಪರಮಾತ್ಮನಲ್ಲಿ ಜ್ಞಾನಭಕ್ತಿ ವೈರಾಗ್ಯಗಳ ಕೊಟ್ಟು ರಕ್ಷಿಸಬೇಕೆಂದು ಪ್ರಾರ್ಥಿಸತಾರೆ.

ಕುಬೇರ, ವಾಯುಪುತ್ರ, ವಿಷ್ವಕ್ಸೇನ, ಧನ್ವಂತ್ರಿಗಳಾದ ಅಶ್ವಿನೀ ದೇವತೆಗಳಿಗೆ ಸಮಾನರೆಂದು ಎನಿಸತಕ್ಕ ಧನಪ ವಿಷ್ವಕ್ಸೇನ ಗಜಾನನಾದಿ ಗಳನೇ ಕಕ್ಷದವರು. ಈ ಕಕ್ಷದಲ್ಲೇ ಸೋಮಪಾನಾರ್ಹ ದೇವತೆಗಳು ನೂರು ಮಂದಿ ಉಕ್ತರಾಗಿದ್ದಾರೆ. ಅದರಲ್ಲಿ ಉತ್ತಮ ಕಕ್ಷದವರು–ಈ ಕಕ್ಷದಲ್ಲಿ ಝಡಿತ್ಯಾ ಭೋದಾರ್ಥ ಸೇರಿರೋವರಾಗಿದ್ದಾರೆ. ಇಂಥಾ ಸ್ತೋತ್ರಪ ವ್ಯತಿರಿಕ್ತ ಅವಶಿಷ್ಟ ಉಳದವರೆಂದು ತಾತ್ಪರ್ಯ. ಶತಸ್ಥರೊಳಗೆ ಉತ್ತಮರು ಹೋಗತಾ ಶೇಷ ಉಳದ ದೇವತೆಗಳಿಗಿಂತಲೂ ಕಿಂಚಿತ್ ಉತ್ತಮನಾದವ. ಇಲ್ಲಿ ಕಿಂಚಿತ್ ೧/೧೬ ಗುಣ ಸಾಂಕೇತವಲ್ಲ. ಅತ್ಯಲ್ಪ ಉತ್ತಮ ಎಂತ ತಾತ್ಪರ್ಯ. ಇಂಥಾ ರುದ್ರಪುತ್ರನಾದ ಆರು ಮುಖವವನಿಗೆ ತಮ್ಮನಾದವ. ಭಾಗೀರಥೀ ದೇವೇರಿಂದ ವಿಶೇಷಾಕರವಾಗಿ ಸ್ತುತ್ಯನಾದವ. ಹತ್ತೊಂಬತ್ತು ಮುಖವುಳ್ಳ ವಿಶ್ವರೂಪೀ ಪರಮಾತ್ಮನ್ನ ಆರಾಧಿಸತಕ್ಕವನೇ, ನಮ್ಮ ಮನೋಭಿಪ್ರಾಯ ವಿಜ್ಞಾಪನ ಮಾಡಿಕೊಂಬೆನಾವವೆಂದರೆ–ಸನ್ಮನದಿ-ಎಂದರೆ, ವಿಷಯಾಸಕ್ತಿಯೆಂಬ ದೋಷರಹಿತವಾದ ಮನದಿಂದ. ಲಕ್ಷ್ಮೀದೇವರೇ ಪತ್ನಿಯಾಗುಳ್ಳ ಸಮಸ್ತ ಲೋಕಕ್ಕೆ ಸ್ವಾಮಿಯಾದ ಶ್ರೀ ಪರಮಾತ್ಮನಲ್ಲಿ ನಿಶ್ಚಂಚಲ ಭಕ್ತಿ, ಅಂಥಾದ್ದೇ ಜ್ಞಾನ–ಇದೇವೇ ಕೊಟ್ಟು, ರಕ್ಷಿಸಬೇಕೆಂದು ತಾತ್ಪರ್ಯ. ॥ ೪ ॥

**ಭಾವಪ್ರಕಾಶಿಕೆ :**

ಶ್ರೀವಿಘ್ನೇಶ್ವರನು ಕುಬೇರ, ವಿಷ್ವಕ್ಸೇನ, ವೈದ್ಯರಾದ ಅಶ್ವಿನೀ ದೇವತೆಗಳು–ಇವರಿಗೆ ತಾರತಮ್ಯದಲ್ಲಿ ಸಮನೆನಿಸುವನು. ಉಕ್ತಶೇಷ ಶತರೆಂಬ ೮೫ ದೇವತೆಗಳಗಿಂತಲೂ ಉತ್ತಮನು. ಗಂಗಾದೇವಿಯರಿಂದ ನಮಸ್ಕೃತನೆಂದ ಮೇಲೆ ಆಕೆಯಕಿಂತಲೂ ಪರಮೋತ್ತಮನೆಂದು ಹೇಳಿದಂತಾಯಿತು. ವಿಘ್ನೇಶ್ವರನು ತನ್ನಂತರ್ಯಾಮಿಯಾದ ವಿಶ್ವಂಭರ ಮೂರ್ತಿಯನ್ನು ಉಪಾಸನೆ ಮಾಡುತ್ತಿರುವನು. ಇಂತಹಾ ಗುಣಗಳನ್ನು ಎಲೈ ಗಣಪತೇ! ಲಕ್ಷ್ಮೀಪತಿಯಾದ ಪರಮಾತ್ಮನಲ್ಲಿ ದೃಢವಾದ ಭಕ್ತಿ, ಜ್ಞಾನವ ಕೊಟ್ಟು ಸಲಹೆಂದು, ಏಕಾಗ್ರ ಚಿತ್ತನಾಗಿ ವಿಜ್ಞಾಪನೆ ಮಾಡಿಕೊಳ್ಳುವೆನು. ॥ ೪ ॥

**೩. ಭಾವದರ್ಪಣ ಟೀಕಾ :**

ಶೇಷಶತಸ್ಥದೇವೋತ್ತಮ–ಉಳಿದ ಶತಸ್ಥರಾಪೇಕ್ಷಯಾ ಯತ್ಕಿಂಚಿತ್ ಉತ್ತಮನೆಂದರ್ಥ. ಈ ವಿಷಯ ಹಿಂದೆ ತಾರತಮ್ಯದಲ್ಲಿ ವಿಶದ ಮಾಡಿ ಆದೆ. ಅಲ್ಲೇ ನೋಡತಕ್ಕದ್ದು. ವಿಶ್ವ–ಇತಿ. ವಿಷ್ಣುನಾಮ ಸಹಸ್ರನಾಮಗಳಿಗೆ ಆದಿಮೂರ್ತಿಯಾದ ವಿಶ್ವಮೂರ್ತಿ–ಎಂತ ಭಕ್ತಿಪೂರ್ವಕ ಉಪಾಸನಾ ಮಾಡಿದ್ದರಿಂದ, ಈತನು ಆದಿಪೂಜಿತ ಅರ್ಹನೆಂಬರ್ಥ. ॥ ೩ ॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

"ಸಮಾನಾಂ ವಿಷಮಾ ಪೂಜಾ" ಇತ್ಯವಲೋಕ್ಯ, ಅರ್ಚನಾಂ ತಾರತಮ್ಯಂಬ್ರೂತೇ–ಧನಪ ಇತಿ ॥ ೪ ॥

## ಕನ್ನಡಾರ್ಥ

"ಸಮಾನಾಂ ವಿಷಮಾ ಪೂಜಾ"–ಎಂಬ ಪ್ರಮಾಣಗಳು ಹೇಳುವಂತೆ, ಅರ್ಚಕರ ತಾರತಮ್ಯವನ್ನು–"ಧನಪ" ಈ ಪದ್ಯದಿಂದ ಹೇಳುತ್ತಾರೆ.

## ಶ್ರೀಗುರುಹೃದಯಪ್ರಕಾಶಿಕೆ

ಧನಪನೆಂಬ ಕುಬೇರ, ದೇವವೈದ್ಯರಾದ ಅಶ್ವಿನೀದೇವತೆಗಳು, ವಿಷ್ವಕ್ಸೇನನಿಗೆ ಸಹಾ ನೀನು ಸಮಾನನು ಎನ್ನಿಸಿಕೊಳ್ಳುವೆ. ಶೇಷಶತಸ್ಥರೆಂಬ

೮೫ ಜನ ದೇವತೆಗಳಿಂದ ಉತ್ತಮನಾದವನೇ, ಆಕಾಶ ಗಂಗಾದೇವಿಯಿಂದ ಸಂಸ್ತುತನಾದವನೇ, ವಿಶ್ವಮೂರ್ತಿ ಶ್ರೀಹರಿಯ ಉಪಾಸನೆ ಮಾಡುವವನೇ, ಸನ್ಮಸ್ಸಿನಿಂದ ವಿಜ್ಞಾಪಿಸುತ್ತೇನೆ-ಲಕ್ಷ್ಮೀಪತಿಯ ಭಕ್ತಿ ಜ್ಞಾನವನ್ನು ಕೊಟ್ಟು ರಕ್ಷಿಸು. ॥ ೪ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ವಿಘ್ನೇಶ್ವರನು (೧) ಸಂಪತ್ತಿಗೆ ಅಧಿಪತಿಯಾದ **ಕುಬೇರ** (ಉತ್ತರದಿಕ್ಕಿನ ಅಧಿಪತಿ). (೨) ವಾಯುಪುತ್ರನಾದ **ಶ್ರೀ ವಿಷ್ವಕ್ಸೇನ** ಮತ್ತು (೩) ನಾಸತ್ಯ ಮತ್ತು ದ್ರಸನಾಮಕರಾದ **ಅಶ್ವಿನೀ ದೇವತೆಗಳು**-ಇವರು ಸುರವೈದ್ಯರು.

**ನಾಸಿಕೇಂದ್ರಿಯಾಭಿಮಾನಿಗಳು** ಗಂಧಗುಣಗ್ರಾಹಕರು (ವೈದ್ಯಾಶ್ವಿನಿಗಳಿಗೆ).

ಈ ೩ ಮಂದಿಗಳಿಗೆ ಸಮಾನಕಕ್ಷಾಪನ್ನನಾಗಿದ್ದಾನೆ (೧೮ನೆಯ ಕಕ್ಷ)

೨. ೧೮ನೆಯ ಕಕ್ಷಾಪನ್ನರಾದ ೧೦೦ ಮಂದಿ ಸೋಮಪಾನಾರ್ಹರಾದ ದೇವತಾವರ್ಗವಿದೆ. ಇವರಿಗೆ **ಶತಸ್ಥರೆಂದು** ಹೆಸರು. ಈ ೧೦೦ ಮಂದಿಯಲ್ಲಿ ೧೫ ಜನರು ಉತ್ತಮ ರಕ್ಷಾಪನ್ನರು. ೧೦೦ ಸಂಖ್ಯೆಯಲ್ಲಿ ೧೫ ಹೋಗಲು, ಅವಶಿಷ್ಟಸಂಖ್ಯೆ ಸಂಖ್ಯೆ-೮೫. ಈ ೮೫ ಮಂದಿಗೆ **ಶೇಷಶತಸ್ಥರೆಂದು** ಹೆಸರು.

ವಿನಾಯಕನು ಈ ಶೇಷಶತಸ್ಥರಿಗಿಂತ ಕಿಂಚಿತ್ ಉತ್ತಮನು. ಕಿಂಚಿತ್-ಎಂದರೆ, ಅತ್ಯಲ್ಪವಾದ ೧/೧೬ ಗುಣದಿಂದ ಉತ್ತಮನು.

೩. ತಾರಕಾಸುರ ಸಂಹಾರಿಯಾದ ಕುಮಾರಸ್ವಾಮಿಗೆ ಷಣ್ಮುಖನೆಂದು ಹೆಸರು. ಶರವಣವನದಲ್ಲಿ ಪಾರ್ವತೀ ಪರಮೇಶ್ವರರಿಂದ ಜನಿತನಾದ ಈ ಶಿಶುವಿಗೆ ಕೃತ್ತಿಕಾ ನಕ್ಷತ್ರಾಭಿಮಾನಿ ೬ ಮಂದಿ ದೇವತೆಗಳು ಸ್ತನ್ಯಪಾನ ಮಾಡಿಸಿದರು. ಇದರಿಂದ ಅವನಿಗೆ ಕಾರ್ತಿಕೇಯನೆಂದು ಹೆಸರು ಬಂದಿತು. ಆಗ ಆ ಶಿಶುವು ಆರುಮುಖಗಳಿಂದ ಸ್ತನ್ಯಪಾನ ಮಾಡಿತು. ಇದರಿಂದ, ಆರು ಮುಖಗಳು. ಈ ಕಾರಣದಿಂದ **ಷಣ್ಮುಖನೆಂಬ** ನಾಮ. (ಷಟ್+ಮುಖ= ಷಣ್ಮುಖ. ಅನನಾಸಿಕಸಂಧಿ-ಆರುಮೊಗದವನು).

ಗಣಪತಿಯು ಷಣ್ಮುಖನ ತಮ್ಮನು. ಇದರಿಂದ ಷಣ್ಮುಖನನುಜನು.

೫. ವಿಯತ್–ಆಕಾಶ. ಗಂಗಾ–ಗಂಗಾನದಿ. ವಿಯದ್ಗಂಗಾ–ಎಂದರೆ, ಆಕಾಶಗಂಗೆ. ತ್ರಿವಿಕ್ರಮರೂಪಿಯಾದ ಶ್ರೀಪರಮಾತ್ಮನ ಪಾದನಖಾಗ್ರದಿಂದ ಉದ್ಭೂತಳಾದ ಭಾಗೀರಥೀ ಆಕಾಶದಲ್ಲಿ ಜನಿಸಿ, ಸತ್ಯಲೋಕ–ಸ್ವರ್ಗಲೋಕಗಳಲ್ಲಿ ಹರಿದಳು. ಇದರಿಂದ ಭಾಗೀರಥಿಗೆ **"ವಿಯದ್ಗಂಗಾ"**–ಎಂತ ನಾಮ.

ವಿಯದ್ಗಂಗಾ ನಾಮಕಳಾದ ಭಾಗೀರಥಿಯಿಂದ ಸಂಸ್ತುತ್ಯಮಾನನು. ಇದರಿಂದ, ಗಂಗಾದೇವಿಗಿಂತ ತಾರತಮ್ಯದಲ್ಲಿ ಉತ್ತಮನೆಂದರ್ಥ.

೫. ವಿಶ್ವ–ವಷಟ್ಕಾರಾದಿ ಒಂದು ಸಾವಿರ ನಾಮಗಳು–**ಶ್ರೀ ವಿಷ್ಣು ಸಹಸ್ರ ನಾಮಾವಳಿ** ಇದರಲ್ಲಿ ಪ್ರಪ್ರಥಮನಾಮ ವಿಶ್ವ. ಅಂತಹ ವಿಶ್ವನಾಮಕ ಶ್ರೀಪರಮಾತ್ಮನ ಉಪಾಸಕನು ವಿಘ್ನೇಶ್ವರನು. ಇದರಿಂದ ಅಂಬಿಕಾತನಯನು ಆದಿಪೂಜಿತನು. **ವಿಶ್ವನಾಮಕ** ಶ್ರೀಹರಿಯು ಪ್ರತಿಬೇತನದ ಬಲಗಣ್ಣಿನ ತುದಿಯಲ್ಲಿದ್ದಾನೆ. ಆ ಮುಖಗಳಲ್ಲಿ ಮಧ್ಯಮುಖವು **ಗಜಮುಖವು**. ಪ್ರತಿಬಿಂಬಭೂತನಾದ ವಿನಾಯಕ **ಗಜಾನನನು**. ಶ್ರೀಹರಿಯ ನಾಭೀ ಕಮಲಸ್ಥಿತ ಆಕಾಶಕ್ಕೆ ಅಭಿಮಾನಿಯು. ವಿಶ್ವಂಭರ ಮೂರ್ತಿಯು ಸಕಲ ಅಸೃಜ್ಯ, ಮುಕ್ತ ಮುಕ್ತಚೇತನರನ್ನು ತನ್ನ ಮಹಾಗರ್ಭದಲ್ಲಿ ಧರಿಸಿದ್ದಾನೆ. ಇದರಿಂದ, ವಿಶ್ವೋಪಾಸನಾಕನಾದ ವಿಘ್ನೇಶ್ವರನ ಉದರ ದೊಡ್ಡದಾಗಿದೆ. ಇದರಿಂದ ಲಂಬೋದರನೆಂದು ಗಣೇಶನಿಗೆ ಹೆಸರು.

೬. ಕುಬೇರ–ವಿಷಕ್ಸೇನ–ಅಶ್ವಿನೀದೇವತೆಗಳಿಗೆ ಸಮನೆನಿಸುವ, ಶೇಷಶತಸ್ಥರಿಗಿಂತ ಕಿಂಚಿತ್ ಉತ್ತಮನಾದ, ಗಂಗಾವಿನುತನಾದ, ವಿಶ್ವೋಪಾಸಕನಾದ ಶ್ರೀಗಣನಾಯಕನಲ್ಲಿ ದಾಸರಾಯರು ಸಮೀಚೀನವಾದ ಭಕ್ತಿಪುರಸ್ಸರವಾಗಿ ಮನಸಾ ಪ್ರಾರ್ಥಿಸುತ್ತಾರೆ. "ಹೇ ಹೇರಂಬನೇ, ಲಕ್ಷ್ಮೀರಮಣನಲ್ಲಿ ದೃಢವಾದ ಸದ್ಭಕ್ತಿ, ಸಮೀಚೀನವಾದ ಜ್ಞಾನ, ವಿಷಯಗಳಲ್ಲಿ ವಿರಕ್ತಿಸಂಪತ್ತನ್ನು ನೀಡಿ ಅನುಗ್ರಹಿಸು"–ಎಂದು ಪ್ರಾರ್ಥಿಸಿದ್ದಾರೆ. ॥ ೪ ॥

ಕರುಣಿಸ್ಪುದೆಮಗೆ ಸನ್ಮತಿಯಾ

## ಪದ್ಯ-೫

**ಮೂಲ :**

**ಚಾರುದೇಷ್ಣಾಹ್ವಯನೆನಿಸಿ ಅವ ।**
**ತಾರ ಮಾಡಿದೆ ರುಕ್ಮಿಣೀಯಲಿ ।**
**ಗೌರಿಯರಸನ ವರದಿ ಉದ್ಧಟರಾದ ರಾಕ್ಷಸರ ॥**
**ಶೌರಿಯಾಜ್ಞದಿ ಸಂಹರಿಸಿ ಭೂ ।**
**ಭಾರವಿಳುಹಿದ ಕರುಣಿ ಕೃಷ್ಣಾ ।**
**ದಾರವಿಂದಕೆ ನಮಿಪೆ ಕರುಣಿಪುದೆಮಗೆ ಸನ್ಮತಿಯ ॥ ೫ ॥**

**ಅವತರಣಿಕೆ :**

ಶ್ರೀವಿಘ್ನೇಶ್ವರನ ಮಹಾತ್ಮೆಯನ್ನು ಇನ್ನೂ ತಿಳಿಸುತ್ತಾರೆ. ॥ ೫ ॥

**ಪ್ರತಿಪದಾರ್ಥ :**

**ರುಕ್ಮಿಣೀಯಲಿ** = ಶ್ರೀ ಕೃಷ್ಣನ ಪತ್ನಿ ರುಕ್ಮಿಣೀದೇವಿಯಲ್ಲಿ, **ಚಾರುದೇಷ್ಣ** = ಚಾರುದೇಷ್ಣ-ಎಂಬ, **ಆಹ್ವಯನೆನಿಸಿ** = ಹೆಸರುಳ್ಳವನಾಗಿ, **ಅವತಾರ ಮಾಡಿದೆ** = ಅವತಾರ ಮಾಡಿರುವೆ. **ಗೌರಿಯರಸನ** = ಪಾರ್ವತೀಪತಿಯಾದ ರುದ್ರದೇವರ, **ವರದಿ** = ವರದಿಂದ, **ಉದ್ಧಟರಾದ** = ಮದೋನ್ಮತ್ತರಾದ, **ರಾಕ್ಷಸರ** = ಭಗವದ್ವೇಷಿಗಳಾದ ದೈತ್ಯರನ್ನು, **ಶೌರಿಯಾಜ್ಞದಿ** = ಶ್ರೀಕೃಷ್ಣನ ಆದೇಶದಂತೆ, **ಸಂಹರಿಸಿ** = ಸಂಹಾರ ಮಾಡಿ, **ಭೂಭಾರವ** = ಭೂಭಾರವನ್ನು (ಅಧರ್ಮಿಗಳೇ ಭೂಭಾರರು), **ಇಳುಹಿದ** = ಇಳಿಸಿದವನಾಗಿ (ಭೂಭಾರ ಹರಣಕಾರ್ಯ), **ಕರುಣಿ** = ದಯಾಳುವಾದ ವಿನಾಯಕನೇ, **ಕೃಷ್ಣಾಪಾದಾರವಿಂದಕೆ** = ನಿನ್ನ ಚರಣಕಮಲಗಳಿಗೆ, **ನಮಿಪೆ** = ವಂದಿಸುವೆ. **ಎಮಗೆ** = ನಮ್ಮಗಳಿಗೆ, **ಸನ್ಮತಿಯ** = ಸಮೀಚೀನವಾದ ಜ್ಞಾನವನ್ನು, **ಕರುಣಿಪುದು** = ಅನುಗ್ರಹಿಸುವವನಾಗು. ॥ ೫ ॥

## ವ್ಯಾಖ್ಯಾನಗಳು

**ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :**

ಶ್ರೀ ಕೃಷ್ಣದೇವರ ಪತ್ನಿಯಾದ ರುಕ್ಮಿಣೀ ದೇವಿಯಲ್ಲಿ ಚಾರುದೇಷ್ಣ–ಎಂತ ನಾಮವುಳ್ಳವನಾಗಿ ಅವತಾರ ಮಾಡೋವನಾದಿ, ಅವತಾರ ಮಾಡಿದವನಾಗಿ ಪಾರ್ವತೀ ಪತೀರುದ್ರದೇವರ ವರದಿಂದ ಗರ್ವ ಅಹಂಕಾರ ಮದದಿಂದ ಸೊಕ್ಕಿದ ಭಗವದ್ವೇಷಿಗಳಾದ ದೈತ್ಯರನ್ನ ಶ್ರೀಕೃಷ್ಣದೇವರ ಆಜ್ಞಾದಿಂದ ಸಂಹಾರ ಮಾಡಿ ಭೂಮಿಯಲ್ಲಿ ಸಜ್ಜನರಿಗೆ ಭಾರಭೂತವಾದ ಅಧರ್ಮಗಳ ಸಜ್ಜನರ ಶಿರದಲ್ಲಿ ಇದ್ದದ್ದರನ್ನ ಇಳಿಸಿದವನಾಗಿ, ಭಗವದ್ಭಕ್ತರಲ್ಲಿ ಪರಮಾಂತಃಕರಣಾದ, ವಿನಾಯಕನೇ ನಿನ್ನ ಪಾದಕಮಲಕ್ಕೆ ವಂದನ ಮಾಡುವೆ. ನಮ್ಮಗಳಿಗೆ ಸಮೀಚೀನವಾದ ಜ್ಞಾನ ಭಕ್ತಿ ವೈರಾಗ್ಯದಿಂದ ಯುಕ್ತವಾದ ಬುದ್ಧಿಯನ್ನು ಕರುಣಾದಿಂದ ಕೊಡೋವನಾಗಬೇಕು. ॥ ೫ ॥

**೩. ಭಾವಪ್ರಕಾಶಿಕೆ :**

ರುಕ್ಮಿಣಿಯಲ್ಲಿ ಚಾರುದೇಷ್ಣನೆಂದು ಗಣಪತಿಯು ಅವತರಿಸಿದ ವಿಷಯವು ೨೧ನೆಯ ಬೃಹತ್ತಾರತಮ್ಯ ಅಥವಾ ಅಂಶಾವತರಣ ಸಂಧಿಯ ೨೪ನೆಯ ಪದ್ಯದ ತಾತ್ಪರ್ಯದಲ್ಲಿ ನಿರ್ಣಯಾದಿಗಳ ಆದಾರ ಪ್ರಮಾಣಗಳ ಸಹಿತ ಬರೆಯಲ್ಪಟ್ಟದೆ. "ಚಾರುದೇಷ್ಣಃ ಕೃಷ್ಣಸುತೋ ಸತೋಪೂರ್ವಂ ವಿನಾಯಕಃ"–ಎಂಬ ಅಂಶಾವತರಣದ ವಾಕ್ಯವೂ ಇದಕ್ಕೆ ಆಧಾರವಾಗಿರುವುದು. ಚಾರುದೇಷ್ಣನಾಗಿರುವ ಕಾಲದಲ್ಲಿ ರುದ್ರದೇವರ ವರದಿಂದ ಮರಣವಿಲ್ಲದೆ ದರ್ಪಪೂರ್ಣವಾಗಿದ್ದ ರಾಕ್ಷಸ ಸ್ವಭಾವರಾದ ರಾಜರುಗಳನ್ನು ಕೃಷ್ಣನ ಅಪ್ಪಣೆಯ ಮೇರೆಗೆ ಸಂಹರಿಸಿ ಭೂಭಾರವನ್ನು ಪರಿಹರಿಸಿರುವೆ! ಎಲೈ ಕರುಣಾ ಸಮುದ್ರನೆ! ನಿನ್ನ ಪಾದಾರವಿಂದಗಳಿಗೆ ನಮಸ್ಕಾರ ಮಾಡುವೆನು. ನಮಗೆ ಭಗವದ್ವಿಷಯವಾಗಿ ಮನಸ್ಸು ಸ್ಥಿರವಾಗಲಿ ಎಂದು ಬೇಡಿಕೊಳ್ಳುವೆನು. ॥ ೫ ॥

**೪. ಭಾವದರ್ಪಣ ಟೀಕಾ :**

ಚಾರುದೇಷ್ಣ-ಶ್ರೀಕೃಷ್ಣನ ಪುತ್ರ ಎಂಬರ್ಥ. "ಚಾರುದೇಷ್ಣಃ ಕೃಷ್ಣಸುತೋ ಸಮಪೂರ್ವ ವಿನಾಯಕ"-ಇತಿ ಅಂಶಾವೇಶಾವತಾರ **ಶೌರೇಃ॥** ಶೌರೀ - ಶೂರಸ್ಯಾಪ ತ್ಯಂ ಪುಮಾನ್ - ಶೌರಿಃ - ಶೂರರಾಯನ ಮೊಮ್ಮಗನೇ - ಶ್ರೀಕೃಷ್ಣ ಎಂಬರ್ಥ. ॥ ೫ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :**

"ಚಾರುದೇಷ್ಣ"-ಇತಿ ॥ ಮಾನಮುಕ್ತಂ ಪೂರ್ವಮ್. ॥ ೫ ॥

## ಕನ್ನಡಾರ್ಥ

ಗಣಪತಿಯು ಶ್ರೀಕೃಷ್ಣನಿಗೆ ರುಕ್ಮಿಣೀದೇವಿಯಲ್ಲಿ ಚಾರುದೇಷ್ಣನೆಂಬ ಮಗನಾಗಿ ಅವತರಿಸಿದನು. ಈ ವಿಷಯದಲ್ಲಿಯೂ ಈ ಪದ್ಯದಲ್ಲಿ ಹೇಳಿದ ಉಳಿದ ವಿಷಯಗಳಲ್ಲಿಯೂ ಹಿಂದೆ ಪ್ರಮಾಣಗಳನ್ನು ಉದಾಹರಿಸಿರುತ್ತದೆ. ॥ ೫ ॥

## ಶ್ರೀಗುರುಹೃದಯಪ್ರಕಾಶಿಕೆ

ಚಾರುದೇಷ್ಣನೆಂದು ಹೆಸರುಳ್ಳವನಾಗಿ ರುಕ್ಮಿಣೀದೇವಿಯಲ್ಲಿ ಶ್ರೀಕೃಷ್ಣನಿಂದ ಅವತರಿಸಿದೆ. ಗೌರೀಅರಸ ರುದ್ರನ ವರದಿಂದ ಉದ್ಧಟರೆಂದರೆ, ಗರ್ವಿತರಾದ ರಾಕ್ಷಸರನ್ನು ಶೌರಿಯೆಂಬ ಶ್ರೀಕೃಷ್ಣನ ಆಜ್ಞೆಯಿಂದ ಸಂಹರಿಸಿ, ಭೂಭಾರ ಪರಿಹರಿಸಿದ ಕರುಣಿಯೇ, ನಿನ್ನ ಪಾದಾರವಿಂದಕ್ಕೆ ನಮಸ್ಕರಿಸುವೆನು. ನಮಗೆ ಸನ್ಮತಿಯನ್ನು ಕೊಡು. ॥ ೫ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀವಿನಾಯಕನು ದ್ವಾಪರಯುಗದಲ್ಲಿ ಶ್ರೀಕೃಷ್ಣ ಪುತ್ರನಾಗಿ ಶ್ರೀರುಕ್ಮಿಣೀದೇವಿಯಲ್ಲಿ **ಚಾರುದೇಷ್ಣ**-ಎಂಬ ಹೆಸರಿನಿಂದ ಅವತಾರ **ಮಾಡಿದನು.**

**"ಚಾರುದೇಷ್ಣಃ** ಕೃಷ್ಣಸುತೋ ಸಮಪೂರ್ವಂ ವಿನಾಯಕಃ"-ಎಂದು **ಅಂಶಾವತಾರಣ ಗ್ರಂಥದ ವಾಕ್ಯವು.**

೨. ಚಾರುದೇಷ್ಣನು ಶ್ರೀರುದ್ರದೇವರ ವರದಿಂದ ಮದೋನ್ಮತ್ತರಾಗಿದ್ದ ಅನೇಕ ಮಂದಿ ದೈತ್ಯರನ್ನು ಶ್ರೀಕೃಷ್ಣನ ಅಪ್ಪಣೆಯಂತೆ, ಸಂಹಾರ ಮಾಡಿದನು. ಆ ರಾಕ್ಷಸರೆಲ್ಲರೂ ಮರಣ ಬಾರದಂತೆ ಶ್ರೀರುದ್ರದೇವರಲ್ಲಿ ವರವನ್ನು ಪಡೆದಿದ್ದರು. ಅವರು ಅಜ್ಞಾನದಿಂದ ಶ್ರೀರುದ್ರದೇವರೇ ಲಯಕಾರನೆಂದು ತಿಳಿದು, ಈ ವರವನ್ನು ಬೇಡಿ, ಪಡೆದಿದ್ದನು. ರುದ್ರದೇವರು ಲಯಕಾರಕರಲ್ಲವಾದ ಕಾರಣದಿಂದ, ಚಾರುದೇಷ್ಣನ ದ್ವಾರಾ, ಶ್ರೀಕೃಷ್ಣನೇ ಅವನಲ್ಲಿ ಆವಿಷ್ಟನಾಗಿದ್ದು, ಆ ದೈತ್ಯರನ್ನೆಲ್ಲಾ ಸಂಹರಿಸಿದನು.

೩. ಶೂರಸೇನ ಮಹರಾಜನ ಮೊಮ್ಮಗನಾದ್ದರಿಂದ, ಶ್ರೀಕೃಷ್ಣನಿಗೆ-ಶೌರೀ-ಎಂದು ಹೆಸರು.

"ಶೂರಸ್ಯಾಪತ್ಯಂ ಪುಮಾನ್ ಶೌರಿಃ"-ಎಂಬ ವಿಗ್ರಹವಾಕ್ಯದಂತೆ.

೪. ರುದ್ರದೇವರ ವರದಿಂದ ಸೊಕ್ಕಿದ ಆ ದೈತ್ಯರು ಭೂಭಾರವಾಗಿದ್ದರು. ಅಧರ್ಮಿಗಳಾದ ಆ ದೈತ್ಯರ ಸಂಹಾರದಿಂದ ಭೂಭಾರ ಇಳುಹಿದಂತಾಯಿತು.

೫. ಇಂತಹ ಭೂಭಾರವಿಳುಹಿದ ಚಾರುದೇಷ್ಣನು ಪರಮಕರುಣಾಳು. (ಭಕ್ತರ ವಿಷಯದಲ್ಲಿ) ಅವನ ಪಾದಾರವಿಂದಗಳಿಗೆ ದಾಸಾರ್ಯರು ಎರಗಿ ಪ್ರಾರ್ಥಿಸುತ್ತಾರೆ-ಅವರಿಗೆ ಸಮೀಚೀನವಾದ ಜ್ಞಾನವನ್ನು ಕರುಣಿಸಲೆಂದು.

॥ ೫ ॥

ತೃಪ್ತಿಯ ಪಡಿಸು ಸಜ್ಜನರ



## ಪದ್ಯ-೬

**ಮೂಲ :**

**ಶೂರ್ಪಕರ್ಣದ್ವಯ ವಿವರ್ಜಿತ ಕಂ |**
**ದರ್ಪಶರ ಉದಿತಾರ್ಕಸನ್ನಿಭ |**
**ಸರ್ಪವರ ಕಟಿಸೂತ್ರ ವೈಕೃತಗಾತ್ರ ಸುಚರಿತ್ರ ||**
**ಸ್ವರ್ಪಿತಾಂಕುಶ ಪಾಶಕರ ಖಳ |**
**ದರ್ಪಭಂಜನ ಕರ್ಮಸಾಕ್ಷಿಗ |**
**ತರ್ಪಕನು ನೀನಾಗಿ ತೃಪ್ತಿಯ ಪಡಿಸು ಸಜ್ಜನರ || ೬ ||**

**ಅವತರಣಿಕೆ :**

ಜ್ಞಾನ, ಭಕ್ತ್ಯಾದಿಗಳನ್ನು ಅನುಗ್ರಹಿಸಿ, ಸಜ್ಜನರನ್ನೂ ತೃಪ್ತಿಪಡಿಸೆಂದು ದಾಸಾರ್ಯರು ಪ್ರಾರ್ಥಿಸುತ್ತಾರೆ. || ೬ ||

**ಪ್ರತಿಪದಾರ್ಥ :**

**ಶೂರ್ಪ** = ಮೊರಗಳಂತೆ, **ಕರ್ಣದ್ವಯ** = ಅಗಲವಾದ ಎರಡು ಕಿವಿಗಳುಳ್ಳ (ಆನೆಯಂತೆ ಮುಖ-ಸೊಂಡಿಲು ಮತ್ತು ಕಿವಿಗಳು). **ವಿವರ್ಜಿತ** = ಜಯಿಸಲ್ಪಟ್ಟ, **ಕಂದರ್ಪಶರ** = ಮನ್ಮಥನ ಬಾಣವುಳ್ಳವನು, ಅಂದರೆ, ಜಿತೇಂದ್ರಿಯನು-ಎಂಬರ್ಥ. **ಉದಿತಾರ್ಕ** = ಆಗ ತಾನೇ ಹುಟ್ಟುತ್ತಿರುವ ಸೂರ್ಯನಂತೆ (ಬಾಲಸೂರ್ಯ), **ಸನ್ನಿಭ** = ದೇಹಕಾಂತಿ ಉಳ್ಳವನು. **ಸರ್ಪವರ** = ಶ್ರೇಷ್ಠವಾದ "ವಿರಚ"ನಾಮಸರ್ಪವನ್ನೇ, **ಕಟಿಸೂತ್ರ** = ಉಡಿದಾರವನ್ನಾಗಿ ಉಳ್ಳವನು. **ವೈಕೃತಗಾತ್ರ** = ವಿಕಾರವಾದ ದೇಹವುಳ್ಳವನು (ಆನೆಯಂತೆ ಮುಖ-ಮನುಷ್ಯರಂತೆ ಶರೀರ) **ಸುಚರಿತ್ರ** = ಸಮೀಚೀನವಾದ ಚರಿತ್ರೆ ಉಳ್ಳವನು, **ಅಂಕುಶ** = ಆನೆಯನ್ನು ನಿಯಂತ್ರಿಸುವ ಅಂಕುಶಾಯುಧ, **ಪಾಶ** = ಹಗ್ಗ. **ಸ್ವರ್ಪಿತ ಕರ** = ಧರಿಸಿದ ಕೈಯುಳ್ಳವನು. ಅಂದರೆ, ಒಂದು ಕೈಯಲ್ಲಿ ಅಂಕುಶ, ಇನ್ನೊಂದರಲ್ಲಿ ಪಾಶಧಾರಿ. **ಖಳದರ್ಪಭಂಜನ** = ದೈತ್ಯರ (ದುಷ್ಟರ) ಸೊಕ್ಕನ್ನು ಅಡಗಿಸಿದವನು.

**ಕರ್ಮಸಾಕ್ಷಿಗ** = ಜೀವರು ಮಾಡುವ ಉಭಯಕರ್ಮಗಳಿಗೂ ಸಾಕ್ಷಿಯಾಗಿ, **ತರ್ಪಕನು ನೀನಾಗಿ** = ಭಗವದ್ವಿಷಯಗಳನ್ನು ನಿನ್ನ ಭಕ್ತರಿಗೆ ಉಣಿಸಿ, (ಅನುಗ್ರಹಿಸಿ) **ಸಜ್ಜನರ** = ಭಗವದ್ಭಕ್ತರಾದ ಸುಜನರನ್ನು **ತೃಪ್ತಿಯ ಪಡಿಸು** = ಮನಸ್ಸಿಗೆ ತೃಪ್ತಿಯನ್ನು ನೀಡುವವನಾಗು. ॥ ೬ ॥

## ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀ ವಿಘ್ನೇಶ್ವರನು ಜ್ಞಾನಭಕ್ತ್ಯಾದಿಗಳಿಂದ ಸಜ್ಜನರ ತೃಪ್ತಿಪಡಿಸೆಂದು ಪ್ರಾರ್ಥಿಸುತಾರೆ.

ಮೊರಗಳೋಪಾದಿಯಲ್ಲಿ ಎರಡು ಕಿವಿಗಳುಳ್ಳವ. ವಿಶೇಷಾಕಾರವಾಗಿ ವರ್ಣನ ಮಾಡಲ್ಪಟ್ಟ ಮನ್ಮಥನ ಬಾಣವುಳ್ಳವ–ಎಂದರೆ, ಮನ್ಮಥನ ಬಾಣಪ್ರಯೋಗದಿಂದ ಕಾಮೋದ್ರೇಕವಾಗತಕ್ಕದ್ದು. ಅಂಥಾ ಸ್ತ್ರೀಕಾಮನ ಜಯಿಸಿದವನು. ಕೇವಲ ಬ್ರಹ್ಮಚರ್ಯಾಶ್ರಮಿ ಎಂತ ತಾತ್ಪರ್ಯ. ಆಗಲೇ ಉದಯವಾದ ಸೂರ್ಯನೋಪಾದಿಯಲ್ಲಿ ರಕ್ತವರ್ಣ ವಿಶಿಷ್ಟವಾದ ಸಮೀಚೀನವಾದ ದೇಹಕಾಂತಿಯುಳ್ಳವನು. ಶ್ರೇಷ್ಠವಾದ ಸರ್ಪವೇ ಅಥವಾ ವಿರಚ ನಾಮ ಸರ್ಪವೇ ಉಡಿದಾರವಾಗುಳ್ಳವ. ಮಾನುಷ ಶರೀರ, ಆನೆಮುಖ, ಎರಡರಿಂದ ಸಹಿತವಾದ ವಿಕೃತವಾದ ಶರೀರ ಉಳ್ಳವ. ಅಸುರೀ ಕಾರ್ಯಗಳಿಗೆ ವಿಘ್ನಕಾರಿಯಾಗಿದ್ದು, ಭಕ್ತರ ಕಾರ್ಯಗಳಿಗೆ ಅವಿಘ್ನಕಾರನಾಗಿದ್ದು, ಇಂಥಾ ಸಮೀಚೀನವಾದ ಚರಿತ್ರೆಯುಳ್ಳವ. ಅಂಕುಶವೇನು, ಪಾಶವೇನು–ತನ್ನ ಕರದಲ್ಲಿ ಧರಿಸಿದವ. ದೈತ್ಯರ ದರ್ಪವನ್ನು ನಾಶ ಮಾಡಿದವ. ಉಭಯ ವಿಧಕರ್ಮಗಳ ಮಾಡತಕ್ಕ ಅಧಿಕಾರಿಗಳ ದೇಹಗತನಾಗಿ, ಮಾಡಿದ ಕಾರ್ಯಗಳಿಗೆ ಸಾಕ್ಷಿಯಾಗಿ ಇರತಕ್ಕವ. ಭಗವದ್ವಿಷಯಕವಾದ ಜ್ಞಾನಭಕ್ತ್ಯಾದಿಗಳಿಗೆ ವಿಘ್ನ ಬಾರದಂತೆ ಮಾಡಿ, ಜ್ಞಾನ ಭಕ್ತ್ಯಾದಿಗಳ ಮನೋಇಂದ್ರಿಯಕ್ಕೆ ಭೋಜನ ಮಾಡಿಸಿದವನಾಗಿ, ಭಗವದ್ಭಕ್ತರಾದ ಸಜ್ಜನರನ್ನು ಮನಸ್ಸನ್ನು ತೃಪ್ತಿಪಡಿಸೋವನಾಗು–ಎಂತ ತಾತ್ಪರ್ಯ. ॥ ೬ ॥

**೨. ಭಾವಪ್ರಕಾಶಿಕೆ :**

ಮೊರದಂತೆ ಕಿವಿಯುಳ್ಳವನೆಂದರು. ಹಾಗಾದರೆ ನೋಡುವವರಿಗೆ ಬಲು ವಿಕಾರವಾಗಿ ಕಾಣುವುದಲ್ಲವೆ-ಅಂದರೆ, "ವಿರಾಜಿತ" ಎಂಬ ಪದದಿಂದ ಆನೆಯ ಮುಖವಾದುದರಿಂದ ಕಿವಿಗಳೂ ಅದಕ್ಕೆ ತಕ್ಕ ಇಲ್ಲದಿದ್ದರೆ, ಶೋಭಿಸಲಾರವು. ಆದುದರಿಂದ ಆ ಮುಖಕ್ಕೆ ತಕ್ಕ ಮೊರಗಳಂತೇ ಎರಡು ಕಿವಿಗಳಿಂದ ಶೋಭಾಯಮಾನವಾಗಿರುವುದೆಂ ಭಾವ. ಭಾದ್ರಪದ ಶುದ್ಧ ಚತುರ್ಥೀ ದಿವಸದಲ್ಲಿ ರುದ್ರದೇವರ ವರದಿಂ ಪ್ರತಿ ಮನೆಯಲ್ಲೂ ಪೂಜೆಯನ್ನು ಸ್ವೀಕರಿಸಿ, ಮೋದಕಗಳನ್ನು ಭಕ್ಷ ಕೈಯ್ಯಲ್ಲೂ ಧರಿಸಿಕ್ಕೊಂಡು ಸಾಯಂಕಾಲ ಬರುವಾಗ, ಗಣಪತಿಯು ಕೂತಿರುವ ಮೂಷಿಕವು ಸರ್ಪವನ್ನು ಕಂಡು ಹೆದರಿ ಎಡವಿ ಮುಗ್ಗರಿಸಲು ಮೇಲೆ ಕೂತಿದ್ದ ಗಣಪತಿಯು ಕೆಳಕ್ಕೆ ಬಿದ್ದ ಕಾಲದಲ್ಲಿ ಚಂದ್ರನು ಹಾಸ್ಯ ಮಾಡಿದನು. ಆ ಸಮಯದಲ್ಲಿ ಚಂದ್ರನ ಮೇಲೆ ಕೋಪದಿಂದ ತನ್ನ ಒಂದು ದಂತವನ್ನು ಕಿತ್ತು ಅವನ್ನು ಹೊಡೆದುದು ಅಲ್ಲದೆ, ಆ ದಿವಸದಲ್ಲಿ ನಿನ್ನ ಮೇಲೆ ಯಾರೂ ಚಂದ್ರದರ್ಶನವನ್ನು ಮಾಡಬಾರದು. ಹಾಗೆ ಮಾಡಿದರೆ ಅವರ ಮೇಲೆ ಜಾರತ್ವವಾಗಲಿ ಚೋರತ್ವವಾಗಲಿ ಆರೋಪಿತವಾಗಲೆಂದು ಶಾಪವನ್ನೂ ಕೊಟ್ಟನು. ಈ ಕಥೆಯನ್ನು ಗಣೇಶನ ಕಥೆಯಲ್ಲಿ ಹೊಗಳು ವರು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು, ಚಂದ್ರನ ದರ್ಪಹರನೆಂದು ಹೇಳಿದರು. ಗಣೇಶನು ಕೆಳಗೆ ಬಿದ್ದುಹೊಟ್ಟೆಯು ಒಡೆದುಹೋಗಲು ಬಲವಾದ ಕಾರಣವಿಲ್ಲದೆ ಇರಲಿಕ್ಕಿಲ್ಲ. ಅದರ ಕಾರಣವನ್ನು ಅಗಸ್ತ್ಯೋಪಾಖ್ಯಾನವೆಂಬ ಮತ್ತೊಂದು ಗಣೇಶನ ಪೂಜೆಯ ದಿವಸ ಕಥೆ ಕೇಳುವಾಗ, ಇದನ್ನೂ ಜನರು ಕೇಳಿರಬಹುದು. ಆದರೆ, ಈ ಕಥೆಯು ಈಗಿನ ಭಾಷಾ ಪುಸ್ತಕದಲ್ಲಿಲ್ಲದುದರಿಂದ, ಎಲ್ಲರಿಗೂ ತಿಳಿದಿರ ಬಾರದೆಂಬ ಉದ್ದೇಶದಿಂದಲೂ ಪ್ರಸಂಗ ಸಂಗತ್ಯಾ ಅದನ್ನು ಇಲ್ಲಿ ಸ್ವಲ್ಪ ಬರೆಯುತ್ತೇವೆ.

ಒಂದಾನೊಂದು ಕಾಲದಲ್ಲಿ ಅಗಸ್ತ್ಯರು ಪರಮಾತ್ಮನನ್ನು ಕುರಿತು ತಪಸ್ಸುಮಾಡಿ, ಪ್ರತಿದಿವಸದಲ್ಲಿಯೂ, ತಾವು ವಾಸಮಾಡುತ್ತಿದ್ದ

ವಿಂಧ್ಯಪರ್ವತದ ದಕ್ಷಿಣ ಭಾಗದಿಂದ ಕಾಶಿಗೆ ಹೋಗಿ, ಗಂಗೆಯಲ್ಲಿ ಸ್ನಾನ ಮಾಡಿ, ಗಂಗೋದಕವನ್ನು ತೆಗೆದುಕೊಂಡು, ರಾಮೇಶ್ವರಕ್ಕೆ ಹೋಗಿ ರಾಮಲಿಂಗಕ್ಕೆ ಅಭಿಷೇಕ ಮಾಡಿ ಮತ್ತು ಸಾಯಂಕಾಲಕ್ಕೆ ತಮ್ಮ ಸ್ಥಾನವನ್ನು ಸೇರಬೇಕು. ಹೀಗೆ ಪ್ರತಿದಿವಸದಲ್ಲೂ ಮಾಡಬೇಕೆಂಬ ಆಸೆಯು ನನಗಿರುವುದು. ಇದನ್ನು ಪೂರ್ಣವಾಗುವಂತೆ ವರಕೊಡಬೇಕೆಂದು ಕೇಳಿಕೊಂಡರು. ಪರಮಾತ್ಮನು ಅವರ ತಪಸ್ಸಿಗೆ ಸುಪ್ರೀತನಾಗಿ ಒಂದು ಕೊಡವನ್ನು ಕೊಟ್ಟು, ನಿನ್ನ ಉದ್ದೇಶದಂತೆ ನಿತ್ಯದಲ್ಲೂ ಕಾಶಿಯಿಂದ ಗಂಗೋದಕವನ್ನು ತೆಗೆದುಕೊಂಡು ಬಂದು ರಾಮೇಶ್ವರದ ರಾಮಲಿಂಗಕ್ಕೆ ಅಭಿಷೇಕ ಮಾಡುವ ಶಕ್ತಿಯು ನಿನಗೆ ಕೊಟ್ಟಿರುತ್ತೇನೆ. ಆದರೆ, ಕೊಡವನ್ನು ಮಾತ್ರ ಎಂದಿಗೂ ಮಧ್ಯದಲ್ಲಿ ಕೆಳಗೆ ಇಡಬಾರದು. ಹಾಗೆ ಭೂಮಿಯಲ್ಲಿಟ್ಟರೆ, ಕೊಡವು ಒಡೆದು ಹೋಗುವದು. ಅಂದಿನ ಮೊದಲು ಆ ಶಕ್ತಿಯು ನಿಂತುಹೋಗುವದು ಎಂದು ವರವನ್ನಿತ್ತು ಮರೆಯಾದನು. ಅಗಸ್ತ್ಯರು ಭಗವದನುಗ್ರಹದಿಂದ ಪ್ರತಿ ದಿವಸದಲ್ಲೂ ಇದೇ ರೀತಿಯಾಗಿ ಗಂಗೋದಕದಿಂದ ರಾಮಲಿಂಗಕ್ಕೆ ಅಭಿಷೇಕವನ್ನು ಬಹುಕಾಲ ಮಾಡಿದರು. ದೈವಸಂಕಲ್ಪದಿಂದ ಒಂದಾನೊಂದು ದಿವಸ, ಕಾಶಿಯಿಂದ ರಾಮೇಶ್ವರಕ್ಕೆ ಹೋಗುತ್ತಿರುವಾಗ ಮಾರ್ಗದಲ್ಲಿ ದೇಹಬಾಧೆಯುಂಟಾಗಿ (ಮಲಮೂತ್ರ) ವಿಸರ್ಜನೆಯನ್ನು ಮಾಡಿ ಶಂಕೆಯನ್ನು ಪರಿಹರಿಸಿಕೊಳ್ಳಬೇಕಾಗಿ ಬಂದಿತು. ಎಂದೂ ಇಲ್ಲದ ಆ ದಿವಸ ತಮಗೆ ಸಂಭವಿಸಿದ ಸಂಕಟವನ್ನು ಯೋಚಿಸಿ, ಮಲವನ್ನು ಉದ್ದಿಸಿ ತೆಗೆದುಕ್ಕೊಂಡು ಹೋದರೆ ಆ ಗಂಗೋದಕವು ಅಭಿಷೇಕಕ್ಕೆ ಯೋಗ್ಯವಲ್ಲ. ಕೊಡವನ್ನು ಕೆಳಗೆ ಇಟ್ಟರೆ, ಕೊಡ ಒಡೆದುಹೋಗುವುದು. ಇನ್ನು ಮಾಡುವದೇನೆಂದು ಯೋಚಿಸುತ್ತಿದ್ದರು. ಅವತ್ತು ಭಾದ್ರಪದ ಶುದ್ಧ ಚತುರ್ಥೀ. ಗಣಪತಿಯು ಮನೆ ಮನೆಯಲ್ಲಿ ಪೂಜೆಯನ್ನು ಸ್ವೀಕರಿಸುವುದರ ದೆಸೆಯಿಂದ, ಮೂಷಿಕ ವಾಹನಾರೂಢನಾಗಿ ಬರುವುದನ್ನು ಕಂಡು, ಅವನನ್ನು ಕುರಿತು–ಎಲೈ, ವಿಘ್ನೇಶ್ವರನೆ ! ಈ ಫಲವನ್ನು ಸ್ವಲ್ಪ ಹೊತ್ತು ಕೈಯಲ್ಲಿ ಇಟ್ಟುಕೊಂಡಿರು! ಇನ್ನು ಕೆಳಗೆ ಇಟ್ಟರೆ

ಕೊಡವು ಒಡೆದುಹೋಗುವದು. ಮುಂದೆ ನಾನು ಮಾಡುತ್ತಿರುವ ಮಹಾಕಾರ್ಯವು ನಿಂತುಹೋಗುವುದು. ನಾನು ಮಲಬಾಧೆಯನ್ನು ನಿವೃತ್ತಿ ಮಾಡಿಕೊಂಡು ಬರುವೆನು; ಅದುವರೆಗೂ ಇದನ್ನು ಇಟ್ಟುಕೊಂಡಿರು ಎಂದು ಹೇಳಿದರು. ಅದಕ್ಕೆ ಗಣಪತಿಯು ಅಗಸ್ತ್ಯರೇ! ನನಗೆ ಬಹಳ ಅವಸರ ಕಾರ್ಯವಿದೆ; ಆದರೂ, ನಿಮಗೋಸ್ಕರ ಈ ಘಟವನ್ನು ಸ್ವಲ್ಪಹೊತ್ತು ಹಿಡಿದುಕೊಳ್ಳುವೆನು. ಅಂದರೆ, ನಿಮ್ಮನ್ನು ಮೂರು ಸಲ ಕೂಗುವೆನು. ಅಷ್ಟರಲ್ಲಿ ನೀನು ಬಾರದಿದ್ದರೆ ಕೊಡವನ್ನು ಕೆಳಗೆ ಇಟ್ಟು ಹೊರಟು ಹೋಗುವೆನೆಂದನು. ಅಗಸ್ತ್ಯರು ಇವನು ಹಾಸ್ಯ ಮಾಡುವನು. ಕೊಡವನ್ನು ಕೆಳಗೆ ಇಡಲಾರನೆಂದು ನಂಬಿ, ಹಾಗೆಯೇ ಆಗಲೆಂದು ಹೇಳಿ, ಕೊಡವನ್ನು ಅವನ ಕೈಯಲ್ಲಿ ಕೊಟ್ಟು ಹೊರಟುಹೋದರು. ಗಣಪತಿಯು ಅಗಸ್ತ್ಯರು ನಾಲ್ಕು ಹೆಜ್ಜೆಗಳು ಇಟ್ಟ ಮಾತ್ರದಿಂದಲೇ, ಅಗಸ್ತ್ಯರೆ! ಬನ್ನಿ- ಅಂದನು. ಮತ್ತೊಂದು ನಾಲ್ಕು ಹೆಜ್ಜೆ ಇಡುವಷ್ಟರಲ್ಲಿ ಅಗಸ್ತ್ಯರೇ!–ಎಂದು ಕೂಗಿದನು. ಅಗಸ್ತ್ಯರು ಶೌಚಸ್ಥಾನವನ್ನು ಸೇರುವಷ್ಟರಲ್ಲಿಯೇ ಮತ್ತೊಂದು ಸಲ ಅಗಸ್ತ್ಯರೇ!!!–ಎಂದು ದೀರ್ಘ ಧ್ವನಿಯಿಂದ ಕೂಗಿ, ಕೊಡವನ್ನು ಕೆಳಗೆ ಇಟ್ಟುಬಿಟ್ಟನು. ಕೊಡವು ಒಡೆದುಹೋಯಿತು.

ಗಣಪತಿಯು ಭೀತನಾಗಿ ಹೊರಟುಹೋಗುತ್ತಿದ್ದನು. ಅಷ್ಟರಲ್ಲಿ ಅಗಸ್ತ್ಯರು ಶೌಚವನ್ನು ತೀರಿಸಿಕೊಂಡು, ಆಚಮನ ಮಾಡಿ ಬಂದು ನೋಡಲು ಕೊಡವು ಒಡೆದುಹೋಗಿದ್ದಿತು. ಅವರಿಗೆ ಕಾರ್ಯವಿಘ್ನದಿಂದ ಆದ ಶೋಕವು ಅಪಾರವಾಗಿ, ಮಿತಿಮೀರಿದ ಕೋಪವು ಬಂದಿತು. ಈ ಕೊಡವು ಹೇಗೆ ಒಡೆಯಿತೋ, ಹಾಗೆಯೇ ಈ ದಿವಸ ನಿನ್ನ ಹೊಟ್ಟೆಯೂ ಒಡೆದುಹೋಗಲೆಂದು ಗಣಪತಿಗೆ ಶಾಪವನ್ನಿತ್ತು ಹೊರಟುಹೋದರು. ಆ ಕಾರಣದಿಂದ, ಆ ದಿವಸ ಗಣಪತಿಯು ಮೂಷಿಕದಿಂದ ಬಿದ್ದು ಹೊಟ್ಟೆಯು ಒಡೆಯಿತು. ಚಂದ್ರನು ನಕ್ಕದ್ದಕ್ಕಾಗಿ ಚಂದ್ರನಿಗೆ ಗಣಪತಿಯು ಶಾಪವನ್ನು ಕೊಟ್ಟು, ಅವನ ದರ್ಪವನ್ನು ಪರಿಹರಿಸಿದನೆಂದು ಕಥೆಯಲ್ಲಿ ಹೇಳಿರುವದು. (ಪ್ರಸಂಗದಿಂದ ಈ ಕಥೆಯನ್ನು ಬರಿಯಬೇಕಾಯಿತು.) ಬಾಲ

ಸೂರ್ಯನಂತೆ ಕೆಂಪಗೆ ಶೋಭಿಸುತ್ತಿರುವ ಶರೀರವುಳ್ಳವನು. ಸರ್ಪವನ್ನೇ ಕಟಿಸೂತ್ರಕ್ಕೆ ಪ್ರತಿಯಾಗಿ ಕಟ್ಟಿರುವವನು. ಗಣಪತಿಯ ಹೊಟ್ಟೆಯು ಒಡೆದಾಗ, ಸರ್ಪದಿಂದ ಹೊಟ್ಟೆಯನ್ನು ಕಟ್ಟಿದುದೇ ಇದರ ಕಾರಣವು. ಆನೆಯ ತಲೆಯೂ, ಮನುಷ್ಯಾಕಾರ ಶರೀರವೂ, ಹೊಟ್ಟೆಯ ಮೇಲೆ ಕಟ್ಟಲ್ಪಟ್ಟ ಸರ್ಪವೂ, ಜೋಲುವ ಹೊಟ್ಟೆಯೂ ನೋಡುವವರಿಗೆ ವಿಕಾರವೆಂದು ತೋರಬರುವುದು. ಆದುದರಿಂದ ವೈಕೃತಗಾತ್ರನೆಂದರು. ಆದರೆ, ವಸ್ತುತಃ ವಿಕಾರವಾಗಿಲ್ಲ. ನೋಡುವವರು ಶ್ಲಾಘನೆ ಮಾಡುವ ರೂಪವಾಗಿಯೇ ಕಾಣವುದಲ್ಲದೆ, ಇವನ ಚರಿತ್ರೆಯನ್ನು ಸಕಲರೂ ಕೊಂಡಾಡುವಂತೆ ಲೋಕಪ್ರಖ್ಯಾತಿಯಾಗಿರುವುದು. ಪಾಶ, ಅಂಕುಶಗಳನ್ನು ಎರಡು ಕೈಗಳಲ್ಲಿ ಧರಿಸಿರುವನು. ಅಯೋಗ್ಯರಾದ ಭಗವದ್ವೇಷಿಗಳ ಗರ್ವವನ್ನು ಮುರಿದವನು. ಸಕಲ ಜೀವರೂ ಮಾಡುವ ಕರ್ಮಗಳಿಗೆ, ಅಭಿಮಾನಿಯಾಗಿದ್ದು ಸಾಕ್ಷಿಭೂತನಾಗಿರುವನು. ಜನರಿಂದ ಪೂಜಿತನಾಗಿ, ಅವರವರ ಮನೋಭೀಷ್ಟವನ್ನು ಶೀಘ್ರದಲ್ಲಿ ಪೂರೈಸುವ ಸ್ವಭಾವ ಉಳ್ಳವನು. ಆದುದರಿಂದ, ಸಜ್ಜನರ ಇಷ್ಟಾರ್ಥವನ್ನು ಪೂರೈಸಿ ತೃಪ್ತಿಪಡಿಸುವನು. ॥ ೬ ॥

**ಭಾವದರ್ಪಣ ಟೀಕಾ :**

ಶೂರ್ಪಕರ್ಣ – ಮೊರಗಳೋಪಾದಿಯಲ್ಲಿ ಕರ್ಣದ್ವಯಗಳಿಂದ ಪ್ರಕಾಶಿತ ಇಂದುನ ದರ್ಪಹರ – ಚಂದ್ರನ ದರ್ಪಪರಿಹಾರಕ, ಉದಿತಾರ್ಕಸನ್ನಿಭ–ಉದಯಕಾಲದ ಸೂರ್ಯಪ್ರಕಾಶಕ, ರಕ್ತವರ್ಣ ವಿಶಿಷ್ಟನೆಂಬ ಭಾವ । ಸ್ಫಟಿಕಾಂಕುಶಕರ ಧಾರಣಮಾಡಲ್ಪಟ್ಟ ಅಂಕುಶ ಪಾಶ ಹಸ್ತಗಳಲ್ಲಿ ಉಳ್ಳವ, ಖಳದರ್ಪ ಭಂಜನ–ಸುಯೋಧನಾದಿ ದುಷ್ಟರ ಗರ್ವಪರಿಹಾರಕ. ಸರ್ವಸಾಕ್ಷಿಗ–ಸಮಸ್ತ ಕರ್ಮಗಳಿಗೂ ಸಾಕ್ಷೀಭೂತವಾಗಿರುವವ. ತರ್ಪಕ–ತೃಪ್ತಿಜನಕ. ॥ ೬ ॥

**ವ್ಯಾಸದಾಸ ಸಿದ್ಧಾಂತ ಕೌಮುದೀ :**

ವ್ಯಾಖ್ಯಾನ ಇಲ್ಲ.

ಶೂರ್ಪವೆಂಬ ಮರದಂತೆ ಕರ್ಣಗಳುಳ್ಳವನೇ, ಅಜಿತಕಂದರ್ಪಕ ಎಂದರೆ ಬ್ರಹ್ಮಚರ್ಯದಿಂದ ಮನ್ಮಥ ವಿಕಾರವರ್ಜಿಸಿ ಗೆದ್ದವನೇ, ಉದಯಿಸಿದ ಸೂರ್ಯನಂತೆ ಪ್ರಕಾಶಿಸುವವನೇ, ವಿರಚನಾಮಕ ಸರ್ಪದಿಂದ ಕಟಸೂತ್ರವೆಂಬ ಉಡಿದಾರವುಳ್ಳವನೇ, ವೈಕೃತವೆಂಬ ಸ್ಥೂಲ ಶರೀರವುಳ್ಳವನೇ, ಮಂಗಳ ಚರಿತ್ರನೇ, ಸ್ಫರ್ಜಿತವೆಂಬ ಚೆನ್ನಾಗಿ ಹಿಡಿದಿರುವ ಅಂಕುಶ ಮತ್ತು ಪಾಶಗಳು ಕೈಯಲ್ಲಿ ಉಳ್ಳವನೇ, ಖಳರ ದರ್ಪನೆಂಬ ಗರ್ವಭಂಜಕನೇ, ಸರ್ವಕರ್ಮಗಳಿಗೂ ಸಾಕ್ಷಿಯಾಗಿ ಆಕಾಶದಲ್ಲಿರುವವನೇ, ತೃಪ್ತಿಕರನಾಗಿ ಸಜ್ಜನರನ್ನು ಸಂತೋಷಪಡಿಸು.' ॥ ೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **ಶೂರ್ಪ**–ಎಂದರೆ ಧಾನ್ಯಗಳನ್ನು ಕೇರುವ ಮೊರ ಎಂದರ್ಥ. ವಿನಾಯಕನ ಮುಖವು ಗಜದಾಕಾರದಲ್ಲಿದೆ. ಇದರಿಂದ ಅವನ ಕಿವಿಗಳು ಸಹ, ಆನೆಯ ಕಿವಿಗಳಂತೆ ಅಗಲವಾಗಿವೆ. ಅಂದರೆ, ಮೊರದಂತೆ ಅಗಲವಾಗಿರುವುದರಿಂದ, **ಶೂರ್ಪ ಕರ್ಣ**–ಎಂದಿದ್ದಾರೆ.

ವಿಘ್ನೇಶ್ವರನು ಆಕಾಶಾಭಿಮಾನಿ. ಶಬ್ದವು ಆಕಾಶದ ಧರ್ಮವು. ವಿನಾಯಕನು ಶಬ್ದಗುಣಗ್ರಾಹಕನು. ಶಬ್ದತರಂಗಗಳನ್ನು ಗ್ರಹಿಸುವ ಇಂದ್ರಿಯವು ಕಿವಿಗಳು. ಇದರಿಂದ ಶೂರ್ಪಕರ್ಣನಾಗಿದ್ದಾನೆ.

೨. **ಕಂದರ್ಪ**–ಎಂದರೆ ಮನ್ಮಥನೆಂದರ್ಥ. **ಶರ**–ಬಾಣಗಳು ಮನ್ಮಥನ ಬಾಣಗಳು ಕುಸುಮ ಬಾಣಗಳೆಂದು ಪ್ರಸಿದ್ಧಿ. ಪಂಚಬಾಣಗಳು ಮನ್ಮಥನ ಪಂಚಬಾಣಗಳ ಪ್ರಯೋಗದಿಂದ ಮನಸು ವಿಚಲಿತವಾಗುವುದು. ಕಾಮಾಸಕ್ತಿಯುಂಟಾಗುವುದು (ಭೋಗಾಭಿಲಾಷೆ). ಇದಕ್ಕೆ ಇಂದ್ರ ಮತ್ತು ಕಾಮ–ಇಬ್ಬರೂ ಮನಸ್ಸಿಗೆ ಅಭಿಮಾನಿಗಳಾಗಿರುವುದೇ ಕಾರಣ. ಮನಸ್ಸಿನ ಚಾಂಚಲ್ಯವನ್ನುಂಟುಮಾಡಬಲ್ಲ ಸಜ್ಜನರಿಗೆ ಸುಮುಖನಾಗಿ, ಶ್ರೀಹರಿಯ ಪಾದಾರವಿಂದಗಳಲ್ಲಿ ಮನಸು ಆಸಕ್ತವಾಗಿರುವಂತೆ ಮಾಡಬಲ್ಲರು. ವಿವರ್ಜಿತ–ಗೆಲ್ಲಲ್ಪಟ್ಟ ಎಂದರ್ಥ.

ಗಣೇಶನು ಬ್ರಹ್ಮಚಾರಿಯು. ಕಾಮನನ್ನು ಗೆದ್ದವನು. ಜಿತೇಂದ್ರಿಯನೆಂದು ತಾತ್ಪರ್ಯ.

೩. **ಉದಿತಾರ್ಕ**–ಪೂರ್ವ ದಿಕ್ಕಿನಲ್ಲಿ ಆಗ ತಾನೇ ಉದಯಿಸುತ್ತಿರುವ ಸೂರ್ಯನು ಕೆಂಪಗೆ ಕಾಂತಿಯುಕ್ತನಾಗಿರುತ್ತಾನೆ. (ಉದಿತ–ಆಗ ತಾನೇ ಹುಟ್ಟುತ್ತಿರುವ, ಅರ್ಕ–ಸೂರ್ಯ) ಗಣಪತಿಯ ದೇಹದಕಾಂತಿಯು ಉದಿತಾರ್ಕನಂತೆ ಶೋಭಾಯಮಾನವಾಗಿದೆ. ಇದರಿಂದ, **ಉದಿತಾರ್ಕ ಸನ್ನಿಭನು.**

೪. **ಸರ್ಪವರ**–ಶ್ರೇಷ್ಠವಾದ ಸರ್ಪ. "ವಿರಚಿ"–ಎಂಬ ಹೆಸರಿನ ಸರ್ಪವು. ಒಮ್ಮೆ, ವಿನಾಯಕನು ಭಕ್ತರ ಮನೆಗೆ ಹೋಗಿ ಮೋದಕಗಳನ್ನು ಸ್ವೀಕರಿಸಿದನು. ಇದರಿಂದ ಹೊಟ್ಟೆ ಭಾರವಾಯಿತು. ಅವನ ವಾಹನ ಇಲಿಯು. ಇಲಿಯ ಮೇಲೆ ಕುಳಿತು ಬರುತ್ತಿರಲು, ಆಯತಪ್ಪಿ ಕೆಳಗೆ ಬಿದ್ದನು. ಆಗ ಉದರ ಒಡೆಯಿತು. ಆಕಾಶದಲ್ಲಿ ಬೆಳಗುತ್ತಿದ್ದ ಚಂದ್ರನು ಗಣನಾಯಕನನ್ನು ನೋಡಿ ನಕ್ಕು ಹಾಸ್ಯ ಮಾಡಿದನು. ಅದರಿಂದ ಕ್ರುದ್ಧನಾದ ಮೂಷಿಕವಾಹನನು ತನ್ನ ಒಂದು ದಂತವನ್ನು ಮುರಿದು, ಅವನೆಡೆಗೆ ಎಸೆದನು. ಇದರಿಂದ ಹೇರಂಬನು ಭಗ್ನದಂತನಾದನು. ಅಲ್ಲಿಯೇ ಹರಿಯುತ್ತಿದ್ದ ಸರ್ಪವೊಂದನ್ನು ಹಿಡಿದು ಒಡೆದುಹೋಗಿದ್ದ ತನ್ನ ಹೊಟ್ಟೆಯ ಮೇಲೆ ಸುತ್ತಿಕೊಂಡನು. (ಉಡಿದಾರದಂತೆ). ಇದರಿಂದ, **ಸರ್ಪವರ ಕಟಿಸೂತ್ರ** – ಎಂದಿದ್ದಾರೆ – ದಾಸರಾಯರು. ಕಟ–ಸೊಂಟಸೂತ್ರ–ದಾರ. ಎಂದರೆ, ಉಡಿದಾರ.

೫. **ವೈಕೃತ**–ವಿಕಾರವಾದ–ಅಂದರೆ, ಗಜಮುಖ, ಸೊಂಡಿಲು, ಮೊರಗದಲದ ಕಿವಿ, ಮಾನವ ಶರೀರ, ಡೊಳ್ಳುಹೊಟ್ಟೆ (ಲಂಬೋದರ). ಈ ಆಕಾರವಿಶೇಷದಿಂದ–**ವೈಕೃತಗಾತ್ರ**ನೆಂದಿರುವರು ಸ್ಥೂಲಶರೀರಿ.,

೬. ಗಣಪತಿಯು ವಿದ್ಯಾಭಿಮಾನಿಯು. ಆದಿಪೂಜಿತನು. ಸಜ್ಜನರ ಸಕಲ ವಿಘ್ನಪರಿಹಾರಕನು. ಇದರಿಂದ, ಸಮೀಚೀನವಾದ ಚಾರಿತ್ರ್ಯ ಉಳ್ಳವನು. **ಸುಚರಿತ್ರನು.** ಮಂಗಳಚರಿತನೆಂದು ತಾತ್ಪರ್ಯ.

೭. ಗಜಾನನನು ತನ್ನ ಎರಡು ಹಸ್ತಗಳಲ್ಲಿ ಒಂದರಲ್ಲಿ, ಅಂಕುಶವನ್ನೂ, ಮತ್ತೊಂದರಲ್ಲಿ ಪಾಶವನ್ನೂ ಧರಿಸಿದ್ದಾನೆ.

ಅಂಕುಶವು ಆನೆಯನ್ನು ನಿಯಂತ್ರಿಸುವ ಆಯುಧವಿಶೇಷ. ವಿಘ್ನಗಳೆಂಬ ಮದಗಜಗಳನ್ನು ಪರಿಹರಿಸುವವನು ಗಜಾನನನು. ಮದೋನ್ಮತ್ತರಾದ ದೈತ್ಯರ ಪಾಲಿಗೆ ಅಂಕುಶಪಾಣಿಯು.

ಪಾಶ–ವೆಂದರೆ ಹಗ್ಗ. ಚಂಚಲವಾದ ಮನಸ್ಸನ್ನು ನಿಯಂತ್ರಿಸಿ, ಶ್ರೀಹರಿಯ ವಿಷಯವಾಗಿ ತಿರುಗಿಸುವುದರಿಂದ ಪಾಶಸಾಂಕೇತ. ಮೊದಲು ನಿಯಂತ್ರಣ (ಅಂಕುಶ) ನಂತರ ಕಟ್ಟಹಾಕುವುದು (ಬಂಧನ–ಪಾಶ).

**ಸೃಣಿತ**–ಧರಿಸಿರುವ **ಅಂಕುಶ ಪಾಶಕರ**–ಹಸ್ತದ್ವಯಗಳಲ್ಲಿ ಅಂಕುಶ ಮತ್ತು ಪಾಶ.

೮. ದುಷ್ಟರಾದ ದೈತ್ಯಶಕ್ತಿಯನ್ನು ದಮನ ಮಾಡುವುದರಿಂದ, **ಖಳತರ್ಜ ಭಂಜಕನು.** ಕಲಿಸ್ವರೂಪನಾದ ದುರ್ಯೋಧನ ಆದಿಪೂಜಿತನಾದ ಅಂಬರಾಧಿಪನನ್ನು ಆರಾಧಿಸಿದೇ ಅಸು ನೀಗಿದ. ಕುರುಕ್ಷೇತ್ರ ಮಹಾಸಮರಾಂಗಣದಲ್ಲಿ.

ಅವನ ಸೊಕ್ಕನ್ನು ಗಣನಾಯಕನು ಮುರಿದನು. ವೃಕೋದರನ ವರಗದೆಯಿಂದ ಸಂಹೃತನಾದ ಪ್ರಸಂಗ ವಿಶೇಷ.

೯. ಸಕಲಚೇತನರಲ್ಲಿ ನಿರಂತರ ನಡೆಯುತ್ತಿರುವ ಪಾಪ–ಪುಣ್ಯ–ಮಿಶ್ರ ಕರ್ಮಗಳಿಗೆ ತತ್ತ್ವಪತಿಯಾದ ಗಣೇಶನು ಸಾಕ್ಷೀಭೂತನಾಗಿದ್ದಾನೆ. ಇದರಿಂದ, **ಕರ್ಮಸಾಕ್ಷಿಕನು.**

೧೦. ಕರ್ಮಸಾಕ್ಷಿಗನಾದ ಕರಿವದನನು ಸಜ್ಜನರ ಸಕಲ ವಿಘ್ನಗಳನ್ನು ಪರಿಹರಿಸಿ. ಅವರ–ಸತ್ಸಾಧನೆಗೆ ಸುಮಾರ್ಗಕಲ್ಪಿಸಿ, ಅವರನ್ನು ತೃಪ್ತಿಪಡಿಸುವನು. ಇದರಿಂದ, ಸಜ್ಜನರಿಗೆ ತೃಪ್ತಿಪಡಿಸುವ **ತರ್ಪಕನಾಗಿದ್ದಾನೆ.** ಆ ತಾರಹರಿಯ ಅನುಜನು. ॥ ೬ ॥

ಕೃಪಾಕಟಾಕ್ಷದಿ ನೋಡು ಪ್ರತಿದಿನದಿ

ಪದ್ಯ-೭

**ಮೂಲ :**

**ಖೇಶ ಪರಮ ಸುಭಕ್ತಿಪೂರ್ವಕ ।**
**ವ್ಯಾಸಕೃತ ಗ್ರಂಥಗಳನರಿತು ಪ್ರ ।**
**ಯಾಸವಿಲ್ಲದೆ ಬರೆದು ವಿಸ್ತರಿಸಿದೆಯೊ ಲೋಕದೊಳು ॥**
**ಪಾಶಪಾಣಿಯ ಪ್ರಾರ್ಥಿಸುವೆನುಪ ।**
**ದೇಶಿಸನಗದರರ್ಥಗಳ ಕರು ।**
**ಣಾಸಮುದ್ರ ಕೃಪಾಕಟಾಕ್ಷದಿ ನೋಡುವ ಪ್ರತಿದಿನದಿ ॥ ೭ ॥**

**ಅವತರಣಿಕೆ :**

ಭಗವಾನ್ ಶ್ರೀವೇದವ್ಯಾಸರಿಂದ ವಿರಚಿತ ಶ್ರೀಮನ್ಮಹಾಭಾರತವನ್ನು ಸಮಗ್ರವಾಗಿ ಲೇಖಿಸಿದ ಲೇಖಕಾಗ್ರಣಿ ಲಂಬೋದರನನ್ನು ಗ್ರಂಥಾರ್ಥಗಳ ರಹಸ್ಯಗಳನ್ನು ತಿಳಿಸೆಂದು ಪ್ರಾರ್ಥಿಸುತ್ತಾರೆ. ॥ ೭ ॥

**ಪ್ರತಿಪದಾರ್ಥ :**

**ಖೇಶ** = ಆಕಾಶಾಭಿಮಾನಿಯಾದ ಶ್ರೀ ವಿಘ್ನರಾಜನೇ (ಖ+ಈಶ = ಖೇಶ, ಖಂ-ಆಕಾಶತತ್ತ್ವ), **ಸುಭಕ್ತಿಪೂರ್ವಕ** = ಶ್ರೀವೇದವ್ಯಾಸರಲ್ಲಿ ಅತ್ಯಂತ ಭಕ್ತಿಪೂರ್ವಕವಾಗಿ, **ಪರಮ** = ಸರ್ವೋತ್ತಮರಾದ, **ವ್ಯಾಸಕೃತ** = ಭಗವಾನ್ ಶ್ರೀವೇದವ್ಯಾಸರಿಂದ, **ಕೃತ** = ರಚಿಸಲ್ಪಟ್ಟ, **ಗ್ರಂಥಗಳನು** = ಶ್ರೀಮನ್ಮಹಾಭಾರತಾದಿ ಸದ್ಗ್ರಂಥಗಳ, **ಅರಿತು** = ಅಂತರ್ಗತರಹಸ್ಯಾರ್ಥಗಳನ್ನು ಶ್ರೀವೇದವ್ಯಾಸರ ಅನುಗ್ರಹದಿಂದಲೇ ತಿಳಿದವನಾಗಿ, **ಪ್ರಯಾಸವಿಲ್ಲದೆ** = ಆಯಾಸವಿಲ್ಲದೆ, **ಬರೆದು** = ಲೇಖನಮಾಡಿ, **ಲೋಕದೊಳು** = ಜಗತ್ತಿನಲ್ಲಿ, **ವಿಸ್ತರಿಸಿದೆಯೋ** = ಪ್ರಚಾರ ಮಾಡಿದೆ. **ಪಾಶಪಾಣಿಯ** = ಪಾಶಾಂಕುಶಗಳನ್ನು ಕೈಯ್ಯಲ್ಲಿ ಧರಿಸಿರುವವನೇ. **ಪ್ರಾರ್ಥಿಸುವೆನು** = ನಿನಗೆ ಪ್ರಾರ್ಥನೆ ಮಾಡುತ್ತೇನೆ. **ಅದರ ಅರ್ಥಗಳ** = ಭಾರತಾದಿ ಉದ್ಗ್ರಂಥಗಳಲ್ಲಿ ಉಕ್ತವಾಗಿರುವ ರಹಸ್ಯಾರ್ಥಗಳನ್ನು, **ಎನಗೆ** = ನಮಗೆ, **ಉಪದೇಶಿಸು** =

ಗುರುದ್ವಾರಾ ಉಪದೇಶ ಮಾಡುವವನಾಗು. **ಕರುಣಾಸಮುದ್ರ** = ದಯಾಸಾಗರನಾದ ನೀನು, **ಪ್ರತಿದಿನದಿ** = ಪ್ರತಿದಿವಸದಲ್ಲಿಯೂ ಭಗವತ್ಸ್ತ್ರೀವಾಕ್ಕೆ ಒದಗುವ ಸಕಲ ವಿಘ್ನಗಳನ್ನೂ ಪರಿಹರಿಸಿ, **ಕೃಪಾಕಟಾಕ್ಷದಿ ನೋಡು** = ಅತ್ಯಂತ ದಯಾದೃಷ್ಟಿಯಿಂದ ನನ್ನನ್ನು ಅನುಗ್ರಹಿಸೆಂದು ಪ್ರಾರ್ಥಿಸಿರುತ್ತಾರೆ. ॥ ೭ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀವೇದವ್ಯಾಸ ದೇವರಿಂದ ರಚಿತವಾದ ಗ್ರಂಥಾರ್ಥಗಳ ತಿಳಿಸೆಂದು ಪ್ರಾರ್ಥನೆ ಮಾಡುತಾರೆ.

ಆಕಾಶಾಭಿಮಾನಿಯಾದ ವಿಘ್ನರಾಜನೇ, ಶ್ರೀವೇದವ್ಯಾಸದೇವರಲ್ಲಿ ಅತ್ಯಂತ ಭಕ್ತಿಪೂರ್ವಕವಾಗಿ, ಸರ್ವೋತ್ತಮನಾದ ಶ್ರೀ ವೇದವ್ಯಾಸ ದೇವರಿಂದ ಮಾಡಲ್ಪಟ್ಟ ಭಾರತಾದಿ ಗ್ರಂಥಗಳ, ಅದರ ಅರ್ಥ ತಿಳಿಕೊಂಡವನಾಗಿ, ಆಯಾಸವಿಲ್ಲದೆ ಲೇಖನಮಾಡಿ, ಲೋಕದಲ್ಲಿ ಪ್ರಚುರ ಮಾಡಿದವನಾಗಿ, ಪಾಶಾಂಕುಶಗಳ ಹಸ್ತಗಳಲ್ಲಿ ಉಳ್ಳ ವಿನಾಯಕನೇ, ನಿನ್ನನ್ನು ಕುರಿತು ಪ್ರಾರ್ಥನೆ ಮಾಡುವೆನು. ನಿನ್ನ ಪಾದಾವಲಂಬಿಯಾದ ನನಗೆ, ವೇದವ್ಯಾಸ ದೇವರಿಂದ ರಚಿತವಾದ ಭಾರತಾದಿ ಗ್ರಂಥಗಳ ತಾತ್ಪರ್ಯ ವೇನು, ಅರ್ಥವೇನು–ಇವುಗಳನ್ನು ನಿರ್ವಿಘ್ನವಾಗಿ ಗುರುಗಳ ಮುಖದಿಂದ ಉಪದೇಶ ಮಾಡಿಸೋವನಾಗು. ಕರುಣಾಸಮುದ್ರ ನಾದವನೇ, ಪ್ರತಿದಿನವಲ್ಲಿ ಭಗವತ್ಸ್ತ್ರೀವಾಕ್ಕೆ ಬರತಕ್ಕ ವಿಘ್ನಗಳ ಪರಿಹಾರ ಮಾಡಿ, ಅತ್ಯಂತ ದಯಾಯುಕ್ತವಾದ, ಪ್ರಸನ್ನೀಭೂತವಾದ ಕಡೆಗಣ್ಣಿನಿಂದ ನೋಡಿ, ಭಗವದನುಗ್ರಹಕ್ಕೆ ಪಾತ್ರನನ್ನಾಗಿ ಮಾಡೋವನಾಗು–ಎಂತ ಪ್ರಾರ್ಥಿಸಿದ್ದಾರೆ ಎಂತ ತಾತ್ಪರ್ಯ. ॥ ೭ ॥

**ಶ್ರೀಭಾವಪ್ರಕಾಶಿಕೆ**

**ಖಂ–ಖಂ**ದರೆ ಆಕಾಶವು. ಅದಕ್ಕೆ ಈಶನೆಂದರೆ, ಆಕಾಶಾತ್ಮ ನೆಂದರ್ಥ. ವೇದವ್ಯಾಸದೇವರು ಭಾರತವನ್ನು ರಚಿಸಿ, ಈ ಗ್ರಂಥವನ್ನು

ಬರೆಯಬೇಕೆಂದು ಗಣಪತಿಗೆ ಹೇಳಲು ಗಣಪತಿಯು, ಬರೆಯುವಾಗ ನನ್ನ ಲೇಖಣಿಯು ನಿಲ್ಲದಂತೆ, ಒಂದು ಪದವನ್ನು ಬರೆದು ಮುಗಿಸಿದ ಕೂಡಲೇ, ಮತ್ತೊಂದು ಪದವನ್ನು ಹೇಳುತ್ತ ಬರಬೇಕು. ಮುಂದೆ ಹೇಳಲು ಸಾವಕಾಶವಾಗಿ ಲೇಖನವು ನಿಂತರೆ, ನಾನು ಮುಂದೆ ಬರೆಯಲಾರೆನೆಂದನು. ಆಗ ವೇದವ್ಯಾಸದೇವರು ಹಾಗೆಯೇ ಆಗಬಹುದು. ಆದರೆ, ನಾನು ಹೇಳುವ ಶ್ಲೋಕಗಳಿಗೆ ಅರ್ಥವನ್ನು ಮಾಡಿಕೊಳ್ಳದೆ ನೀನು ಬರೆಯ ಬಾರದು. ಅದರರ್ಥ ಸಂಪೂರ್ಣವಾಗಿ ಮನಸ್ಸಿಗೆ ಬಂದನಂತರ ಬರೆಯ ಬೇಕೆಂದರು. ಅದರಂತೆ ಒಪ್ಪಿಕೊಂಡು, ಗ್ರಂಥವನ್ನು ಬರೆಯುತ್ತಿರಲು, ವೇದವ್ಯಾಸರು ರಚಿಸಿದಷ್ಟು ಮಾತ್ರ ಹೇಳಿಬಿಟ್ಟರು. ಮುಂದೆ ಗ್ರಂಥ ರಚಿಸಬೇಕು, ಲೇಖನವು ನಿಂತರೆ, ಗಣಪತಿಯು ಮುಂದೆ ಬರೆಯುವದಿಲ್ಲ. ಇದಕ್ಕೇನುಪಾಯವೆಂದು ಯೋಚಿಸಿ, ಮಧ್ಯದಲ್ಲಿ ಕೆಲವು ಶ್ಲೋಕಗಳನ್ನು ಬಹುಕಠಿನವಾಗಿ ರಚಿಸಿ ಹೇಳಿದರು. ಅದರರ್ಥವನ್ನು ಯೋಚಿಸುತ್ತಾ, ಗಣಪತಿಯು ಸ್ವಲ್ಪ ಕೂಡಲು, ಅಷ್ಟರಲ್ಲಿ ಬಹುಗ್ರಂಥಗಳನ್ನು ರಚಿಸಿದರು. ಅದು ಮುಗಿದಕೂಡಲೇ, ಮತ್ತೆರಡು ಕಠಿಣವಾದ ಶ್ಲೋಕಗಳನ್ನು ಹಾಕಿದರು. ಗಣಪತಿಯು ಸರ್ವಜ್ಞನಾದರೂ, ಅದರರ್ಥವನ್ನು ಮಾಡುವಾಗ ಯೋಚನೆ ಮಾಡಿ, ಅರ್ಥ ಮಾಡಬೇಕಾಯಿತು. ಹೀಗೆ, ಸಂಪೂರ್ಣ ಗ್ರಂಥವನ್ನು ಬರೆಸಿದರು. ಸಂಪೂರ್ಣವಾದ ಭಾರತ ೬೦ ಲಕ್ಷ ಗ್ರಂಥಗಳು–ವೇದವ್ಯಾಸದೇವರು ಮಾಡಿದುದು. ಅವುಗಳಲ್ಲಿ ೨೦ ಲಕ್ಷ ಶ್ಲೋಕಗಳು ದೇವಲೋಕದಲ್ಲೂ, ಋಷಿಲೋಕದಲ್ಲಿ ೧೫ ಲಕ್ಷ ಶ್ಲೋಕಗಳೂ, ಪಿತೃಲೋಕದಲ್ಲಿ ೧೪ ಲಕ್ಷ ಶ್ಲೋಕಗಳು ನಿಂತವು. ಉಳಿದವು ೧ ಲಕ್ಷ ಗ್ರಂಥ ಮಾತ್ರ ಭೂಮಿಯಲ್ಲಿ ನಿಂತವು. ಇವಲ್ಲದೆ ಹಮೋಪಾಖ್ಯಾನ ಮೊದಲಾದ ಉಪಾಖ್ಯಾನಗಳು ೨೪ ಸಹಸ್ರ ಗ್ರಂಥಗಳು ಅರಿತು, ಹರಿವಂಶವೂ ಭಾರತವೂ ಸೇರಿ ಒಂದು ಲಕ್ಷದ ಇಪ್ಪತ್ತೈದು ಸಾವಿರ ಗ್ರಂಥಗಳು–ಈಗ ಭೂಮಿಯಲ್ಲಿರುವವು. ಇವುಗಳಲ್ಲಿ ಗ್ರಂಥರಚನೆ ಮಾಡಲು ಅವಕಾಶ ತೆಗೆದುಕೊಳ್ಳಲು, ಮಧ್ಯೇ ಮಧ್ಯೇಹಾಕಿದ ಕಠಿಣ ಶ್ಲೋಕಗಳು.

"ಅಷ್ಟೌಶ್ಲೋಕ ಸಹಸ್ರಾಣಿ ಅಷ್ಟೌಶ್ಲೋಕ ಶತಾನಿಚ"–"ಅಹಂ ವೇದ್ಮಿ ಶುಕೋವೇತ್ತಿ ಸಂಜಯೋ ವೇತ್ತಿ ವಾನವಾ ॥"–ಎಂದು ಸಾವಿರದ ಎಂಟು ನೂರು ಶ್ಲೋಕಗಳನ್ನು ಕಠಿನವಾಗಿ ರಚಿಸಿ ವೇದವ್ಯಾಸ ದೇವರು ಹೇಳಿದ ವಾಕ್ಯವೇನೆಂದರೆ–"ಈ ೮,೦೦೦ ಶ್ಲೋಕಗಳ ಅರ್ಥಗಳನ್ನು ನಾನು ಬಲ್ಲೆನು. ನನ್ನ ಮಗನಾದ ಶುಕಾಚಾರ್ಯನೂ ಬಲ್ಲನು. ಸಂಜಯನು ನನ್ನ ಅನುಗ್ರಹದಿಂದ ಬಲ್ಲನು. ಜ್ಞಾನಿಯಾದ ವಿದುರನೂ ಬಲ್ಲವನೆಂದು ಹೇಳಿರುವರು. ಗಣಪತಿಗೆ ಇದರರ್ಥವು ಮನಸ್ಸಿಗೆ ಬಂದಿತೋ ಇಲ್ಲವೋ ಸಂಶಯಕ್ಕೆ ಆಸ್ಪದವೇ ಇಲ್ಲ. ಏಕೆಂದರೆ, ವೇದವ್ಯಾಸ ದೇವರಿಗೂ ಗಣಪತಿಗೂ ಮೊದಲು ನಡೆದ ಸಂಭಾಷಣೆಯಲ್ಲಿಯೇ ಅರ್ಥ ಮಾಡಿಕೊಳ್ಳದೆ ಬರೆಯಬಾರದೆಂದು ನಿಶ್ಚಯವಾಗಿದ್ದುದರಿಂದ, ಆ ಗ್ರಂಥ ವನ್ನು ಗಣಪತಿಯು ಬರೆದು ಇರುವುದರಿಂದಲೇ, ಗಣಪತಿಯು ಬಲ್ಲನೆಂದು ಸಿದ್ಧವಾಗುವುದು. ಈ ಅರ್ಥವನ್ನೇ ದಾಸಾರ್ಯರು ಇಲ್ಲಿ ಹೇಳಿರುವರು. ವೇದವ್ಯಾಸ ದೇವರು ಮಾಡಿದ ಗ್ರಂಥಗಳರ್ಥವನ್ನರಿತು ಪ್ರಯಾಸವಿಲ್ಲದೇ ಬರೆದು ವಿಸ್ತಾರಪಡಿಸಿರುವೆ. ಭಾರತ ಆದಿಪರ್ವದ ಆರಂಭದಲ್ಲಿ ಈ ಕಥೆ ಯನ್ನು ವಿಸ್ತಾರವಾಗಿ ಹೇಳಿರುವರು. ದಾಸಾರ್ಯರು ಪ್ರಾರ್ಥಿಸುತ್ತಾರೆ : ಎಲೈ ಪಾಶಪಾಣಿಯೇ ! ಭಾರತಾರ್ಥಗಳನ್ನು ಚೆನ್ನಾಗಿ ನೀನು ಬಲ್ಲೆಯಾದುದರಿಂದ, ಅದರರ್ಥವನ್ನು ನನಗೆ ತಿಳಿವಳಿಕೆಯಾಗುವಂತೆ ಮಾಡು. ನೀನು ಕೃಪಾಕಟಾಕ್ಷ ದಿಂದ ನೋಡು. ಗಣಪತಿಯು, ಕೃಪಾಕಟಾಕ್ಷದಿಂದ ನೋಡಿದರೆ, ಭಾರತಾದಿ ಗ್ರಂಥಗಳಿಗೆ ಸುಲಭವಾಗಿ ಅರ್ಥವಾಗುವುದೆಂಬ ತಾತ್ಪರ್ಯ. ॥ ೭ ॥

೩. ಭಾವದರ್ಪಣ ಟೀಕಾ :

ವೇಶ–ಆಕಾಶಾಧಿಪತಿ–ಎಂಬರ್ಥ. ವ್ಯಾಸಕೃತ ಗ್ರಂಥವನ್ನು ಆಯಾಸ ವಿಲ್ಲದೆಲೆ ಬರೆದವ–ಎಂಬರ್ಥ.

ತದುಕ್ತಂ ಋಕ್ ಸಂಹಿತಾಯಾಂ–

"ವಿಭಜ್ಯ ಸರ್ವವೇದಾಶ್ಚ ಲಿಖಿತ್ವೈವಸಮಾಸತ"–ಇತಿ ॥ ೭ ॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

"**ಖೇಶ**" ಇತಿ ॥ ಆಭಿಮಾನಿನ್ । "ಬರೆದು" ಭಾರತೀ ಸ್ಪಷ್ಟಾ ಇಯಂ ಕಥಾ ॥ ೭ ॥

## ಕನ್ನಡಾರ್ಥ

"**ಖೇಶ**"–ಆಕಾಶದ ಅಭಿಮಾನವುಳ್ಳವನು. "ಬರೆದು ಗಣಪತಿಯು ವ್ಯಾಸಕೃತಗಂಥಗಳನರಿತು ಪ್ರಯಾಸವಿಲ್ಲದರೆ ಬರೆದು ವಿಸ್ತರಿಸಿದನೆಂಬ ಕಥೆಯು ಮಹಾಭಾರತದಲ್ಲಿ ವಿಶದವಾಗಿಯೂ, ಸ್ಪಷ್ಟವಾಗಿಯೂ ನಿರೂಪಿತ ವಾಗಿದೆ ॥೭ ॥"

## ಶ್ರೀಗುರುಹೃದಯಪ್ರಕಾಶಿಕೆ

ಆಕಾಶಪತಿಯಾಗಿ ಖೇಶನೆಂದು ಹೆಸರುಳ್ಳವನೇ ಪರಮ ಸುಭಕ್ತಿ ಪೂರ್ವಕವಾಗಿ ವ್ಯಾಸಕೃತ ಮಹಾಭಾರತ ಗ್ರಂಥಾರ್ಥ ತಿಳಿದು, ಆಯಾಸ ವಿಲ್ಲದೆ ಪುಸ್ತಕ ಬರೆದು ಲೋಕದಲ್ಲಿ ವಿಸ್ತಾರವನ್ನು ಮಾಡಿದೆ. ಪಾಶಪಾಣಿ ಯಾದ ಸ್ವಾಮಿಯೇ ಅಪವರ್ಗಗಳನ್ನು ನನಗೆ ಉಪದೇಶಿಸು. ಕರುಣಾ ಸಮುದ್ರನೇ ಸದಾ ಕೃಪಾಕಟಾಕ್ಷದಿಂದ ನಮ್ಮನ್ನು ನೋಡು. ॥ ೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಖಂ–ಅಂದರೆ ಆಕಾಶ. ಈಶ–ಎಂದರೆ ಅಧಿಪತಿ. ಪಂಚಮಹಾಭೂತಗಳಲ್ಲಿ ಮೊದಲನೆಯ **ಆಕಾಶತತ್ತ್ವ**. ಆಕಾಶತತ್ತ್ವಾಭಿಮಾನಿ ದೇವತಾ ಶ್ರೀವಿಘ್ನೇಶ್ವರನು. ಇದರಿಂದ **ಖೇಶನಾಮಕನು**. ಆಕಾಶದ ಗುಣವು ಶಬ್ದವು. ಇದರಿಂದ ವಿನಾಯಕನು ಶಬ್ದಗುಣಗ್ರಾಹಕನು.

೨. ಭಗವಾನ್ ಶ್ರೀವೇದವ್ಯಾಸರು ಶ್ರೀಮನ್ಮಹಾಭಾರತ ಗ್ರಂಥವನ್ನು ರಚಿಸಬೇಕೆಂದು ಸಂಕಲ್ಪಿಸಿ, ಗ್ರಂಥಸ್ಥ ವಿಷಯಗಳನ್ನು ಬರೆಯುವವನ್ನಾಗಿ ಗಣಪತಿಯನ್ನು ಒಪ್ಪಿಸಿದನು. ಶ್ರೀಮನ್ಮಹಾಭಾರತವು ಸರ್ವಶಾಸ್ತ್ರ ನಿರ್ಣಾಯಕವಾದ ಉದ್ಗ್ರಂಥವು. ವಿದ್ವತ್ಪ್ರಪಂಚದಲ್ಲಿ ಶ್ರೀಮನ್ಮಹಾಭಾರತಕ್ಕೆ ಶ್ರೇಷ್ಠಸ್ಥಾನವಿದೆ. ಇತಿಹಾಸಪ್ರಸ್ಥಾನದಲ್ಲಿ ಸುಪ್ರಸಿದ್ಧವಾದ ಶ್ರೀಮನ್ಮಹಾಭಾರತವು ಪಂಚಮವೇದವೆಂದು ಖ್ಯಾತವಾಗಿದೆ.

ಗಣೇಶನು ಶ್ರೀ ವೇದವ್ಯಾಸರ ಮುಂದೆ ತನ್ನ ಷರತ್ತನ್ನು ಇಟ್ಟನು. ಮಧ್ಯದಲ್ಲಿ ನಿಲ್ಲಿಸದೇ ಏಕಧಾರಾರೀತಿಯಲ್ಲಿ ಹೇಳಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಸವಾಲಾಗಿ, ಭಗವಾನ್ ಶ್ರೀವೇದವ್ಯಾಸರು ಗಣನಾಯಕನಿಗೆ-"ನೀನು ಪ್ರತಿವಾಕ್ಯವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಬರೆಯಬೇಕು"-ಎಂದರು. ಆ ಷರತ್ತಿಗೆ ಒಪ್ಪಿದ ಗಣಪತಿಯು.

ಈ ರೀತಿಯಲ್ಲಿ, ಭಾರತಾದಿ ಸದ್ಗ್ರಂಥಗಳಲ್ಲಿ ಪ್ರತಿವಾಕ್ಯವನ್ನು ಚೆನ್ನಾಗಿ ತಿಳಿದುಕೊಂಡು ಬರೆದು ಮುಗಿಸಿದನು. ಇದರಿಂದ, **ಲೇಖರಾಗ್ರಣಿ**-ಎಂದು ಹೆಸರು ಬಂದಿತು.

**ಪರಮ**-ಸರ್ವೋತ್ತಮರಾದ ಶ್ರೀವೇದವ್ಯಾಸರು. ಸಾಕ್ಷಾತ್ ಶ್ರೀಮನ್ನಾರಾಯಣನೇ ವೇದವ್ಯಾಸ ನಾಮಕನಾಗಿ ಪರಾಶರ-ಸತ್ಯವತಿಯಲ್ಲಿ ಅವತರಿಸಿದನು. ವ್ಯಾಸಕೃತಗ್ರಂಥಗಳನ್ನು ಚೆನ್ನಾಗಿ ಪ್ರಮೇಯಾರ್ಥ ರಹಸ್ಯಗಳನ್ನು ಪ್ರತಿಹಂತದಲ್ಲಿಯೂ ಅರಿತು, ಬರೆದನು. ಆ ಜ್ಞಾನವನ್ನು ಲೋಕದಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಿದನು. ಇದರಿಂದ, **ವಿಸ್ತರಿಸಿದೆಯೋ ಲೋಕದೊಳು**-ಎಂದಿದ್ದಾರೆ.

೩. ವಿಘ್ನರಾಜನು ತನ್ನ ಹಸ್ತದ್ವಯಗಳಲ್ಲಿ ಪಾಶವನ್ನು ಒಂದು ಕೈಯಲ್ಲೂ, ಅಂಕುಶವನ್ನೂ ಮತ್ತೊಂದು ಹಸ್ತದಲ್ಲೂ ಧರಿಸಿದ್ದಾನೆ. ಇದರಿಂದ, **ಪಾಶಪಾಣಿಯೆ**-ಎಂದು ಪ್ರಾರ್ಥಿಸಿದ್ದಾರೆ.

೪. ನೀನು ಬರೆದ ಮಹಾನ್‌ಗ್ರಂಥಗಳಲ್ಲಿ ಉಕ್ತವಾಗಿರುವ ಪ್ರಮೇಯಾರ್ಥಗಳನ್ನೂ ಮತ್ತು ಶಾಸ್ತ್ರರಹಸ್ಯಗಳನ್ನೂ ನನಗೆ ಗುರೂಪದೇಶ ದ್ವಾರಾ ತಿಳಿಸೆಂದು **ಪ್ರಥಮ**ದಯಾಸಾಗರನಾದ ಪಾರ್ವತೀನಂದನನಲ್ಲಿ ಮೊರೆಇಟ್ಟದ್ದಾರೆ.

೫. ಗಣಾಧಿಪನು ಪರಮಕರುಣಾಸಮುದ್ರನು. ತನ್ನ ಭಕ್ತ ಜನರಿಗೆ ಬರುವ ಸಕಲ ವಿಘ್ನಗಳನ್ನು ಪರಿಹರಿಸಿ, ಸತ್ಸಾಧನೆಗೆ ಮಾರ್ಗದರ್ಶಿಯಾಗಿರುವ **ಕರುಣಾ**ಮಯನು. ಇದರಿಂದ ದಯಾದೃಷ್ಟಿಯಿಂದ ನೋಡಿ, ಅನುಗ್ರಹಿಸೆಂದು ಆ ಅಂಬರಾಧೀಶನಲ್ಲಿ ಪ್ರಾರ್ಥಿಸಿದ್ದಾರೆ. ॥ ೭ ॥

ಬೇಡಿದಿಷ್ಟಾರ್ಥಗಳ ಪ್ರತಿದಿನದಿ

## ಪದ್ಯ–೮

**ಮೂಲ :**

**ಶ್ರೀಶನತಿನಿರ್ಮಲ ಸುನಾಭೀ ।**
**ದೇಶವಸ್ಥಿತ ರಕ್ತ ಗಂಧಾ ।**
**ತಿಶೋಭಿತಗಾತ್ರ ಲೋಕಪವಿತ್ರ ಸುರಮಿತ್ರ ॥**
***ಮೂಷಕಸುವರವಹನ ಪ್ರಾಣಾ ।**
**ವೇಶಯುತ ಪ್ರಖ್ಯಾತ ಪ್ರಭು ಪೂ ।**
**ರೈಸು ಭಕ್ತರು ಬೇಡಿದಿಷ್ಟಾರ್ಥಗಳ ಪ್ರತಿದಿನದಿ ॥ ೮ ॥**

**ಅವತರಣಿಕೆ :**

ನಾಭೀಪ್ರದೇಶಸ್ಥಿತ ವಿಘ್ನರಾಜನನ್ನು ಭಕ್ತರ ಇಷ್ಟಾರ್ಥಗಳನ್ನು ಪೂರೈಸೆಂದು ಪ್ರಾರ್ಥಿಸುತ್ತಾರೆ. ॥ ೮ ॥

**ಪ್ರತಿಪದಾರ್ಥ :**

**ಅತಿನಿರ್ಮಲ** = ಅತ್ಯಂತ ದೋಷವಿದೂರನಾದ, **ಶ್ರೀಶನ** = ಶ್ರೀರಮಣನಾದ ಶ್ರೀಪರಮಾತ್ಮನ, **ಸುನಾಭೀದೇಶವಸ್ಥಿತ** = ಮಂಗಳವಾದ ನಾಭೀ ದೇಶದಲ್ಲಿ ವಿದ್ಯಮಾನಾದವನೇ, **ರಕ್ತಗಂಧಾತಿಶೋಭಿತಗಾತ್ರ** = ರಕ್ತ ಗಂಧದಿಂದ ಪ್ರಕಾಶಮಾನವಾದ ಶರೀರವುಳ್ಳವನೇ, **ಲೋಕಪವಿತ್ರ** = ಸಕಲ ವಿಘ್ನಗಳ ಪರಿಹಾರದ್ವಾರಾ, ಪವಿತ್ರಕರ್ಮಗಳನ್ನು ಆಚರಿಸುವುದಕ್ಕೆ ಸಜ್ಜನರಿಗೆ ಅನುಕೂಲವಾಗಿರುವವನೇ, **ಸುರಮಿತ್ರ** = ಸಕಲದೇವತೆಗಳಿಗೆ ಮಿತ್ರನಾಗಿರತಕ್ಕವನೇ. **ಮೂಷಕಸುವರ ವಹನ** = ಸಮೀಚೀನವಾದ ಮೂಷಕವೇ ವಾಹನವನ್ನಾಗಿ ಉಳ್ಳವನೇ, **ಪ್ರಾಣಾವೇಶಯುತ** = ಶ್ರೀವಾಯುದೇವರ ಆವೇಶಯುಕ್ತನಾದವನೇ, **ಪ್ರಖ್ಯಾತ** = ಸುಪ್ರಸಿದ್ಧನಾದವನೇ, **ಭಕ್ತರು ಬೇಡಿದಿಷ್ಟಾರ್ಥಗಳ** = ನಿನ್ನ ಭಕ್ತರು ಬೇಡುವ ಸಕಲ ಇಷ್ಟಾರ್ಥಗಳನ್ನು (ಭಗವದನುಗ್ರಹಪ್ರಾಪ್ತಿಗೆ ಸಾಧನಗಳಾದ ಜ್ಞಾನ–ಭಕ್ತಿ–

* (ಶ್ರೀ ಮೂಷಕಾಸುವಹನ–ಎಂಬ ಪಾಠಾಂತರವೂ ಇದೆ).

ವೈರಾಗ್ಯಗಳೆಂಬ ಇಷ್ಟಾರ್ಥಗಳೆಂದರ್ಥ), **ಪ್ರತಿದಿನದಿ** = ಪ್ರತಿನಿತ್ಯವೂ, **ಪ್ರಭು** = ವಿಘ್ನನಾಯಕನೇ, **ಪೂರೈಸು** = ಪೂರ್ಣಮಾಡು - ಎಂದು ಪ್ರಾರ್ಥಿಸಿದ್ದಾರೆ-ದಾಸಾರ್ಯರು. ॥ ೮ ॥

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ವಿಘ್ನೇಶ್ವರನ್ನ ಭಕ್ತರ ಇಷ್ಟಾರ್ಥಗಳನ್ನು ಪೂರ್ಣ ಮಾಡೆಂದು ಪ್ರಾರ್ಥಿಸುತ್ತಾರೆ.

ಅತ್ಯಂತ ದೋಷದೂರನಾದ ಶ್ರೀಪತಿಯಾದ, ವಿಧಾಡ್ರೂಪಿಯಾದ ಪರಮಾತ್ಮನ, ಮಂಗಳವಾದ ನಾಭೀದೇಶದಲ್ಲಿ ವಿದ್ಯಮಾನನಾದವನೇ, ಶ್ರೀಶನಾದ ವೈರಾಜಮೂರ್ತಿಯ ಸುನಾಭಿ ಎಂಬ ಅಂತರಿಕ್ಷ ಪ್ರದೇಶದಲ್ಲಿ, ಆವಾಸಮಾಡುವನೇ, ರಕ್ತಗಂಧದಿಂದ ಪ್ರಕಾಶಮಾನವಾದ ಶರೀರ ವುಳ್ಳವನೇ, ಭಗವದ್ಭಕ್ತರಾದವರಿಗೆ ಸತ್ಕಾರ್ಯ ಪ್ರತಿಬಂಧಕಗಳಾದ ವಿಘ್ನಗಳ ಪರಿಹರಿಸಿ, ಪವಿತ್ರಕರ್ಮಗಳ ಆಚೋರಿಸೋದಕ್ಕೆ ಅನುಕೂಲನಾಗಿರ ತಕ್ಕವನೇ, ಸಮಸ್ತದೇವತೆಗಳಿಗೆ ಸ್ನೇಹಿತನಾದವನೇ ಮತ್ತು ತತ್ತ್ವದೇವತೆಗಳ ದ್ವಾರಾ, ಶ್ರೀಪರಮಾತ್ಮ ಏಕಾದಶೇಂದ್ರಿಯಗಳ ವ್ಯಾಪಾರ ನಡಸತಾ ನೆಂಬೋ ಅನುಸಂಧಾನವುಳ್ಳ ಅಧಿಕಾರಿಗಳಿಗೆ ಮಿತ್ರನಾದವನೇ, ಸಮೀಚೀನವಾದ ಮೂಷಿಕವೇ ವಾಹನವಾಗುಳ್ಳವನೇ, ಶ್ರೀವಾಯುದೇವರ ಆವೇಶಯುಕ್ತನಾದವನೇ, ವಿಘ್ನಪರಿಹಾರಕನೆಂದು ಪ್ರಕರ್ಷೇಣ ಖ್ಯಾತ ನಾದವನೇ, ವಿಘ್ನಪರಿಹಾರಕ್ಕೇನು, ವಿಘ್ನಕೊಡೋದಕ್ಕೇನು, ಸ್ವಾಮಿ ಯಾದವನೇ, ಪ್ರತಿದಿನದಲ್ಲೂ ಭಕ್ತರು ಬೇಡಿದಂಥಾ, ಭಗದವನು ಗ್ರಹಕ್ಕಾಗಿ ಬೇಕಾದ ಜ್ಞಾನ ಭಕ್ತಿ ವೈರಾಗ್ಯಗಳೆಂಬ ಇಷ್ಟವಾದ ಪ್ರಯೋಜನಗಳಿಗೆ ವಿಘ್ನಗಳು ಬಾರದಂತೆ ಪೂರ್ಣಮಾಡು-ಎಂತ ಪ್ರಾರ್ಥನಾ ಮಾಡಿದ್ದಾರೆಂದು ತಾತ್ಪರ್ಯ ॥ ೮ ॥

೨. **ಭಾವಪ್ರಕಾಶಿಕೆ** :

ಶ್ರೀಪರಮಾತ್ಮನ ನಾಭೀಪ್ರದೇಶದಲ್ಲಿರುವ ಆಕಾಶದಲ್ಲಿ ವಾಸ ಮಾಡುತ್ತಿರುವೆ! ಎಲೈ ಗಣಪತಿಯೇ! "ರಕ್ತಾಂಬರೋ ರಕ್ತತನುಃ

ರಕ್ತಮಾಲ್ಯಾನುಲೇಪನಃ ॥"-ಎಂದು ತಂತ್ರಸಾರಸಂಗ್ರಹದಲ್ಲಿ ಗಣಪತಿ ಮಂತ್ರದ ಧ್ಯಾನಶ್ಲೋಕದಲ್ಲಿ ಶ್ರೀಮನ್ಮಧ್ವಾಚಾರ್ಯರು ಹೇಳಿರುವ ವಾಕ್ಯವಿದು. ಹಾಗೆ, ಕೆಂಪುಗಂಧದಿಂದ ಅತ್ಯಂತ ಶೋಭಿತವಾದ ಶರೀರ ಉಳ್ಳವನಾಗಿರುವೆ! ಲೋಕವನ್ನೇ ಪವಿತ್ರವನ್ನಾಗಿ ಮಾಡುತ್ತಿರುವೆ. ನೀನು ದೇವತೆಗಳಿಗೆ ಅತ್ಯಂತ ಮಿತ್ರನು. ಮೂಷಿಕ ಶ್ರೇಷ್ಠವನ್ನು ವಾಹನವನ್ನಾಗಿ ಮಾಡಿಕೊಂಡಿರುವೆ. ಪ್ರಾಣದೇವರ ಆವೇಶದಿಂದ ಲೋಕಪ್ರಖ್ಯಾತ ನಾಗಿರುವೆ! ಎಲೈ ಪ್ರಭೋ! ಪ್ರತಿದಿವಸದಲ್ಲೂ ಭಕ್ತರು ಬೇಡುತ್ತಿರುವ ಇಷ್ಟಾರ್ಥಗಳನ್ನು ಪೂರೈಸು. ॥ ೮ ॥

**೩. ಭಾವದರ್ಪಣ ಟೀಕಾ :**

ಶ್ರೀಶ – ನಾಭಿದೇಶ – ಶ್ರೀಪರಮಾತ್ಮನ ನಾಭೀದೇಶದಲ್ಲಿ ವಾಸವುಳ್ಳವ – "ಶತ್ಸವನೀ ಜ ವಿಘ್ನೇಶ"–ಇತಿ ಜ. ॥ ೮॥

**೫. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

"ಶ್ರೀಶ" ಇತಿ ॥ "ನಾಭ್ಯಾ ಆಸೀದಂತರಿಕ್ಷಮಿತಿ ಶ್ರುತೇಃ ॥ ಸೋತ್ಪತ್ತ್ಯಾಂಗಾಶ್ರಿತಾಃ ದೇವಾ" ಇತ್ಯುಕ್ತೇಃ. ॥ ೮॥

### ಕನ್ನಡಾರ್ಥ

ಹರಿಯ ನಾಭಿಯಿಂದ ಅಂತರಿಕ್ಷವು (ಆಕಾಶವು) ಉತ್ಪನ್ನ ವಾಯಿತೆಂಬ ಶ್ರುತಿಯು ಇದ್ದುದರಿಂದ, ಗಣಪತಿಯು (ಆಕಾಶಾಭಿ ಮಾನಿಯು) "ಹರಿಯ 'ನಿರ್ಮಲ ಸುನಾಭದೇಶವಸ್ಥಿತ"–ನೆಂದು ಹೇಳಿರುತ್ತಾರೆ. ತಮ್ಮ ಉತ್ಪತ್ತಿಯ ಸ್ಥಾನವಾದ ಪರಮಾತ್ಮನ ಆ ಅವಯವಗಳನ್ನು ಆಶ್ರಯಿಸಿರುತ್ತಾರೆ. ॥ ೮ ॥

### ಶ್ರೀಗುರುಹೃದಯಪ್ರಕಾಶಿಕೆ

ಶ್ರೀಶನಾದ ವೈರಾಜಮೂರ್ತಿಯ ಸುನಾಭಿಯೆಂಬ ಅಂತರಿಕ್ಷವು ದೇಶದಲ್ಲಿ ಆವಾಸಮಾಡುವವನೇ, ಕೆಂಪುಗಂಧದಿಂದ ಸೋಭಿಸುವ ಶರೀರ ಉಳ್ಳವನೇ, ಲೋಕಪಾವನನೇ, ದೇವತೆಗಳಿಗೆ ಮಿತ್ರನೇ, ಮೂಷಕವೆಂಬ

ಇಲಿಯೇ ವಾಹನವಾಗಿ ಉಳ್ಳವನೇ, ಮುಖ್ಯಪ್ರಾಣದೇವರ ಆವೇಶ ಉಳ್ಳವನೇ, ಪ್ರಸಿದ್ಧ ಪ್ರಭುವೇ, ಸದಾಭಕ್ತರು ಬೇಡಿದ ಇಷ್ಟಾರ್ಥಗಳನ್ನು ಪೂರ್ತಿ ಮಾಡಿಕೊಡು. ॥ ೮ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ವಿರಾಡ್ರೂಪಿಯಾದ ಶ್ರೀಪರಮಾತ್ಮನ ನಾಭೀಪ್ರದೇಶದಲ್ಲಿ ವಾಸಿಸುತ್ತಾನೆ-ಶ್ರೀ ಗಣಪತಿ. ನಾಭೀಪ್ರದೇಶಗತ ಆಕಾಶವು ಗಣಪ ಮಂದಿರವು.

"<u>ನಾಭ್ಯಾ ಆಸೀದಂತರಿಕ್ಷಮ್</u>" - **ಎಂಬ ಪುರುಷಸೂಕ್ತ ವಾಕ್ಯ ಪ್ರಮಾಣ.**

ಶ್ರೀ-ನಾಮಕಳಾದ ಲಕ್ಷ್ಮೀಪತಿಗೆ ಪತಿಯೂ, ನಿಯಾಮಕನೂ ಆದ **ಶ್ರೀ ಹರಿಯು ಶ್ರೀಶನು.** ಅವನ **ಅತಿನಿರ್ಮಲ**-ಎಂದರೆ, ಪರಮಮಂಗಳ ಕರವಾದ (ನಿರ್ದೋಷವಾದ) ಅಪ್ರಾಕೃತ ಸ್ವರೂಪಾತ್ಮಕವಾದ, **ಸುನಾಭೀ-** ಸಮೀಚೀನವಾದ ನಾಭೀ ಪ್ರಕಾಶಗತ, **ದೇಶ-**ಆಕಾಶದಲ್ಲಿ ವಾಸಿಸುವ-ಎಂತ ತಾತ್ಪರ್ಯ.

೨. ವಿನಾಯಕನ ದೇಹವು ಕೆಂಪುವರ್ಣದ ಗಂಧಲೇಪನದಿಂದ ಶೋಭಾಯಮಾನವಾಗಿದೆ. ಇದರಿಂದ, **ರಕ್ತಗಂಧ ಅತಿಶೋಭಿತಗಾತ್ರ-** ಎಂದಿದ್ದಾರೆ ದಾಸಾರ್ಯರು. <u>ಕೇಸರೀ ವರ್ಣರಂಜಿತ ಗಂಧ.</u>

"**ರಕ್ತಾಂಬರೋ** ರಕ್ತತನುಃ ರಕ್ತಮಾಲ್ಯಾನುಲೇಪನಃ"-ಎಂದು ತಂತ್ರಸಾರಸಂಗ್ರಹ. ಅಂದರೆ, ಗಣಪತಿಯು ಉಟ್ಟಿರುವ ವಸ್ತ್ರವು ಕೆಂಪು ವರ್ಣದ್ದು. ಹೊದ್ದಿರುವ ವಸ್ತ್ರವೂ ಅದೇ ವರ್ಣ ವಿಶಿಷ್ಟವಾದದ್ದು. ಅವನ ತನು(ದೇಹ) ರಕ್ತಗಂಧಾನುಲೇಪಿತವು. ರಕ್ತಮಾಲಾಧರನು.

೩. **ಲೋಕ**ಗತ ಜನರ ವಿಘ್ನಗಳನ್ನು ಪರಿಹರಿಸಿ, ಪವಿತ್ರ **ಕಾರ್ಯ**ಗಳಲ್ಲಿ ಅನುಗೋಳಿಸಲು ಸಹಾಯಕನಾಗಿರುವುದರಿಂದ-**ಲೋಕ ಪವಿತ್ರನು.** **ಲೋಕ**ಪಾವನೆಂದರ್ಥ.

೪. **ಆದಿಪೂಜಿತ**ನಾಗಿರುವುದರಿಂದ, ಸಕಲದೇವತೆಗಳಿಗೂ ಇಷ್ಟದೇವತೆ. ಇದರಿಂದ, **ಸುರಮಿತ್ರನು**-ಆಕಾಶಾಭಿಮಾನಿ ತತ್ತ್ವದೇವತೆ.

೫. ಇಲಿಯನ್ನೇ ವಾಹನವನ್ನಾಗಿ ಉಳ್ಳವನು. ಇದರಿಂದ, **ಮೂಷಿಕಸುರವರ ವಾಹನನು.** ಇಲಿಯು ಚಂಚಲವೃತ್ತಿಯ ಸಣ್ಣ ಪ್ರಾಣಿ. ಗಣಪತಿಯಾದರೋ ಸ್ಥೂಲಕಾಯದ ವಕ್ರತುಂಡನು. ಜೀವರ ಮನಸ್ಸು ಅತಿಚಂಚಲವು. ಅದನ್ನು ನಿಯಂತ್ರಿಸುವುದರಿಂದ, ಮೂಷಿಕವಾಹನವು ಗಣಪತಿಗೆ ಸಾಂಕೇತವಾಗಿದೆ.

**ಮೂಷಕಾಸುರವಹನ**–ಎಂತಲೂ ಇನ್ನೊಂದು ಪಾಠವಿದೆ. ಮೂಷಕ ಎಂಬ ಹೆಸರಿನ ದೈತ್ಯನನ್ನು ಕೊಂದನು. ಅದರ ಸಾಂಕೇತವಾಗಿ ಮೂಷಕವನ್ನೇ ವಾಹನವನ್ನಾಗಿ ಮಾಡಿಕೊಂಡನು–ಮೂಗಣ್ಣನ ಪುತ್ರ.

೬. ಪ್ರಾಣ ದೇವರ ಆವೇಶದಿಂದ ನಿತ್ಯ ಸುಖ್ಯಾತಾಗಿದ್ದಾನೆ. ಇದರಿಂದ, **ಪ್ರಾಣಾವೇಶಯುತನು.** ಇದರಿಂದಲೇ, ವಕ್ರತುಂಡನಲ್ಲಿ ಚಕ್ರಪಾಣಿಯ ವಿಶೇಷಾನುಗ್ರಹ.

೭. ಆದಿಪೂಜಿತನಾದ ನೀನು **ಪ್ರಖ್ಯಾತನು.** ತತ್ತ್ವಾಭಿಮಾನಿ ಯಾದ್ದರಿಂದ, ಎನ್ನ ಸ್ವಾಮಿಯು (ಪ್ರಭು), ಆಕಾರಣದಿಂದ, ನಿತ್ಯದಲ್ಲೂ ನಿನ್ನ ಭಕ್ತರು ಬೇಡುತ್ತಿರುವ ಸದಾ ಇಷ್ಟಾರ್ಥಗಳನ್ನು ಪೂರೈಸೆಂದು ಪ್ರಾರ್ಥಿಸಿರುತ್ತಾರೆ. ॥ ೮ ॥

## ಪದ್ಯ–೯

**ಮೂಲ :**

**ಶಂಕರಾತ್ಮಜ ದೈತ್ಯರಿಗತಿ ಭ ।**
**ಯಂಕರಗತಿಗಳೀಯ ಲೋಸುಗ ।**
**ಸಂಕಟ ಚತುರ್ಥಿಗನೆನಿಸಿ ಅಹಿತಾರ್ಥಗಳ ಕೊಟ್ಟು ॥**
**ಮಂಕುಗಳ ಮೋಹಿಸುವೆ ಚಕ್ರದ ।**
**ಟಾಂಕಿತನ* ದಿನದಿನದಿ ತ್ವತ್ಪದ ।**
**ಪಂಕಜಗಳಿಗೆ ಬಿನ್ನೈಸುವೆನು ಪಾಲಿಪುದು ಎಮ್ಮ ॥ ೯ ॥**

**ಅವತರಣಿಕೆ :**

ಕ್ಷುದ್ರೋಪಾಸನಾರೂಪವಾದ ಸಾಧನೆಗಳನ್ನು ಅಸುರಸ್ವಭಾವದ ಜನರಿಂದ ಮಾಡಿಸಿ, ಅವರಿಗೆ ಅಹಿತಾರ್ಥಗಳನ್ನು ಕೊಟ್ಟು, ಮಂಕುಗಳನ್ನು ಮೋಹಿಸುವನೆಂದು ತಿಳಿಸುತ್ತಾರೆ. ॥ ೯ ॥

**ಪ್ರತಿಪದಾರ್ಥ :**

**ಶಂಕರಾತ್ಮಜ** = ರುದ್ರದೇವರ ಪುತ್ರನಾದ ವಿನಾಯಕನೇ, **ದೈತ್ಯರಿಗೆ** = ಭಗವದ್ದ್ವೇಷಿಗಳೂ, ತಮೋಯೋಗ್ಯಸ್ವಭಾವವುಳ್ಳವರೂ ಆದ ಅಸುರ ಜನರಿಗೆ, **ಅತಿ ಭಯಂಕರ** = ಅತ್ಯಂತ ಭೀಕರವಾದ, **ಗತಿಗಳ** = ಅಂತಿಮ ಗತಿಗಳನ್ನು, **ಈಯಲೋಸುಗ** = ಕೊಡುವುದಕ್ಕೋಸ್ಕರ, **ಸಂಕಟ ಚತುರ್ಥಿಗನೆಂದು** = ಸಂಕಟಗಣಪತಿ–ಎಂಬ ಹೆಸರಿನಿಂದ, **ಎನಿಸಿ** = ಕರೆಯಿಸುವವನಾಗಿ, **ಅಹಿತಾರ್ಥಗಳ ಕೊಟ್ಟು** = ತಮಸ್ಸಿನ ಪ್ರಾಪ್ತಿಗೆ ಬೇಕಾದ ಇಷ್ಟಾರ್ಥಗಳನ್ನು ಸಲ್ಲಿಸಿ, **ಮಂಕುಗಳ** = ಅಜ್ಞಾನಸ್ವರೂಪಯುಕ್ತವಾದ

---

*(ಶ್ರೀ ಚಕ್ರದ । ಟಾಂಕಿತಗೆ ಅತಿಪ್ರಿಯನ–
ಚಕ್ರದ । ಟಾಂಕಿತನ ತೋರಿಸು ದಿನದಿ
ಚಕ್ರಗ । ದಾಂಕಿತನ ತೋರಿಸು ದಿನದಿ–ಎಂಬ ಮೂರು ಪಾಠಾಂತರಗಳು ಇವೆ)

ದೈತ್ಯರನ್ನೂ, **ಮೋಹಿಸುವೆ** = ಮೋಹಯುಕ್ತರನ್ನಾಗಿ ಮಾಡುವೆ. (ಶ್ರೀ ಗಣಪತಿಯೇ ಸರ್ವೋತ್ತಮನು. ಸಕಲೇಷ್ಟದಾಯಕನು–ಎಂಬ ಭಾವನೆ ಯನ್ನು ಅವರ ಮನಸ್ಸಿನಲ್ಲಿ ಮೂಡುವಂತೆ ಮಾಡಿ), **ಚಕ್ರದರಾಂಕಿತನ** = ಚಕ್ರ–ಶಂಕಪಾಣಿಯಾದ ಶ್ರೀಪರಮಾತ್ಮನನ್ನು, **ದಿನದಿನದಿ** = ಪ್ರತಿನಿತ್ಯ ದಲ್ಲೂ, **ತೋರು** = ಅಪರೋಕ್ಷ ದ್ವಾರಾ ತೋರಿಸುವವನಾಗು. **ತ್ವತ್ಪದ ಪಂಕಜಗಳಿಗೆ** = ನಿನ್ನ ಚರಣಕಮಲಗಳಿಗೆ, **ಎಮ್ಮ ಪಾಲಿಪುದು** = ನಮ್ಮ ಗಳನ್ನು ಕಾಪಾಡಬೇಕೆಂದು, **ಬಿನ್ನೈಸುವೆನು** = ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ॥ ೯ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಗಣೇಶನ್ನ ಪ್ರಾರ್ಥಿಸತಾರೆ.

ರುದ್ರದೇವರ ಪುತ್ರನಾದ ವಿನಾಯಕನೇ, ಭಗವದ್ವೇಷಿಗಳಾದ ಅಸುರರಿಗೆ, ಅತ್ಯಂತ ಭೀತಿಕರವಾದ ಅವರವರ ಸ್ವರೂಪ ಗತಿಗಳ ಅನುಸರಿಸಿ, ಅಧಂತಮೋಲೋಕ ಕೊಡೋವಕ್ಯೋಸ್ಕರ, ಸಂಕಟ ಚತುರ್ಥಿಗ ಎಂತ ಎನಿಸಿದವನಾಗಿ, ಅಥವಾ ಸಂಕಟಚತುರ್ಥಿ–ಎಂಬ ವ್ರತದಿಂದ ಪೂಜಿತನಾಗಿ, ದೈತ್ಯರಲ್ಲಿ ಅಹಿತವಾದ ಮನಸ್ಸುಳ್ಳವನಾಗಿ, ತಮಸ್ಸು ಐದೋದಕ್ಕೆ ಕಾರಣಗಳಾದ ಪ್ರಯೋಜನಗಳ ಕೊಟ್ಟು, ಸ್ವರೂಪ ಸ್ವಭಾವವೇ ಅಜ್ಞಾನಸ್ವರೂಪವಾದ್ದರಿಂದ–ಮಂಕುಸ್ವಭಾವದವರಾದ ದೈತ್ಯರ (ಇನ್ನೊಂದು ಅರ್ಥಸಹಾಯಿಗಳಾದ), ಭಗವಂತನಲ್ಲಿ ದೋಷಗಳೇ ಎಣಿಸುವಂತೆ ಮೋಹಯುಕ್ತರ ಮಾಡುವಿ. ಚಕ್ರ ಶಂಖಪಾಣಿಯಾದ ಶ್ರೀಪರಮಾತ್ಮನ ಪ್ರತಿದಿನದಲ್ಲೂ ಅಪರೋಕ್ಷದಿಂದ ತೋರಿಸೋವನಾಗು. ನಿನ್ನ ಪಾದಕಮಲ ಗಳಿಗೆ ವಿಜ್ಞಾಪನೆ ಮಾಡಿಕೊಂಬುವೆನು–ನಮ್ಮನ್ನು ಕಾಪಾಡಬೇಕು–ಎಂದು ಪ್ರಾರ್ಥಿಸಿ–ಎಂತ ತಾತ್ಪರ್ಯ. ॥ ೯ ॥

**೨. ಭಾವಪ್ರಕಾಶಿಕೆ** :

ಎಲೈ ರುದ್ರದೇವರ ಕುವರನೆ! ನಿನ್ನ ಉದ್ದೇಶವಾಗಿ, ಅನೇಕರು ಸಂಕಟ ಚತುರ್ಥೀ ವ್ರತವೆಂದು ಪ್ರತಿ ತಿಂಗಳ ಕೃಷ್ಣಪಕ್ಷ ಚತುರ್ಥೀದಿವಸದಲ್ಲಿ

ಮಾಡುವರು. ಅಲ್ಲಿ, ಆ ದಿವಸದಲ್ಲಿ ಸನ್ನಿಹಿತನಾಗಿದ್ದು, ಅವರಿಗೆ ಕಿಂಚಿದಿಷ್ಟಾರ್ಥವನ್ನು ಪೂರೈಸಿದಂತೆ ತೋರಿಸಿ, ಆ ಮೂರ್ಖಜನರನ್ನು ಮೋಹಿಸಿ, ಕಡೆಗೆ ಅವರಿಗೆ ಅನರ್ಥವಾದ ಗತಿಯನ್ನೇ ಕೊಡಿಸುವೆ. ದೈತ್ಯರು ಅವರ ಆವೇಶವುಳ್ಳವರು ಇವರೇ, ಆ ವ್ರತವನ್ನು ಮಾಡುವರು. ಅವರಿಗೆ ಅಧೋಗತಿಯನ್ನು ಕೊಡುವ ಉದ್ದೇಶವಾಗಿಯೇ, ಆ ದಿವಸ ಅವರು ಮಾಡುವ ಪೂಜೆಯನ್ನು ಸ್ವೀಕರಿಸುವೆ. ಹೀಗೆ ದಾಸಾರ್ಯರು ಸಂಕಟ ಚತುರ್ಥೀವ್ರತವನ್ನು ದೂಷಿಸಿರುವರು. ಇದರ ಕಾರಣವೇನೆಂದರೆ, ಸಂಕಟಚತುರ್ಥೀ ವ್ರತವನ್ನು ಮಾಡುವವರು ಸಾಯಂಕಾಲದವರೆಗೂ ಉಪವಾಸವಿದ್ದು, ಆ ವ್ರತವನ್ನು ಮಾಡುವವರು–ಆ ವ್ರತದಲ್ಲಿ ಗಣಪತಿಯೇ ಸರ್ವೋತ್ತಮನೆಂತಲೂ, ಸೃಷ್ಟ್ಯಾದಿಕರ್ತನೆಂತಲೂ, ಭಾವಿಸಿ, ಗಣಪತಿ ಯುಪನಿಷತ್ತು ಮತ್ತು ನಿಷುಸೀದ ಗಣಪತೇ–ಮೊದಲಾದ ಋಕ್ಕುಗಳು ಇವುಗಳಿಗಿರುವ ಭಗವತ್ಪರವಾದ ಅರ್ಥವನ್ನರಿಯದೆ, ಹರಿಹರಾದಿ ಗಳಿಗಿಂತಲೂ ಗಣಪತಿಯನ್ನು ಉತ್ತಮನೆಂದು ತಿಳಿದು ಪೂಜಿಸುವರು. ಗಣಪತಿ ಉಪನಿಷತ್ತಿನ ವಾಕ್ಯಗಳು ತತ್ವಾಭಿಮಾನಿದೇವತೆಗಳ ಗಣಕ್ಕೆ ಪತಿಯಾದುದರಿಂದ, ಗಣಪತಿ ಎಂದು ಪರಮಾತ್ಮನ ಹೆಸರು. ಆದರಲ್ಲಿ ಪರಮಾತ್ಮನ ಮಹಿಮೆಯನ್ನೇ ಹೇಳುವುದು; ಅದನ್ನು ವಿಘ್ನೇಶ್ವರನ ಪರವಾಗಿ ಅರ್ಥ ಮಾಡಿಕೊಂಡು, ಸರ್ವೋತ್ತಮತ್ವೇನ ಗಣಪತಿಯನ್ನು ಪೂಜಿಸುವರು. ಆದುದರಿಂದಲೇ, ಅದರ ಫಲವು ನರಕವನ್ನು ಅನುಭವಿಸುವುದು. ಅವರಿಗೆ ಅನರ್ಥವನ್ನು ಕೊಡುವ ಉದ್ದೇಶದಿಂದಲೇ, ಗಣಪತಿಯು ಪೂಜೆಯನ್ನು ಆ ದಿವಸ ಸ್ವೀಕರಿಸುವನೆಂಬ ತಾತ್ಪರ್ಯ. ಪ್ರತಿ ದಿವಸದಲ್ಲೂ, ನಿನ್ನ ಪಾದಾರವಿಂದಗಳಿಗೆ ನಮಸ್ಕಾರ ಮಾಡುವೆನು. ಸೀಸ ಚಕ್ರ ಮತ್ತು ಶಂಖಪಾಣಿಯಾದ ಪರಮಾತ್ಮನನ್ನು ತೋರಿಸಿ ನಮ್ಮನ್ನುದ್ಧರಿಸು ॥ ೯ ॥

**೩. ಭಾವದರ್ಪಣ ಟೀಕಾ :**

ಶಂಕರ–ಸಂಕಟ ಚತುರ್ಥೀನ–ಪ್ರತಿಪ್ರತಿ ಕೃಷ್ಣಪಕ್ಷದ ಚತುರ್ಥಿ

ದಿವಸ ಪೂಜಾ ಮಾಡಿಸಿಕೊಂಬ - ಎಂಬರ್ಥ. ಚಕ್ರವರಾಂಕಿತ-ಚಕ್ರ ಶಂಖಚಿಹ್ನೆ ಉಳ್ಳಂಥ ಪರಮಾತ್ಮನ ತೋರಿಸು - ಎಂದು ತಾತ್ಪರ್ಯ. ॥ ೯ ॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :

"ಶಂಕರ"-"ಸಂಕಟ" ಇತಿ ॥ ತತ್ರ ಉತ್ತಮತ್ವೇನ ತ್ಯೈಃ ಪೂಜಿತಃ ॥ ಇತ್ಯರ್ಥಃ ॥ "ಮಂಕು"-ದುಷ್ಟ. ॥ ೯॥

## ಕನ್ನಡಾರ್ಥ

"ಸಂಕಟಚತುರ್ಥಿ"-ಎಂಬ ಹೆಸರು ಗಣಪತಿಗೆ ಬರಲು ಕಾರಣವನ್ನು "ದೈತ್ಯರಿಗೆ"-ಈ ಪದಗಳಿಂದ ತಿಳಿಸುತ್ತಾರೆ. ದೈತ್ಯರು ಗಣಪತಿಯನ್ನೇ (ತನ್ನನ್ನೇ) ಸರ್ವೋತ್ತಮನೆಂಬ ಭಾವನೆಯಿಂದ ಪೂಜಿಸುವರು. ಈ ಕಾರಣದಿಂದ, ಅವರು ಅತಿ ಭಯಂಕರ ಅಧೋಗತಿಯನ್ನು ಹೊಂದುವರು. ಹೀಗೆ ಈ ಪದ್ಯದ ಭಾವ. ॥ ೯ ॥

## ಶ್ರೀಗುರುಹೃದಯಪ್ರಕಾಶಿಕೆ

ಶಂಕರಪುತ್ರನೇ, ನೀನು ದೈತ್ಯರೆಂಬ ತಾಮಸರಿಗೆ ಅತಿಭಯಂಕರ ಗತಿಗಳನ್ನು ಕೊಡುವುದಕ್ಕೋಸ್ಕರ, ಸಂಕಟಚತುರ್ಥಿ-ಎಂಬ ವ್ರತದಿಂದ ಪೂಜಿತನಾಗಿದ್ದು, ಇಹ ಸುಖಗಳನ್ನು ಕೊಟ್ಟು, ಸಕಾಮಿಗಳಾದ ಮೊಂಕು ಜನರನ್ನು ಮೋಹಿಸುತ್ತಿರುವೆ. ನಿನ್ನ ಪಾದಕಮಲಗಳಿಗೆ ವಿಜ್ಞಾಪಿಸುವೆನು. ಚಕ್ರಗದಾಂಕಿತನಾದ ದೇವರನ್ನು ತೋರಿಸಿ, ನಮ್ಮನ್ನು ಸದಾ ಪಾಲಿಸು. ॥ ೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪಾರ್ವತೀದೇವಿಯು, ಒಮ್ಮೆ ಸ್ನಾನಾರ್ಥವಾಗಿ ಹೊರಬಿದ್ದ ಪ್ರಸಂಗದಲ್ಲಿ ಯಾರನ್ನೂ ಒಳಗೆ ಬಿಡದಂತೆ ತಿಳಿಸಿ, ತನ್ನ ಶರೀರದ ಮಲದಿಂದ ಒಂದು ಶಿಶುವನ್ನು ಸೃಷ್ಟಿಸಿ, ಗೃಹದ ದ್ವಾರದಲ್ಲಿ ಇಟ್ಟಳು. ಆಗ ರುದ್ರದೇವರು ಗೃಹಕ್ಕೆ ತೆರಳಿ, ಒಳಗೆ ನುಗ್ಗಲು ಪ್ರಯತ್ನಿಸಿದಾಗ,

ದ್ವಾರಪಾಲಕನಾಗಿದ್ದ ಆ ಶಿಶುವಿನಿಂದ ನಿರೋಧಿಸಲ್ಪಟ್ಟರು. ಆಗ ಕೋಪದಿಂದ ಮಹಾರುದ್ರದೇವರು ಆ ಶಿಶುವಿನ ಕತ್ತನ್ನು ತ್ರಿಶೂಲದಿಂದ ಛೇದಿಸಿದರು. ವಿಷಯ ತಿಳಿದ ಪಾರ್ವತೀ ಅತ್ಯಂತ ದುಃಖತಪ್ತಳಾಗಿ ಆ ಶಿಶುವನ್ನು ಪುನಃ ಬದುಕಿಸಿಕೊಡಬೇಕೆಂದು ಪ್ರಾರ್ಥಿಸಿದಳು. ಅದರಂತೆ, ಶಂಕರನು ತನ್ನ ಅನುಚರರನ್ನು (ಪ್ರಮಥಗಣ) ಕಳುಹಿಸಿದನು. ಅವರು ಉತ್ತರದಿಕ್ಕಿಗೆ ಮುಖಚಾಚಿ ಮಲಗಿದ್ದ ಒಂದು ಗಜದ ಕತ್ತನ್ನು ಕತ್ತರಿಸಿ, ತಂದಿತ್ತರು. ಆಗ ಉಮಾಪತಿಯು ಆ ಗಜದ ಮುಖವನ್ನು ಮೃತಶಿಶುವಿನ ಕಂಠಕ್ಕೆ ಸೇರಿಸಿ ತಮ್ಮ ತಪೋಮಹಿಮೆಯಿಂದ ಅಮೃತಸೇಚನ ಮಾಡಿ ಬದುಕಿಸಿದರು. ಇಂದರಿಂದ ಗಣಪತಿಗೆ "ಗಜಾನನ"–ಎಂಬ ಹೆಸರಾಯಿತು. ಇದರಿಂದ, ರುದ್ರನಿಂದ ಬದುಕಿಸಲ್ಪಟ್ಟವನಾದ್ದರಿಂದ, **ಶಂಕರಾತ್ಮಜ ಎಂದು ಹೇಳುವರು.** ಪಾರ್ವತೀನಂದನನಾದ್ದರಿಂದ–"ಮೃಧ್ವವ"ನೆಂದು ಹೆಸರು.

೨. ಅಜ್ಞಾನಿಗಳೂ, ತಮೋಯೋಗ್ಯರೂ, ಭಗವದ್ವೇಷಿಗಳೂ ಆದ ಅಸುರರು ಗಣಪತಿಯನ್ನು ಪ್ರಸನ್ನೀಕರಿಸುವ ಉದ್ದೇಶದಿಂದ ಪ್ರತಿ ತಿಂಗಳ ಕೃಷ್ಣಪಕ್ಷದ ಚತುರ್ಥೀ ದಿನ ವಿನಾಯಕನನ್ನು ಆವಾಹನ ಮಾಡಿ, ಪೂಜಿಸುವರು. ಗಣನಾಯಕನನ್ನು ಸರ್ವೋತ್ತಮ, ಸಕಲಿಷ್ಟಪ್ರದಾಯಕ–ಅಷ್ಟಕರ್ತನೆಂದು ಉಪಾಸನೆ ಮಾಡುವರು. ದೈತ್ಯರಿಂದ ಪೂಜಿತನಾದ ಗಜಾನನನಿಗೆ **ಸಂಕಟಚತುರ್ಥಿಗ**–ನೆಂದು ಹೆಸರು. ಈ ಸಂಕಟಗಣಪತಿ ವ್ರತವು ನಿಷಿದ್ಧವು. ಶ್ರುತಿಗಳಲ್ಲಿ ಹೇಳಿರುವ–"ನಿಷುಷೀದ ಗಣಪತೇ" ಮುಂತಾದ ವಾಕ್ಯಗಳಿಗೆ ಗಣಪತಿಯ ಪರವಾಗಿ ಅರ್ಥೈಯಿಸಿ, ಅವನನ್ನೇ ಸರ್ವೋತ್ತಮದೇವತಾ–ಎಂದು ದೈತ್ಯರು ಉಪಾಸಿಸಿ, ತಮ್ಮ ಮನೋಭಿಲಾಷೆಗಳನ್ನು ಪಡೆಯುವರು. ಇದು ಶಾಸ್ತ್ರಾರ್ಥಕ್ಕೆ ವಿರುದ್ಧವು. ಅಂತಹ ಉಪಾಸಕರಿಗೆ ಸಂಕಟಚತುರ್ಥಿಗನಾದ ಶಂಕರಾತ್ಮಜನು ಆ ದೈತ್ಯರನ್ನು ಮೋಹಗೊಳಿಸಿ, ಅವರ ಇಷ್ಟಾರ್ಥಗಳನ್ನು ಪೂರೈಸಿ, ಉಪಾಸನೆಸಿಗೆ ಅಂಧಮಸ್ಸಿಗೆ ಕಾರಣವಾದ ದುರ್ಗತಿಗಳನ್ನು ಫಲರೂಪದಲ್ಲಿ ನೀಡುವನು.

೭. ಶ್ರೀಪರಮಾತ್ಮನು ಸುದರ್ಶನವೆಂಬ ಚಕ್ರವನ್ನು, ಪಾಂಚಜನ್ಯವೆಂಬ ಶಂಖವನ್ನೂ ತನ್ನ ಹಸ್ತದಲ್ಲಿ ಧರಿಸಿದ್ದಾನೆ. ಚಕ್ರವು ದುಷ್ಟ ದಾನವರ ಸಂಹಾರಕ್ಕೆ ಸಾಂಕೇತವು. ಶಂಖವು ಜ್ಞಾನಪ್ರದವು. ಅಂತಹ ಶಂಖಚಕ್ರಧರನಾದ ಆ ಶಂಬುವಂದಿತನ ಸ್ಮರಣೆಯನ್ನು ಪ್ರತಿದಿನವೂ ಕರುಣಿಸಲೆಂದು ದಾಸರಾಯರು ಗಣನಾಥನ ಚರಣಾರವಿಂದಗಳಿಗೆ ಎರಗಿ, ಪ್ರಾರ್ಥಿಸಿರುತ್ತಾರೆ. ಶ್ರೀಪರಮಾತ್ಮನ ಚರಣ ಸ್ಮರಣೆಯನ್ನು ಕರುಣಿಸುವುದಲ್ಲದೆ, ತಮ್ಮನ್ನು ನಿರಂತರ ರಕ್ಷಿಸಬೇಕೆಂದು ಬಿನ್ನಹ ಮಾಡಿಕೊಂಡಿದ್ದಾರೆ. ॥ ೬ ॥

## ಪದ್ಯ–೧೦

**ಮೂಲ :**

**ಸಿದ್ಧ ವಿದ್ಯಾಧರಗಣ ಸಮಾ ।**
**ರಾಧ್ಯ ಚರಣಸರೋಜ ಸರ್ವಸು ।**
**ಸಿದ್ಧಿದಾಯಕ ಶೀಘ್ರದಿಂ ಪಾಲಿಪುದು ಬಿನ್ನಪವ ॥**
**ಬುದ್ಧಿ ವಿದ್ಯ ಜ್ಞಾನ ಬಲ ಪರಿ ।**
**ಶುದ್ಧ ಭಕ್ತಿ ವಿರಕ್ತಿ ನಿರುತನ ।**
**ಪದ್ಮನ ಸ್ಮೃತಿ ಲೀಲೆಗಳ ಸುಸ್ತವನ ವದನದಲಿ ॥ ೧೦ ॥**

**ಅವತರಣಿಕೆ :**

ಶ್ರೀ ಗಣನಾಥನನ್ನು ಸನ್ಮಾರ್ಗ ತೋರಿ, ದೋಷವಿದೂರನಾದ ಶ್ರೀ ಪರಮಾತ್ಮನ ಸ್ಮರಣೆ, ಲೀಲಾವೈಭವಗಳ ಸುಸ್ತವನವನ್ನು ದಯಪಾಲಿಸೆಂದು ಪ್ರಾರ್ಥಿಸುತ್ತಾರೆ. ॥ ೧೦ ॥

**ಪ್ರತಿಪದಾರ್ಥ :**

**ಸಿದ್ಧ** = ಸಿದ್ಧರ ಸಮೂಹ, **ವಿದ್ಯಾಧರ** = ವಿದ್ಯಾಧರರೆಂಬ, **ಗಣ** = ಸಮೂಹದವರಿಂದ, **ಸಮಾರಾಧ್ಯ** = ಛಂದಾಗಿ ಆರಾಧಿತವಾದ, **ಚರಣಸರೋಜ** = ಪಾದಕಮಲಗಳುಳ್ಳವನೇ, **ಸರ್ವಸುಸಿದ್ಧಿದಾಯಕ** = ಸಕಲ ಭಗವತ್ಪ್ರೀತಿಕರವಾದ ಕಾರ್ಯಗಳನ್ನು ಸಿದ್ಧಿ ಮಾಡಿಕೊಡುವ, **ಬುದ್ಧಿ** = ಶ್ರೀಪರಮಾತ್ಮನ ವಿಷಯದಲ್ಲಿ ನಿಶ್ಚಯಬುದ್ಧಿ, **ವಿದ್ಯ** = ಸದ್ವಿದ್ಯೆ (ಪರವಿದ್ಯೆ), **ಜ್ಞಾನ** = ಹರಿಸರ್ವೋತ್ತಮ, ವಾಯುಜೀವೋತ್ತಮ, ಪಂಚಭೇದ, ತಾರತಮ್ಯಪೂರ್ವಕವಾದ ಸುಜ್ಞಾನ, **ಬಲ** = ಭಗವದ್ಭಕ್ತರ ಅನುಗ್ರಹರೂಪವಾದ ಬಲ, **ಪರಿಶುದ್ಧ ಭಕ್ತಿ** = ಅಹಂಕಾರಮಮತಾರಹಿತವಾದ ನಿಸ್ಸಂದೇಹರೂಪವಾದ ಶುದ್ಧವಾದ ಭಗವದ್ಭಕ್ತಿ, **ವಿರಕ್ತಿ** = ಪ್ರಾಪಂಚಿಕ ವಿಷಯಾದಿಗಳಲ್ಲಿ ವೈರಾಗ್ಯ, ಬುದ್ಧಿ–ಈ ಸಂಪತ್ತುಗಳನ್ನು **ನಿರುತ** = ಅನವರತವೂ, **ಅಪವದ್ಯನ** = ದೋಷವಿದೂರನಾದ ಶ್ರೀಪರಮಾತ್ಮನ

**ಸ್ಮೃತಿ** = ಧ್ಯಾನಪೂರ್ವಕವಾದ, ಸ್ಮರಣೆ, **ಲೀಲೆಗಳ** = ಕ್ರೀಡಾರೂಪವಾದ ವೈಭವಗಳ, **ಸುಸ್ತವನ** = ಚೆನ್ನಾಗಿ ಸ್ತೋತ್ರ ಮಾಡೋಣ ಇತ್ಯಾದಿಗಳನ್ನು, **ವದನದಲ್ಲಿ** = ನನ್ನ ಮುಖದ್ವಾರಾ ಕರುಣಿಸುವವನಾಗು. **ಶೀಘ್ರದಿಂ** = ತ್ವರಿತವಾಗಿ, **ಬಿನ್ನಪವ** = ನನ್ನೀ ವಿಜ್ಞಾಪನೆಯನ್ನು, **ಪಾಲಿಪುದು** = ಅನುಗ್ರಹಿಸುವವನಾಗು. ॥ ೧೦ ॥

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ವಿಘ್ನೇಶ್ವರನ್ನ ಸನ್ಮಾರ್ಗ ಕೊಡು–ಎಂತ ಪ್ರಾರ್ಥಿಸತಾರೆ.

ಸಿದ್ಧರು, ವಿದ್ಯಾಧರರು–ಈ ಉಭಯವಿಧಗಣದವರಿಂದ ಚಂದಾಗಿ ಆರಾಧನಿ ಮಾಡಿಸಿಕೊಳ್ಳಲ್ಪಟ್ಟ ಪಾದಕಮಗಳುಳ್ಳವ. ಭಗವದ್ಭಕ್ತರ ಸಮಸ್ತ ವಾದ ಭಗವತ್ಪ್ರೀತೀಕರವಾದ ಕಾರ್ಯಗಳ ಚಂದಾಗಿ ಸಿದ್ಧಿಮಾಡಿ ಕೊಡತಕ್ಕವ. ಇಂಥಾ ನೀನು ಶ್ರೀಪರಮಾತ್ಮನ ವಿಷಯದಲ್ಲಿ ನಿಶ್ಚಯಬುದ್ಧಿ, ವೇದವಿದ್ಯಾಕ್ಕೆ ಹರಿಸರ್ವೋತ್ತಮ ವಾಯುಜೀವೋತ್ತಮ ಜ್ಞಾನಪೂರ್ವಕ ವಾದ ಪಂಚಭೇದ, ತಾರತಮ್ಯಜ್ಞಾನ, ಭಗವದ್ಭಕ್ತರ ಅನುಗ್ರಹಾಖ್ಯ ಬಲ, ಅಹಂಮಮತಾ–ಎಂಬ ದೋಷದಿಂದ ರಹಿತವಾದ ಮಾಹಾತ್ಮ್ಯ ಜ್ಞಾನಪೂರ್ವಕ ಸುದೃಢ ಸರ್ವತೋಧಿಕ ಸ್ನೇಹರೂಪವಾದ ಪರಿಶುದ್ಧವಾದ ಭಕ್ತಿ, ಪ್ರಾಕೃತ ವನಿತಾದಿ ಧನಧಾನ್ಯಾದಿಗಳು, ನಾನು ನನ್ನದು–ಎಂಬುದರಲ್ಲಿ ಹೇಯತಾ ಬುದ್ಧಿ–ಯಾವುದೋ ಅದು ವಿರಕ್ತಿ. ನಿರಂತರ ದೋಷದೂರ ನಾದ ಶ್ರೀಪರಮಾತ್ಮನ ಹೃದಯಾಕಾಶದಲ್ಲಿ ಧ್ಯಾನಪೂರ್ವಕವಾದ ಸ್ಮರಣೆ, ಮುಖದಲ್ಲಿ ಶ್ರೀಪರಮಾತ್ಮನ ಆಟರೂಪವಾದ ಚರಿತ್ರೆಗಳ ಚಂದಾಗಿ ಸ್ತೋತ್ರ ಮಾಡೋಣ–ಇತ್ಯಾದಿಗಳು ಎನ್ನ ವಿಜ್ಞಾಪನಿಗಳ ಕೇಳಿ ಜಾಗ್ರತೆಯಾಗಿ ಕೊಡಿಸೋವನಾಗು–ಎಂತು ಪ್ರಾರ್ಥನಾ ಮಾಡಿದ್ದಾರೆಂತ ತಾತ್ಪರ್ಯ. ॥ ೧೦॥

**೩. ಭಾವದರ್ಪಣ ಟೀಕಾ :**

ಸಿದ್ಧ, ನಿರುತ–ನಿರಂತರ. ಅನವದ್ಯನ ಸ್ಮೃತಿ–ನಿರ್ದುಷ್ಟನಾದ ಪರಮಾತ್ಮನ ಸ್ಮರಣೆ–ಎಂಬರ್ಥ. ॥ ೧೦ ॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :

"ಸಿದ್ಧ"–ಇತಿ ॥ ೧೦ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಸಿದ್ಧ ವಿದ್ಯಾಧರಗಣದಿಂದ ಸೇವೆ ಮಾಡಿಸಿಕೊಳ್ಳುವ ಪಾದಕಮಲನೆ, ಸರ್ವಸುಸಿದ್ಧಿಯನ್ನು ಕೊಡುವವನೆ, ಒಳ್ಳೆಬುದ್ಧಿಯನ್ನು ವಿದ್ಯೆಯೆಂಬ ವೇದಾದಿಗಳನ್ನು, ಜ್ಞಾನವನ್ನು ಬಲವನ್ನು ಪರಿಶುದ್ಧ ಬುದ್ಧಿಯನ್ನು, ಭಕ್ತಿಯನ್ನು ವಿರಕ್ತಿಯನ್ನು ಸಹ ಸದಾ ನಿರ್ದೋಷನಾದ ದೇವರ ಸ್ಮರಣೆಯನ್ನು ಆ ಸ್ವಾಮಿಯ ಲೀಲೆಗಳನ್ನು ಸ್ತುತಿರೂಪವಾಗಿ ಬಾಯಲ್ಲಿ ಹೇಳುವುದನ್ನು ಶೀಘ್ರವಾಗಿ ಪಾಲಿಪುದು. ಅಂದರೆ ಕೊಡಬೇಕು–ಎಂಬ ವಿಜ್ಞಾಪನೆಯನ್ನು ಪಾಲಿಸು–ಎಂದು ಶೇಷಪೂರ್ತಿಯಿಂದ ಅರ್ಥ ಮಾಡಬೇಕು ॥ ೧೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಅಣಿಮಾದಿ ಅಷ್ಟಸಿದ್ಧಿಗಳನ್ನು ಪಡೆದ ದೇವತಾವರ್ಗಕ್ಕೆ–**ಸಿದ್ಧರೆಂದು ಹೆಸರು.** ದೇವತೆಗಳಿಂದ ಉತ್ಪತ್ತಿ ಪಡೆದ ದೇವತೆಗಳ ಒಂದು ವರ್ಗಕ್ಕೆ **ವಿದ್ಯಾಧರರೆಂದು** ಹೆಸರು. ಅಂತಹ ಸಿದ್ಧರೂ ಮತ್ತು ವಿದ್ಯಾಧರರುಗಳ ಸಮೂಹದಿಂದ ಪೂಜಿತ ಪಾದಪದ್ಮವುಳ್ಳವನು ಶ್ರೀವಿಘ್ನೇಶ್ವರನು.

೨. ಭಗವತ್ಪ್ರೀತಿಕರವಾದ ಕಾರ್ಯಗಳನ್ನು ಮಾಡುವುದರಲ್ಲಿ ಸಿದ್ಧಿಯನ್ನು ಕೊಡುವವನಾದ್ದರಿಂದ–**ಸರ್ವಸುಸಿದ್ಧದಾಯಕನು.**

೩. ಸಿದ್ಧ ವಿದ್ಯಾಧರರಿಂದ ಪೂಜಿತ ಪಾದಪದ್ಮಗಳುಳ್ಳವನೂ, ಸರ್ವ ಸುಸಿದ್ಧಿ ಪ್ರದಾಯಕನೂ ಆದ ಶಂಕರಾತ್ಮಜನು ನಮಗೆ ಭಗದ್ವಿಷಯವಾದ ನಿಶ್ಚಯಬುದ್ಧಿಯನ್ನೂ, ಭಗವತ್ಪರವಾದ ಸಚ್ಛಾಸ್ತ್ರಜನ್ಯವಾದ ಸದ್ವಿದ್ಯೆಯನ್ನೂ, ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ, ಪಂಚಭೇಧ, ತಾರತಮ್ಯ, ಪ್ರಪಂಚಸತ್ಯತ–ಇತ್ಯಾದಿ ಸುಜ್ಞಾನವನ್ನೂ, ನಿಸ್ಸಂಶಯವಾದ

**ಪರಿಶುದ್ಧವಾದ** ಮಹಾತ್ಮ್ಯಜ್ಞಾನಪೂರ್ವಕ ಸುದೃಢಪ್ರೇಮಪ್ರವಾಹ **ರೂಪವಾದ** ಭಕ್ತಿಯನ್ನೂ, ಪ್ರಾಪಂಚಿಕವಿಷಯಾದಿಗಳಲ್ಲಿ ವಿರಕ್ತಿಯನ್ನೂ **ಪಾಲಿಸೆಂದು** ಭಕ್ತಿಪೂರ್ವಕವಾಗಿ ಪಾರ್ವತೀತನಯನನ್ನು ಪ್ರಾರ್ಥಿಸುತ್ತಾರೆ.

೪. ಶ್ರೀ ಪರಮಾತ್ಮನು ದೋಷವಿದೂರನು. ಇದರಿಂದ, **ಅನವದ್ಯನ**–ಎಂದಿದ್ದಾರೆ. ಅನವದ್ಯನಾದ ಆ ಅಪಾರಮಹಿಮಾ ಸಂಪನ್ನನಾದ ಅಪ್ರಮೇಯನ ಧ್ಯಾನಪೂರ್ವಕ ಸ್ಮರಣೆ, (ಸ್ಮೃತಿ). ನಾನಾ ಲೀಲಾ ರೂಪವಾದ ಕ್ರೀಡಾವೈಭವಗಳನ್ನು ಭಕ್ತಿಪೂರ್ವಕವಾಗಿ ಸ್ತೋತ್ರ ಮಾಡುವ ಪರಮಭಾಗ್ಯವನ್ನು ಅನವರತ ಪರಿಪಾಲಿಸೆಂದು ಬಿನ್ನವಿಸಿ **ಕೊಂಡಿದ್ದಾರೆ.** ॥ ೧೦ ॥

## ಪದ್ಯ–೧೧

**ಮೂಲ :**

**ರಕ್ತವಾಸದ್ವಯ ವಿಭೂಷಣ ।**
**ಉಕ್ತಿ ಲಾಲಿಸು ಪರಮಭಗವ ।**
**ದ್ಭಕ್ತವರ ಭವ್ಯಾತ್ಮ ಭಾಗವತಾದಿ ಶಾಸ್ತ್ರದಲಿ ॥**
**ಸಕ್ತವಾಗಲಿ ಮನವು ವಿಷಯವಿ ।**
**ಮುಕ್ತನೆಂದೆನಿಸೆನ್ನ ಭವಭಯದಿಂದಲಿನುದಿನದಿ ॥ ೧೧ ॥**

**ಅವತರಣಿಕೆ :**

ವರಸಿದ್ಧಿ ವಿನಾಯಕನನ್ನು ಭಾಗವತಾದಿ ಸಚ್ಛಾಸ್ತ್ರಗಳಲ್ಲಿ ಮನಸ್ಸನ್ನು ಆಸಕ್ತಗೈವ ತದ್ವಾರಾ ಜ್ಞಾನ, ಭಕ್ತಿ, ವಿಷಯಾದಿಗಳಲ್ಲಿ ವಿರಕ್ತಿಗಳನ್ನು ನೀಡೆಂದು ಸವಿನಯಪೂರ್ವಕ ಪ್ರಾರ್ಥಿಸಿದ್ದಾರೆ. ॥ ೧೧ ॥

**ಪ್ರತಿಪದಾರ್ಥ :**

**ರಕ್ತವಾಸದ್ವಯ** = ಕೆಂಪುವರ್ಣ ವಿಶಿಷ್ಟವಾದ ಹೊದೆಯುವ ಮತ್ತು ಉಟ್ಟುಕೊಂಡಿರುವ ವಸ್ತ್ರಗಳಿಂದ, **ವಿಭೂಷಣ** = ಅಲಂಕೃತನಾದವನೇ, ವರ = ಸರ್ವೋತ್ತಮನಾದ **ಭಗವತ್** = ಪೂಜ್ಯನಾದ ಶ್ರೀ ಪರಮಾತ್ಮನ, **ಪರಮ** = ಅತ್ಯಂತ ಶ್ರೇಷ್ಠನಾದ, **ಭಕ್ತ** = ಭಕ್ತನಾದವನೇ, **ಭವ್ಯಾತ್ಮ** = ಮಂಗಳಕರವಾದ ಶರೀರವುಳ್ಳವನೇ, **ಉಕ್ತಿಲಾಲಿಸು** = ನನ್ನ ಮಾತನ್ನು ಆದರಿಸಿ ಕೇಳುವವನಾಗು, **ಮನವು** = ನನ್ನ ಮನಸ್ಸನ್ನು, **ಭಾಗವತಾದಿ ಶಾಸ್ತ್ರದಲಿ** = ಭಾಗವತಾದಿ ಸಚ್ಛಾಸ್ತ್ರಗಳಲ್ಲಿ, **ಸಕ್ತವಾಗಲಿ** = ಆಸಕ್ತವಾಗುವಂತೆ ಅನುಗ್ರಹಿಸು. **ವಿಷಯ ವಿರಕ್ತಿ** = ಪ್ರಾಪಂಚಿಕ ವಿಷಯಾದಿಗಳಲ್ಲಿ ವೈರಾಗ್ಯಬುದ್ಧಿಯನ್ನು **ಪಾಲಿಸು** = ನೀಡಿ ಉದ್ಧರಿಸು. **ವಿದ್ವದಾದ್ಯ** = ವಿದ್ಯೆಯ ಉಪದೇಶಕಾಲದಲ್ಲಿ ಪ್ರಥಮತಃ ಪೂಜಾರ್ಹನಾದ ಆದಿಪೂಜಿತನೇ, **ಅನುದಿನದಿ** = ಪ್ರತಿದಿನದಲ್ಲೂ, **ಭವಭಯದಿಂದಲಿ** = ಸಂಸಾರಕ್ಕೆ ಕಾರಣವಾದ ಅಹಂ ಮಮತಾಜ್ಞಾನದಿಂದ ಉಂಟಾಗುವ ಭಯದಿಂದ, ಎನ್ನ

■ ಎನ್ನನು, **ವಿಮುಕ್ತನೆಂದು** = ಪರಿಹಾರ ಮಾಡಿಸಿ, ಎನಿಸು = ಕರೆಯಿಸು **ವವನಾಗು.** ॥ ೧೧ ॥

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ವಿಘ್ನೇಶ್ವರನ್ನ ಜ್ಞಾನಭಕ್ತ್ಯಾದಿಗಳ ಕೊಡು ಎಂತ ಪ್ರಾರ್ಥಿಸತಾರೆ. ಕೆಂಪುವರ್ಣ ವಿಶಿಷ್ಟವಾದ ವಸ್ತ್ರದ್ವಯದಿಂದ ವಿಶೇಷಾಕಾರದಿಂದ ಭೂಷಿತನಾದವನೇ, ಸರ್ವೋತ್ತಮನಾದ ಪೂಜ್ಯನಾದ ಶ್ರೀಪರಮಾತ್ಮನ ಅತ್ಯಂತ ಶ್ರೇಷ್ಠನಾದ ಭಕ್ತನಾದವನೇ, ಮಂಗಳಕರವಾದ ಶರೀರವುಳ್ಳವನೇ, ಎನ್ನ ಮಾತನ್ನ ಆದರಿಸಿ ಕೇಳು. ಭಾಗವತಾದಿ ಸಚ್ಛಾಸ್ತ್ರಗಳಲ್ಲಿ ಮನಸ್ಸು ಆಸಕ್ತವಾಗಲಿ. ಪ್ರಾಕೃತವಿಷಯಗಳಲ್ಲಿ ವಿರಕ್ತಿ ಉಂಟು ಮಾಡೋವನಾಗು. ವಿದ್ಯಾ ಉಪದೇಶ ಕಾಲದಲ್ಲಿ ಪ್ರಥಮತಃ ಪೂಜಾ ತೆಗೆದುಕೊಳ್ಳತಕ್ಕ ವಿನಾಯಕನೇ, ಪ್ರತಿದಿನದಲ್ಲೂ ಇಂಥಾದರನ್ನ ಅನುಗ್ರಹ ಮಾಡು ಮತ್ತು ಸಂಸಾರಕ್ಕೆ ಕಾರಣವಾದ ಅಹಂಮಮತಾ–ಎಂಬ ಎರಡರಿಂದ ಪ್ರಾಪ್ತವಾಗ ತಕ್ಕ ಭಯದಿಂದ ನನ್ನನ್ನು ~~ಸಕ್ಷಳು~~ ವಿಶೇಷಕಾರವಾಗಿ ಹೋಗಲ್ಪಟ್ಟ ವನೆಂದು ಎನಿಸೋವನಾಗು–ಎಂತ ತಾತ್ಪರ್ಯ. ॥ ೧೧ ॥

**೨. ಭಾವಪ್ರಕಾಶಿಕೆ :**

ಗಣಪತಿಯು ಧರಿಸಿರುವ ವಸ್ತ್ರಗಳು ಕೆಂಪುಬಣ್ಣದವೆಂದು ತಂತ್ರಸಾರ ದಲ್ಲಿ, ಗಣಪತಿ ಮಂತ್ರಧ್ಯಾನ ಶ್ಲೋಕದಲ್ಲಿ "ರಕ್ತಾಂಬರೋರಕ್ತತನೂರಕ್ತ ಮಾಲ್ಯಾನುಲೇಪನಃ"–ಎಂದು ಹೇಳಿರುವರು. ಅದೇ ಅರ್ಥವನ್ನೇ ಇಲ್ಲಿ ಹೇಳಿರುವರು. ಪರಮ ಭಗವದ್ಭಕ್ತರ ಪೈಕಿ ಉತ್ತಮನು. ಅಂದರೆ, ಪರಮ ಭಾಗವತರು ಬ್ರಹ್ಮಾದಿಗಳು. ಅವರಕಿಂತಲೂ ಉತ್ತಮನೆಂದರ್ಥವಲ್ಲ. ತಾರತಮ್ಯಪ್ರಕಾರ, ಇವನಕಿಂತಲೂ ಉತ್ತಮರಾದ, ಬ್ರಹ್ಮದೇವರು ಮೊದಲು ನಿಋತಿ, ಪ್ರಾವಹೀವರೆಗೂ ಹೇಳುವ ಉತ್ತಮ ಭಗವದ್ಭಕ್ತರನ್ನು ಬಿಟ್ಟು, ಉಳಿದ ಉಕ್ತಶೇಶತಸ್ಥರಾದ ೮೫ ದೇವತೆಗಳು. ಗಂಗೆ, ಪರ್ಜನ್ಯ ಮೊದಲಾದವರಕಿಂತಲೂ ಭಕ್ತಿಯಲ್ಲಿ ಶ್ರೇಷ್ಠನೆಂದರ್ಥ. ಅಶ್ವಿನೀ

ದೇವತೆಗಳು ವಿಷ್ವಕ್ಸೇನರಿಗೆ ಸಮನಾದ ಭಗದ್ಭಕ್ತಿಯುಳ್ಳವನು. ಭಕ್ತರ ಪೈಕಿ ಉತ್ತಮನೆಂದರೆ, ೧೦೦ ದೇವತೆಗಳ ಪೈಕಿ, ಉಳಿದ ೮೫ ದೇವತೆಗಳು ೧೫ಗೆ ಮೊದಲಾದ ಭಗವದ್ಭಕ್ತರಕಿಂತಲೂ, ಉತ್ತಮನೆಂದರ್ಥವೇ ಆಗಲಿ. ಎಲ್ಲಾ ಭಕ್ತರೆಂದು ಬ್ರಹ್ಮಾದಿಗಳನ್ನು ಸಹ ಇದರ ಜೊತೆಯಲ್ಲಿ ಸೇರಿಸ ಬೇಕೆಂದರರ್ಥವಲ್ಲ. ನನ್ನ ಮನಸ್ಸಾದುದು ಯಾವಾಗಲೂ ಭಾಗವತಾದಿ ಸಚ್ಛಾಸ್ತ್ರದಲ್ಲಿ ನೆಲಸಿರುವಂತೆ ಮಾಡೆಂದು ಬೇಡುವೆನು. ಈ ನನ್ನ ಮಾತನ್ನು, ಮಗುವಿನ ಮಾತನ್ನು ತಾಯಿಯು ಲಾಲಿಸುವಂತೆ ನೀನು ಆಧರಿಸಿಬೇಕು. ವಿಷಯಭೋಗದಲ್ಲಿ ನನಗಾವಾಗಲೂ ವಿರಕ್ತಿ ಇರಲಿ! ಎಲೈ ವಿದ್ವದಾರ್ಯ! ನನ್ನನ್ನು ಸಂಸಾರಮುಕ್ತನೆಂದು ಹೆಸರು ಬರುವಂತೆ ಮಾಡು. ॥ ೧೧ ॥

**೩. ಭಾವದರ್ಪಣ ಟೀಕಾ**

ರಕ್ತವಾಸ–ಕೆಂಪುವಸ್ತ್ರ ಎರಡು ಉಳ್ಳವ. ತದುಕ್ತಂ **ತಂತ್ರಸಾರೇ**– "ರಕ್ತಾಂಬರೋ ರಕ್ತಗಂಧೋರಕ್ತ ಮಾಲ್ಯಾನುಲೇಪನೇ"–ಇತಿ ।

ಭವ್ಯಾತ್ಮ–ಮಂಗಳಕರವಾದ ದೇಹವುಳ್ಳವನೆಂಬರ್ಥ. ॥ ೧೧ ॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :**

"ರಕ್ತ"–ಇತಿ ॥ ೧೧ ॥

## ಶ್ರೀಗುರುಹೃದಯಪ್ರಕಾಶಿಕೆ

ರಕ್ತದಂತೆ ಕೆಂಪಾದ ವಸ್ತ್ರದ್ವಯಗಳಿಂದ ಅಲಂಕೃತನೇ, ವಿದ್ವದಾರ್ಯ ನೆಂದರೆ–ಜ್ಞಾನಿವರ್ಯನೆ, ಪರಮ ಭಗವದ್ಭಕ್ತ ಶ್ರೇಷ್ಠನೇ, ಭವ್ಯಾತ್ಮನೆಂದರೆ, ಕುಶಲರೂಪನೇ, ಭಾಗವತಾದಿ ಶಾಸ್ತ್ರಗಳಲ್ಲಿ ನನ್ನ ಮನಸ್ಸು ಆಸಕ್ತ ವಾಗುವಂತೆ ಅನುಗ್ರಹಿಸು. ವಿಷಯಗಳಲ್ಲಿ ಸದಾ ವೈರಾಗ್ಯವನ್ನು ಕೊಡು. ಭವವೆಂಬ ಸಂಸ್ಕೃತಿ ಭಯದಿಂದ ನನ್ನನ್ನು ಮುಕ್ತನೆಂದು ಅನ್ನಿಸು. ॥ ೧೧ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಶ್ರೀಗಣನಾಯಕನು ಹೊದ್ದಿಕೊಂಡಿರುವ ಮೇಲ್ವಸ್ತ್ರವೂ ಕೆಂಪು ವರ್ಣವಿಶಿಷ್ಟವಾದದ್ದು. ಹಾಗೆಯೇ, ಉಟ್ಟುಕೊಂಡಿರುವ ವಸ್ತ್ರವೂ ಕೆಂಪು

ವರ್ಣದ್ದು. ಇದರಿಂದ, **ರಕ್ತವಾಸದ್ವಯ ವಿಭೂಷಿತ**–ಎಂದಿದ್ದಾರೆ (ರಕ್ತ–ಕೆಂಪುವರ್ಣ. ವಾಸ–ವಸ್ತ್ರ. ದ್ವಯ–ಎರಡು). ಗಣಪತಿಯ ವಿಗ್ರಹವನ್ನು ತಯಾರಿಸುವಾಗಲೂ, ಕೊಳ್ಳುವಾಗಲೂ ರಕ್ತವಸ್ತ್ರದ್ವಯಗಳಿಂದಲೇ ವಿಭೂಷಿತನಾದ ಗಣಪತಿಯನ್ನು ಪೂಜಿಸಬೇಕು.

೨. ಎಲೈ ವಿಶ್ವೋಪಾಸಕನೇ, ನೀನು ಸರ್ವೋತ್ತಮನಾದ (ಪರಮ) ಶ್ರೀಹರಿಯ ಭಗವದ್ಭಕ್ತರ ಪಾಲಿಗೆ ಸೇರಿದವನು. ಪವಿತ್ರಳಾದ ಗಂಗಾಮಾತೆಯಿಂದ ಸ್ತುತ್ಯನು. ಶೇಷಶತಸ್ಥರಿಂತ ಕಿಂಚಿತ್ ಉತ್ತಮನು. ಇದರಿಂದ ಭಗವದ್ಭಕ್ತವರ–ಎಂದಿದ್ದಾರೆ.

೩. ನಿನ್ನ ಶರೀರ ಮಂಗಳಕರವಾದದ್ದು. ನೀನು ಕುಶಲರೂಪಿಯಾದ ಶುಭಾಂಗನು. ಇದರಿಂದ, **ಭವ್ಯಾತ್ಮನು**. (ಭವ್ಯ–ಮಂಗಳವಾದ, ಆತ್ಮ–ಸ್ವರೂಪನು).

೪. ನನ್ನ ಮನಸ್ಸು ನಿರಂತರವಾಗಿ ಭಾಗವತಾದಿ ಸಚ್ಛಾಸ್ತ್ರಗಳಲ್ಲಿ ಆಸಕ್ತವಾಗುವಂತೆ ಮಾಡೆಂದು, ನನ್ನ ಮಾತನ್ನು ಮನ್ನಿಸೆಂದು (ಉಕ್ತಿ ಲಾಲಿಸು) ಆ ಗಣಾಧಿಪನಲ್ಲಿ ವಿನಂತಿಸಿಕೊಂಡಿದ್ದಾರೆ.

೫. ಸದಾ ಸಚ್ಛಾಸ್ತ್ರಗಳಲ್ಲಿ ಆಸಕ್ತವಾಗಿರುವ ಮನಸ್ಸು ಪ್ರಾಪಂಚಿಕ ವಿಷಯಾದಿಭೋಗಗಳ ಕಡೆ ಹೋಗದಂತೆ, ಮನಸ್ಸಿನ ಸಾಧನೆಗೆ ಪ್ರತಿಬಂಧಕವಾಗಿರುವ ವಿಘ್ನಪರಂಪರೆಗಳನ್ನು ಪರಿಹರಿಸಿ, ಮನಸ್ಸನ್ನು ಶ್ರೀಹರಿಯ ಚರಣಕಂಜನಗಳಲ್ಲಿ ಸ್ಥಿರೀಕರಿಸಿ, ಲೌಕಿಕ ವಿಷಯ ಸುಖಗಳಿಂದ ದೂರವಿರಿಸಿ, ವೈರಾಗ್ಯ ಸಂಪತ್ತನ್ನು ನೀಡೆಂದು ಬಿನ್ನವಿಸುತ್ತಾರೆ. ಅಗ್ರಪೂಜನು

೬. ವಿದ್ಯಾದಿಗಳಲ್ಲಿ ಆದಿಪೂಜಿತನಾದ ಅಗಜೆಯ ಪುತ್ರನ ಅನುಗ್ರಹಬೇಕು. ಆದಿಪೂಜಿತನೂ, ಸಜ್ಜನರ ಸಕಲ ವಿಘ್ನ ಪರಿಹಾರಕನೂ, ಆದ ವರಸಿದ್ಧಿವಿನಾಯಕನು **ವಿಧ್ವದಾಢ್ಯನು**.

೭. ಜನ ಮರಣಾಖ್ಯವಾದ ಈ ಸಂಸಾರದ ಸುಳಿಯಲ್ಲಿ ನಾನು ಸಿಲುಕಿದ್ದೇನೆ. ಭವಜನಿತದುಃಖಗಳಿಂದ ಬೆಂದು ಬೆಂಡಾಗಿ ಭೀತನಾಗಿದ್ದೇನೆ.

ಪ್ರತಿದಿನದಲ್ಲೂ, ಘನ ದಯಾಸಾಗರನಾದ ವಿಘ್ನೇಶ್ವರನೇ, ತತ್ತ್ವಪತಿಯಾದ ನೀನು ನನ್ನಲ್ಲಿ ನಿಂತು ಧರ್ಮಪ್ರೇರಕನಾಗಿ, ಭವಸಾಗರದಿಂದ ದಾಟುವ ಸತ್ಸಾಧನಾ ಮಾರ್ಗವನ್ನು ತೋರಿ, ವಿಶ್ವಂಭರನ ಪರಮಾನುಗ್ರಹಕ್ಕೆ ಪಾತ್ರನನ್ನಾಗಿಸಿ, ತದ್ವಾರಾ ಮುಕ್ತನೆಂದು ಎನಿಸು. ಎನ್ನ- ಎಂದು ಚಕ್ರಪಾಣಿಯ ಅನುಗ್ರಹವಾದ್ಯನಾದ ನಿತ್ಯ ಪ್ರಾಣಾವೇಶಯುತನಾದ ವಕ್ರತುಂಡನನ್ನು ಪ್ರಾರ್ಥಿಸುತ್ತಾರೆ. ॥ ೧೧ ॥

## ಪದ್ಯ–೧೨

**ಮೂಲ :**

**ಶುಕ್ರ ಶಿಷ್ಯರ ಸಂಹರಿಸುವುದಕೆ ।**
**ಶಕ್ರ ನಿನ್ನನು ಪೂಜಿಸಿದನು ಉ ।**
**ರುಕ್ರಮ ಶ್ರೀರಾಮಚಂದ್ರನು ಸೇತುಮುಖದಲಿ ॥**
**ಚಕ್ರವರ್ತಿಪ ಧರ್ಮರಾಜನು ।**
**ಚಕ್ರಪಾಣಿಯ ನುಡಿಸಿ ಭಜಿಸಿದ ।**
**ವಕ್ರತುಂಡನೆ ನಿನ್ನೊಳೆಂತುಟೋ ಈಶನುಗ್ರಹವು ॥ ೧೨ ॥**

**ಅವತರಣಿಕೆ :**

ಆದಿಪೂಜಿತನಾದ ಶ್ರೀ ವಿಘ್ನೇಶ್ವರನನ್ನು ಪೂಜಿಸಿದವರ ವಿಚಾರವನ್ನು ತಿಳಿಸುತ್ತಾರೆ ॥ ೧೨ ॥

**ಪ್ರತಿಪದಾರ್ಥ :**

**ಶುಕ್ರಶಿಷ್ಯರ** = ದೈತ್ಯಗುರುಗಳಾದ ಶುಕ್ರಾಚಾರ್ಯರ ಶಿಷ್ಯರಾದ ದಾನವರನ್ನು **ಸಂಹರಿಸುವುದಕೆ** = ನಾಶಗೊಳಿಸುವುದಕ್ಕೋಸ್ಕರ, **ಶಕ್ರ** = ಇಂದ್ರದೇವರು, **ನಿನ್ನನು** = ಆದಿಪೂಜಿತನೂ, ಸರ್ವವಿಘ್ನಪರಿಹಾರಕನೂ ಆದ ನಿನ್ನನ್ನು, **ಪೂಜಿಸಿದನು** = ಅರ್ಚಿಸಿದರು. **ಉರುಕ್ರಮ** = ಉತ್ಕೃಷ್ಟ ಪರಾಕ್ರಮಿಯಾದ, **ಶ್ರೀರಾಮಚಂದ್ರನು** = ಶ್ರೀರಾಮಚಂದ್ರದೇವರು, **ಸೇತುಮುಖದಲ್ಲಿ** = ದಕ್ಷಿಣ ಸಮುದ್ರಕ್ಕೆ ಸೇತುವೆ ನಿರ್ಮಾಣ ಸಮಯದಲ್ಲಿ, **ನಿನ್ನನ್ನು ಪೂಜಿಸಿದನು** = ಲೋಕಶಿಕ್ಷಣಾರ್ಥವಾಗಿ ನಿನ್ನನ್ನು ಪೂಜೆ ಮಾಡಿದನು. **ಚಕ್ರವರ್ತಿಪ** = ಸಾರ್ವಭೌಮನಾದ, **ಧರ್ಮರಾಜನು** = ಯುಧಿಷ್ಠಿರನು, **ಚಕ್ರಪಾಣಿಯ** = **ನುಡಿಗೆ** = ಚಕ್ರಧಾರಿಯಾದ ಶ್ರೀಕೃಷ್ಣನ ಆದೇಶದಂತೆ, **ಭಜಿಸಿದ** = ನಿನ್ನನ್ನು ಆರಾಧಿಸಿದನು. **ವಕ್ರತುಂಡನೆ** = ಎಲೈ ವಿಘ್ನರಾಜನೇ, (ವಕ್ರ–ವಕ್ರವಾಗಿರುವ ಸೊಂಡಿಲನ್ನು ಮುಖದಲ್ಲಿ ಉಳ್ಳ ಗಜಮುಖ) **ಈಶನುಗ್ರಹವು** = ಶ್ರೀಪರಮಾತ್ಮನ ಅನುಗ್ರಹವು, **ನಿನ್ನೊಳೆಂತುಟೋ** = ನಿನ್ನಲ್ಲಿ ವಿಶೇಷವಾಗಿ ಇದೆಯಲ್ಲವೇ ! ॥ ೧೨ ॥

## ಶ್ರೀ ಸಂಕರ್ಣಒಡೆಯರ ವ್ಯಾಖ್ಯಾನ

ಈ ಗಣೇಶನ ಆರಾಧನ ಮಾಡಿದವರನ್ನು ಹೇಳತಾರೆ.

ಇಂದ್ರದೇವರು ನಿನ್ನನು ಆರಾಧನೆ ಮಾಡಿದರು. ಉತ್ಕೃಷ್ಟವಾದ ಪರಾಕ್ರಮಿಯಾದ (ಲೋಕಶಿಕ್ಷಾರ್ಥವಾಗಿ) ಕಾಂತಿಸಂಪನ್ನನಾದ, ಸರ್ವೋತ್ತಮನಾದ ಮಾನುಷಲೀಲಾಪ್ರದರ್ಶನದಿಂದ ಅವತಾರ ಮಾಡಿದ ಶ್ರೀರಾಮದೇವರು ಸಮುದ್ರಕ್ಕೆ ಸೇತವಿ ಕಟ್ಟೋದಕ್ಕೆ ಆರಂಭಿಸಿದ ಕಾಲದಲ್ಲಿ, ಆ ಸೇತುವಿನ ಮುಂಭಾಗದಲ್ಲಿ ಮತ್ತು ಚಕ್ರಾಯುಧ ಪಾಣಿಯಾದ ಶ್ರೀಕೃಷ್ಣನ ಮಾತಿಗೆ ವಶನಾಗಿ, ಅವನ ಆಜ್ಞಾದಿಂದ, ಸಮಸ್ತದೇಶಗಳನ್ನು ಪಾಲಿಸ ತಕ್ಕಂಥ ಧರ್ಮರಾಜನು ಇವರು ಯಾವತ್ತೂ ಮಂದಿ, ಶುಕ್ರಾಚಾರ್ಯರ ಶಿಷ್ಯರಾದ ದೈತ್ಯರನ್ನ ಸಂಹಾರ ಮಾಡೋದಕ್ಕೋಸ್ಕರ, ಮುಖದಲ್ಲಿ ಸೊಂಡಿಲು ಉಳ್ಳಗಜಮುಖನೆ-ನಿನ್ನನ್ನು ಆರಾಧನ ಮಾಡಿದರು. ಈ ಯಾವತ್ತೂ ಮಂದಿ ವಿಘ್ನವಿಲ್ಲದಂತೆ ಯುದ್ಧದಲ್ಲಿ ಜಯಶೀಲರಾಗಿ, ತಮ್ಮ ಇಷ್ಟಾರ್ಥ ಹೊಂದಿದರು. ಶ್ರೀಪರಮಾತ್ಮನ ಅನುಗ್ರಹವು ನಿನ್ನಲ್ಲಿ ವಿಶೇಷಾಕಾರವಾಗಿದೆ-ಎಂತ ತಾತ್ಪರ್ಯ. ॥ ೧೨ ॥

**೨. ಭಾವಪ್ರಕಾಶಿಕೆ :**

ದೇವೇಂದ್ರನು ವೃತ್ರಾಸುರನ ಸಂಹಾರಕ್ಕೆ ಹೋಗುವಾಗ ಗಣಪತಿಯ ಪೂಜೆಯನ್ನು ಮಾಡಿಹೋಗಿ, ವೃತ್ರಾಸುರನ ಸಹಾಯಕ್ಕಾಗಿ ಬಂದಿದ್ದ ದೈತ್ಯರನ್ನೂ, ವೃತ್ರಾಸುರನನ್ನೂ ಸಹ ಸಂಹಾರ ಮಾಡಿ ಜಯವನ್ನು ಪಡೆದನು. ಶ್ರೀರಾಮದೇವರು ಸೀತೆಯನ್ನು ಹೊಂದುವ ಉದ್ದೇಶವಾಗಿ, ಸಮುದ್ರದಲ್ಲಿ ಸೇತುವೆಯನ್ನು ಕಟ್ಟುವಾಗ, ವಿಘ್ನರಾಜನ ಪೂಜೆಯನ್ನು ಮಾಡಿ, ನಿರ್ವಿಘ್ನವಾಗಿ ಸೇತುಬಂಧನವನ್ನು ಪೂರೈಸಿದರು-ಎಂಬ ಕಥೆಗಳನ್ನು ಧರ್ಮರಾಜನಿಗೆ ಶ್ರೀಕೃಷ್ಣನು ಹೇಳಿ ಧರ್ಮರಾಜನಿಂದ ಗಣಪತಿ ಪೂಜೆ ಯನ್ನು ಮಾಡಿಸಿರುವರು. ಸ್ಕಾಂದಪುರಾಣಾಂತರ್ಗತವಾದ ಗಣೇಶನ ಕಥೆಯಲ್ಲಿ-"ಸನ್ನದ್ಧಯೋಃ ಪುರಾ ವಿಪ್ರಾಃಕುರು ಪಾಂಡವಸೇನಯೋಃ॥ ಪೃಷ್ಟವಾನ್ ದೇವರೇ ಪುತ್ರಂ ಧರ್ಮಪುತ್ರೋ ಯುಧಿಷ್ಠಿರಃ ॥ ನಿರ್ವಿಘ್ನೇನ

ಜಯಮಹ್ಯಂ ವದ ದೇವಕಿನಂದನ ।। ಕಾಲ ದೇವತಾಂ ನಮಸ್ಕೃತ್ಯಂ ಸಮ್ಯಗ್ರಾಜ್ಯಂ ಲಭೇಮಹಿ ।। ಶ್ರೀಕೃಷ್ಣ ಉವಾಚ ।। ಪೂಜಯ ಸ್ವಗಣಾಧ್ಯಕ್ಷಂ ಉಮಾಮಲ ಸಮುದ್ಭವಂ ।। ತಸ್ಮಿನ್ ಸಂಪೂಜಿತೇವೀರ ಸಮ್ಯ ಗ್ರಾಜ್ಯಮವಾಪ್ಸ್ಯ ।।ಶಕ್ರೇಣ ಪೂಜಿತಃ ಪೂರ್ವಂ ತಥಾವೃತ್ರವಧೇನ್ಸಪ ।। ರಾಮಚಂದ್ರೇಣ ಮಹಾತಾಜಾನಕ್ಯನ್ವೇಷಣೆ ತಥಾ ।। ತಸ್ಮಾತ್ಸರ್ವ ಪ್ರಯತ್ನೇನ ಪೂಜನೀಯೋ ಗಣಾಧಿಪಃ ಏವ ಯುಕ್ತಸ್ತು ಕೃಷ್ಣೇನ ಸಾನುಜಃ ಪಾಂಡುನಂದನಃ ।। ಪೂಜಯಾ ಮಾಸದೇವೇಶಂ ಪುತ್ರಂ ತ್ರಿಪುರ ಘಾತಿನಃ।। ತತ್ರ ಸಾಕಾನ್ನಿಹತ್ಯಾಶು ಶತ್ರು ಸಂಘಾಸಶೇಷತಃ ।। ಸಸೈನಿಕಾನ್ ಮಹಾಭಾಗೇಃ ಪ್ರಾಪ್ತವಾನ್ ರಾಜ್ಯಮೋಜಸಾ ।।"-ಕುರುಪಾಂಡವರು ಕುರುಕ್ಷೇತ್ರದಲ್ಲಿ ರಾಜ್ಯಾರ್ಥಿಗಳಾಗಿ ಪರಸ್ಪರ ದ್ವೇಷದಿಂದ ಯುದ್ಧ ಸನ್ನದ್ಧರಾಗಿರುವಾಗ, ಧರ್ಮರಾಜನು ದೇವಕೀ ಪುತ್ರನಾದ ಶ್ರೀಕೃಷ್ಣನನ್ನು ಕುರಿತು, ಎಲೈ ಕೃಷ್ಣ! ನಿರ್ವಿಘ್ನದಿಂದ ನಮಗೆ ಯುದ್ಧದಲ್ಲಿ ಜಯವು ಹೇಗೆ ದೊರಕುವುದು? ಯಾವ ದೇವತೆಯನ್ನು ಪೂಜಿಸಿದರೆ, ನಿಸ್ಸಂಶಯವಾಗಿ ನಮಗೆ ರಾಜ್ಯಪ್ರಾಪ್ತಿಯಾಗುವುದು? ಅದನ್ನು ನನಗೆ ಹೇಳೆಂದು ಕೇಳಲು, ಶ್ರೀಕೃಷ್ಣನು, ಪಾರ್ವತೀದೇವಿಯ ಶರೀರಸಂಬಂಧವಾದ ಕೊಳೆ ಮಣ್ಣಿನಿಂದ ಉತ್ಪನ್ನನಾದ ಗಣಾಧ್ಯಕ್ಷನನ್ನು ಪೂಜಿಸು. ಆದರಿಂದ, ನಿನಗೆ ಯುದ್ಧದಲ್ಲಿ ಜಯ ಉಂಟಾಗಿ, ರಾಜ್ಯ ಲಾಭವಾಗುವುದು. ಹಿಂದಕ್ಕೆ ದೇವೇಂದ್ರನು ವೃತ್ರಾಸುರನನ್ನು ಸಂಹಾರ ಮಾಡಿ ಜಯ ಪಡೆಯುವ ಉದ್ದೇಶವಾಗಿ ಗಣಪತಿಯನ್ನು ಪೂಜಿಸಿ, ಶತ್ರುವನ್ನು ಸಂಹಾರಮಾಡಿ, ಇಂದ್ರಾದಿಪತ್ಯವನ್ನು ಹೊಂದಿದನು. ಶ್ರೀರಾಮದೇವರು ತನ್ನ ಭಾರ್ಯಳಾದ ಸೀತಾದೇವಿಯು ಲಂಕೆಯಲ್ಲಿದ್ದುದಾಗಿ ತಿಳಿದ ಮೇಲೆ, ಸಮುದ್ರದಲ್ಲಿ ಸೇತುಬಂಧನ ಮಾಡಿಲಂಕೆಗೆ ಹೋಗುವ ಉದ್ದೇಶವಾಗಿ ಗಣಪತಿಯನ್ನು ಪೂಜಿಸಿ, ಸೇತುಬಂಧನವನ್ನು ಮಾಡಿ, ಲಂಕೆಯಲ್ಲಿ ರಾವಣಾದಿ ರಾಕ್ಷಸರನ್ನು ಸಂಹರಿಸಿ, ಸೀತೆಯಿಂದೊಡಗೂಡಿ ಮತ್ತೂ ರಾಜ್ಯವನ್ನು ಹೊಂದಿರುವರು- ಆದುದರಿಂದ, ನೀನೂ ಗಣಪತಿಯನ್ನು ಪೂಜಿಸಿ, ರಾಜ್ಯವನ್ನು ಹೊಂದೆಂದು

ಹೇಳಲು, ಶ್ರೀಕೃಷ್ಣನ ವಾಕ್ಯದಂತೆ ಗಣಪತಿಯ ಪೂಜೆಯನ್ನು ಮಾಡಿ, ಕೌರವರನ್ನು ಕೊಂದು ರಾಜ್ಯವನ್ನು ಹೊಂದಿದನು–ಎಂದು ಗಣೇಶ ಕಲ್ಪಕಥೆಯಲ್ಲಿ ಹೇಳಿರುವರು. ಇಲ್ಲಿ "ಉಮಾಮಲ ಸಮುದ್ಭವಂ"–ಎಂದು ಪಾರ್ವತೀದೇವಿಯ ಮೈಕೊಳೆಯಿಂದ ಗಣಪತಿಯನ್ನು ಸೃಷ್ಟಿಸಿದಳೆಂದರೆ, ದೇವೋತ್ತಮಳಾದ ಪಾರ್ವತೀದೇವಿಯ ದೇಹದಲ್ಲಿ ಅಷ್ಟು ಕೊಳೆಯುಂಟೆ? ಸಾಮಾನ್ಯ ದೇವತೆಗಳಿಗೇನೇ, ಮೈಬೆವರಿಲ್ಲ. ವಸ್ತ್ರಕೊಳೆ ಇಲ್ಲ. ಪುಷ್ಪವು ಬಾಡುವುದಿಲ್ಲವೆಂದು ಹೇಳಿರುವರು. ಹೀಗಿರಲು, ಪಾರ್ವತೀ ದೇವಿಯರಿಗೆ ಕೊಳೆಯುಂಟೆ–ಎಂದು ಆಕ್ಷೇಪಿಸಬಾರದು. ಪಾರ್ವತೀದೇವಿಯರು ಗಣಪತಿಯ ಸೃಷ್ಟಿಗೋಸ್ಕರವಾಗಿ, ತಮ್ಮ ಇಚ್ಛೆಯಿಂದ ದೇಹದಲ್ಲಿ ಕೊಳೆಯನ್ನು ಸೃಷ್ಟಿಸಿ, ಅದರಿಂದಗಣಪತಿಯನ್ನು ಸೃಷ್ಟಿಸಿದಳೆಂದು ಭಾವಿಸಬೇಕು. ಶ್ರೀರಾಮದೇವರು, ಇಂದ್ರಾದಿ ದೇವತೆಗಳೂ ಸಹ ಗಣಪತಿಯನ್ನು ಪೂಜಿಸಿದರೆಂದರೆ, ಇಂದ್ರಾದಿ ದೇವತೆಗಳಿಗಿಂತಲೂ ತಾರತಮ್ಯದಲ್ಲಿ ಕೇವಲ ಕಮ್ಮಿ–ಅಂದರೆ, ೧೦ ಮೆಟ್ಟಲುಗಳಿಗೆ ಕೆಳಗಿರುವ ಗಣಪತಿಯನ್ನು ಉತ್ತಮ ಕಕ್ಷ್ಯದವರು ಪೂಜಿಸುವುದಂತೆ? ಶ್ರೀಪರಮಾತ್ಮಗೂ ಸಹರಾಮ ರೂಪದಿಂದ ಪೂಜಿಸಿರುವದಾಗಿ ಕಥೆಯಲ್ಲಿ ಹೇಳಿರುವರು. ಇದರ ಸಮಾಧಾನವೇನೆಂದರೆ, ಪಾರ್ವತೀದೇವಿಯರು, ಸ್ನಾನದ ನಿಮಿತ್ತ ಮಾಡಿ ಗಣಪತಿಯನ್ನು ದ್ವಾರಪಾಲಕನನ್ನಾಗಿ ಮಾಡಿರುವಾಗ, ಬಂದ ರುದ್ರದೇವರನ್ನು ಒಳಗೆ ಹೋಗಬಾರದೆಂದು ತಡೆದುದಕ್ಕಾಗಿ, ರುದ್ರದೇವರು ಗಣಪತಿಯನ್ನು ಸಂಹರಿಸಿ, ಪಾರ್ವತಿಯ ಕೋರಿಕೆಯಂತೆ, ಅವನನ್ನು ಗಜಮುಖದಿಂದ ಬದುಕಿಸಿದರೆಂಬ ಕಥೆಯನ್ನು ಹಿಂದೆ ಬರೆದಿದೆ. ರುದ್ರದೇವರು ಗಣಪತಿಯನ್ನು ಬದುಕಿಸಿದ ಮೇಲೆ, ಪಾರ್ವತೀದೇವಿಯ ಪ್ರೀತ್ಯರ್ಥವಾಗಿ, ಈ ದಿವಸ ಮೊದಲು ಯಾರೇ ಆಗಲಿ, ಯಾವ ಕೆಲಸವನ್ನು ಮಾಡಬೇಕಾದರೂ, ಮೊದಲು ಗಣಪತಿಯ ಪೂಜೆಯನ್ನು ಮಾಡಿ, ಆಮೇಲೆ ತಮ್ಮ ಇಷ್ಟವಾದ ಕಾರ್ಯವನ್ನು ಮಾಡಬೇಕು. ಹಾಗೆ ಮಾಡುವುದರಿಂದ ಆ ಕಾರ್ಯವು ನಿರ್ವಿಘ್ನವಾಗಿ ಪೂರ್ಣವಾಗುವುದು.

ಹಾಗೆ ಮಾಡದೆ, ತಮ್ಮ ಇಷ್ಟಕಾರ್ಯವನ್ನು ಮಾಡಲುಪಕ್ರಮಿಸಿದರೆ, ಆ ಕಾರ್ಯವು ವಿಘ್ನಬಾಹುಳ್ಯದಿಂದ ಕೆಟ್ಟುಹೋಗುವದೆಂದು ಗಣಪತಿಗೆ ವರವನ್ನು ಕೊಟ್ಟಿದ್ದರು. ಆ ವರವನ್ನು ಸತ್ಯಮಾಡುವುದಕ್ಕಾಗಿ–"ತ್ರಿಪುರಂ ಹಂತು ಕಾಮೇನ ಶರ್ವೇಣಾರಾಧಿತಃ ಪುರಾ"–ತ್ರಿಪುರಾಸುರರ ಸಂಹಾರಕಾಲದಲ್ಲಿ ರುದ್ರದೇವರು ತಾವೇ ಗಣಪತಿ ಪೂಜೆಯನ್ನು ಮಾಡಿದರು. ಇಂದ್ರಾದಿಗಳು ರುದ್ರದೇವರ ವರ ಗೌರವದಿಂದಲೆ ಪೂಜಿಸಿದರು. ಶ್ರೀರಾಮದೇವರು ಅಸುರಜನವನ್ನು ಮೋಹಿಸುವ ಉದ್ದೇಶವಾಗಿ, ರುದ್ರದೇವರ ವರಕ್ಕೆ ಗೌರವವನ್ನು ಕೊಡುವುದಕ್ಕಾಗಿ ತಾವೂ ಪೂಜಿಸಿದರೆಂದು ತಾತ್ಪರ್ಯ.

ಆದರೂ, ಇವರೆಲ್ಲರೂ ಅಂತರ್ಯಾಮಿಯಾದ ಪರಮಾತ್ಮನ ಪೂಜೆಯೆಂದೇ ಭಾವಿಸಿ ಪೂಜಿಸಿರುವರು. ವಿಶ್ವಂಭರನಾಮಕ ಪರಮಾತ್ಮನೇ ಗಣಪತಿಯೊಳಗಿದ್ದು, ಪೂಜೆಯನ್ನು ಸ್ವೀಕರಿಸುವನು. ಆದುದರಿಂದಲೇ, ದಾಸಾರ್ಯರು ಈಶಾನುಗ್ರಹವು ನಿನ್ನಲ್ಲಿ ಎಷ್ಟುಂಟೋ–ಎಂದು ಸ್ತುತಿಸಿರುವರು. ॥ ೧೨ ॥

**೩. ಭಾವದರ್ಪಣ ಟೀಕಾ :**

ಸಮಸ್ತರಿಂದಲೂ ಪೂಜಾಕ್ಕೆ ಅರ್ಹನಾಗಿದ್ದ ತತ್ತ್ವಯುಕ್ತ ನಿನ್ನಲ್ಲಿ ಈಶಾನುಗ್ರಹ ಅತಿಶಯವಿರುವುದೆಂದು ಸ್ತೋತ್ರಮಾಡುತ್ತಾರೆ । ಶುಕ್ರ–ಇತೀ। ಧರ್ಮರಾಜನು – ಶ್ರೀಕೃಷ್ಣ ಉವಾಚ–"ಪೂಜಯ ಸ್ವಗಣಾಧ್ಯಕ್ಷಂ ಉಮಾಪುತ್ರಂ ಗಜಾನನಂ । ಯಸ್ಮಿನ್ವೈ ಪೂಜ್ಯತೇ ರಾಜನ್ ಧ್ರುವಂ ರಾಜ್ಯಮವಾಪ್ಸ್ಯಸೀತಿ" ॥ – ವಿನಾಯಕ ಕಲ್ಪೋಕ್ತೇಃ ॥

ವಕ್ರತುಂಡ–ವಕ್ರವಾದ ಮುಖವುಳ್ಳವ. "ವಕ್ತ್ರಾಸ್ಯೇ ವದನಂ ತುಂಡಮಾನನಂ ಲಪನಂ ಮುಖ"–**ಇತಿ ಅಮರಃ.** ॥ ೧೨ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :**

ಅನ್ವಯೋನ ಪೂಜ್ಯತ್ವಮಾಹ–"ಶುಕ್ರ" ಇತಿ. ॥ ೧೨ ॥

## ಕನ್ನಡಾರ್ಥ

ಪೂಜೆಯನ್ನು ಮಾಡಿದವರು ಇಷ್ಟಪ್ರಾಪ್ತಿ, ಅನಿಷ್ಟ ನಿವೃತ್ತಿಫಲವನ್ನು ಪಡೆದಿದ್ದಾರೆಂಬ ಅನ್ವಯವ್ಯಾಪ್ತಿಯಿಂದ ಗಣಪತಿಯನ್ನು ಪೂಜಿಸ ಬೇಕೆಂಬುದಾಗಿ-"ಶುಕ್ರಶಿಷ್ಯರ"-ಈ ಪದ್ಯದಿಂದ ಹೇಳುತ್ತಾರೆ. ॥ ೧೨ ॥

## ಶ್ರೀಗುರುಹೃದಯಪ್ರಕಾಶಿಕೆ

ಶುಕ್ರಶಿಷ್ಯರಾದ ಅಸುರರನ್ನು ಸಂಹರಿಸುವುದಕ್ಕೋಸ್ಕರ, ಶಕ್ರನೆಂಬ ದೇವೇಂದ್ರನು ನಿನ್ನನ್ನು ಪೂಜಿಸಿದನು. ಉರುಕ್ರಮನೆಂದರೆ, ಉತ್ಕೃಷ್ಟಚರಿತ್ರ ನಾದ ಶ್ರೀರಾಮಚಂದ್ರದೇವರು ಸೇತುಮುಖವೆಂಬ ರಾಮನು ಸೇತುವಿನ ಮುಂದೆ ನಿನ್ನನ್ನು ಪೂಜಿಸಿದನು. ಲೋಕಶಿಕ್ಷಾರ್ಥ ಚಕ್ರವರ್ತಿಯಾದ ಧರ್ಮರಾಯನು ಚಕ್ರಪಾಣಿಯಾದ ಶ್ರೀಕೃಷ್ಣನ ನುಡಿಯೆಂಬ ಆಜ್ಞೆಗೋಸ್ಕರ ಭಜಿಸಿದನು. ವಕ್ರತುಂಡನೆಂದರೆ, ಗಜದಂತೆ ಓರೆಯಾದ ಮುಖಕಮಲ ಉಳ್ಳವನೇ.ಜಗದೀಶನ ಅನುಗ್ರಹ ನಿನ್ನಲ್ಲಿ ಎಂತುಟೋ?-ಅಂದರೆ, ಅಪಾರವಾಗಿರುವುದು ಎಂದರ್ಥ. ॥ ೧೨ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶುಕ್ರಾಚಾರ್ಯರು ದೈತ್ಯರ ಗುರುಗಳು. ಸಮಸ್ತದೈತ್ಯವರ್ಗ ಶುಕ್ರಾಚಾರ್ಯರ ಶಿಷ್ಯರು. ಹಿಂದೆ, ಇಂದ್ರನು ವೃತಾಸುರನನ್ನು ಸಂಹರಿಸುವ ಸಮಯದಲ್ಲಿ ಶ್ರೀಹರಿಯಿಂದ ಆದೇಶಿತನಾಗಿ ಶ್ರೀವಿಘ್ನೇಶ್ವರನನ್ನು ಪೂಜಿಸಿದನು. ಅದರಿಂದ ಸಂಹಾರಕಾರ್ಯದಲ್ಲಿ ಇಂದ್ರನಿಗಿದ್ದ ಸಮಸ್ತ ವಿಘ್ನಗಳೂ ಪರಿಹಾರವಾದುವು. ದಧೀಚಿ ಮುನಿಯ ಬೆನ್ನಾಟವನ್ನೂ ವಜ್ರಾ ಯುಧವನ್ನಾಗಿ ಮಾಡಿಕೊಂಡು, ಮಂತ್ರಸಿದ್ಧಿಯ ಬಲದಿಂದ ವೃತ್ರಾಸುರನನ್ನು ಸಂಹರಿಸಿದನು. ಶ್ರೀವಿನಾಯಕನು ಆದಿಪೂಜಿತನೆಂಬ ಶ್ರೀಹರಿಯ ಆಜ್ಞೆಯೇ ಇದೆ.

೨. ಸೀತಾನ್ವೇಷಣಸಮಯದಲ್ಲಿ, ಶ್ರೀರಾಮಚಂದ್ರ ಮೂರ್ತಿಯು ಸಕಲ ವಾನರ ಭಲ್ಲೂಕ ಸೈನ್ಯ ಸಮೇತನಾಗಿ, ದಕ್ಷಿಣ ಸಮುದ್ರಕ್ಕೆ ಸೇತುವೆಯ

ನಿರ್ಮಿಸುವ ಪ್ರಾರಂಭದಲ್ಲಿ, ಆ ಸೇತುಮುಖದಲ್ಲಿ ವಿಘ್ನರಾಜನನ್ನು ಮೊದಲು ಪೂಜಿಸಿದನು. ರಾವಣಾದಿಗಳನ್ನು ಸಂಹರಿಸಿ, ಸೀತೆಯನ್ನು ಅಗ್ನಿದ್ವಾರಾ ಸ್ವೀಕರಿಸಿ, ವಿಭೀಷಣನಿಗೆ ಲಂಕಾಧಿಪತ್ಯವನ್ನಿತ್ತನು.

೩. ಕುರುಕ್ಷೇತ್ರದ ಮಹಾಸಂಗ್ರಾಮದ ಆರಂಭದಲ್ಲಿ, ಚಕ್ರಪಾಣಿಯಾದ ಶ್ರೀಕೃಷ್ಣನ, ಆದೇಶದಂತೆ ಗಣನಾಥನನ್ನು ಮೊದಲು ಪೂಜಿಸಿ, ಯುದ್ಧದಲ್ಲಿ ಜಯಗಳಿಸಿದನು,

ಶ್ರೀಮನ್ಮಹಾಭಾರತದಲ್ಲಿ ಯುಧಿಷ್ಠಿರನು, ತನಗೆ ಜಯ ಹೇಗೆ ಪ್ರಾಪ್ತಿಯಾಗುವುದೆಂದು ಚಿಂತಾಕ್ರಾಂತನಾಗಲು–

ಶ್ರೀ ಕೃಷ್ಣ ಉವಾಚ–

"ಪೂಜಯ ಸ್ವಗಣಾಧ್ಯಕ್ಷಂ ಉಮಾಪುತ್ರಂ ಗಜಾನನಂ ।

ಯಸ್ಮಿನ್ವೈ ಪೂಜ್ಯತೇ ರಾಜನ್ ಧ್ರುವಂ ರಾಜ್ಯಮವಾಪ್ಸ್ಯಸೀತಿ ॥

"ಎಲೈ ಧರ್ಮರಾಜನೇ, ತನ್ನ ಗಣಗಳಿಂದ ಕೂಡಿಕೊಂಡು, ಅಧ್ಯಕ್ಷನಾಗಿದ್ದು, ಸರ್ವ ಸಜ್ಜನರ ವಿಘ್ನಪರಿಹಾರಕನಾದ ಉಮಾಪುತ್ರನಾದ ಗಜಾನನನ್ನು ಭಕ್ತಿಯಿಂದ ಪೂಜಿಸಿ, ಅವನ ಅನುಗ್ರಹದಿಂದ ನೀನು ಕಷ್ಟಗಳಿಂದ ಪಾರಾಗಿ, ಕುರುಕ್ಷೇತ್ರದ ಈ ಮಹಾಸಂಗ್ರಾಮದಲ್ಲಿ ಜಯಗಳಿಸಿ, ರಾಜ್ಯವನ್ನು ಅತ್ಯಂತ ಶೀಘ್ರವಾಗಿ ಹೊಂದುವೆ."

೪. ಶ್ರೀಗಣನಾಥನ ಮುಖವು ಗಜವದನವು. ಸೊಂಡಿಲು ವಕ್ರಾಕಾರವಾಗಿದೆ. ಇದರಿಂದ, ವಿಘ್ನೇಶ್ವರನಿಗೆ **ವಕ್ರತುಂಡ**–ನೆಂದು ನಾಮ.

ಹೇ ವಕ್ರತುಂಡನೇ, ನೀನು ಪ್ರಾಣಾವೇಶಯುತನಾಗಿರುವುದರಿಂದ, ನಿನ್ನಲ್ಲಿ ಶ್ರೀಹರಿಯ ಸಾನ್ನಿಧ್ಯ ಮತ್ತು ಅನುಗ್ರಹ ಅತಿಶಯವಾಗಿದೆ. ಪಾರ್ವತೀ ಮತ್ತು ರುದ್ರದೇವರ ವರವನ್ನು ಸತ್ಯವನ್ನಾಗಿಸಲು, ಶ್ರೀಹರಿಯೇ ವಿನಾಯಕನನ್ನು ಆದಿಯಲ್ಲಿ ವಂದಿಸಬೇಕೆಂದು ಆಜ್ಞೆಮಾಡಿದ್ದಾನೆ. ಶ್ರೀ ರಾಮಾವತಾರದಲ್ಲಿ ತನ್ನ ಆದೇಶದಂತೆ ತಾನೇ ನಡೆದುಕೊಂಡಿದ್ದಾನೆ–

"ವಂದಿಸುವುದಾದಿಯಲಿ ಗಣನಾಥನ–ಶ್ರೀಹರಿಯಾಜ್ಞೆ ಇದಕುಂಟು–**ಶ್ರೀ ಪುರಂದರದಾಸರ ವಚನ.** ॥ ೧೨ ॥"

## ಪದ್ಯ–೧೩

**ಮೂಲ :**

**ಕೌರವೇಂದ್ರನು ನಿನ್ನ ಭಜಿಸದ ।**
**ಕಾರಣದಿ ನಿಜಕುಲ ಸಹಿತ ಸಂ ।**
**ಹಾರ ಐದಿದ ಗುರುವರ ವೃಕೋದರನ ಗದೆಯಿಂದ ॥**
**ತಾರಕಾಂತಕನನುಜ ಎನ್ನ ।**
**ಶರೀರದೊಳು ನೀನಿಂತು ಧರ್ಮ ।**
**ಪ್ರೇರಕನು ನೀನಾಗಿ ಸಂಕೈಸೆನ್ನ ಕರುಣದಲಿ ॥ ೧೩ ॥**

**ಅವತರಣಿಕೆ :**

ಶ್ರೀವಿಘ್ನೇಶ್ವರನನ್ನು ಆದಿಯಲ್ಲಿ ಅರ್ಚಿಸದೆ, ಉಪೇಕ್ಷಿಸಿದ ದುರ್ಯೋಧನನು, ಸಪರಿವಾರನಾಗಿ ನಾಶಹೊಂದಿದನೆಂದು ತಿಳಿಸುತ್ತಾರೆ. ॥ ೧೩ ॥

**ಪ್ರತಿಪದಾರ್ಥ :**

**ಕೌರವೇಂದ್ರನು** = ಕುರುಕುಲಪತಿಯಾದ ದುರ್ಯೋಧನನು, **ನಿನ್ನ ಭಜಿಸದ ಕಾರಣದಿ** = ಯುದ್ಧಾರಂಭದಲ್ಲಿ ನಿನ್ನನ್ನು ಸ್ತೋತ್ರಮಾಡಿ, ಪೂಜಿಸದಿದ್ದ ಕಾರಣದಿಂದ, **ನಿಜಕುಲಸಹಿತ** = ತನ್ನ ಬಂಧು ಭಾಂದವರೊಡನೆ, **ಗುರುವರವೃಕೋದರನ** = ಜೀವೋತ್ತಮರಾದ ಭೀಮಸೇನ ದೇವರ, **ಗದೆಯಿಂದ** = ಗದಾಪ್ರಹಾರದಿಂದ, **ಸಂಹಾರ ಐದಿದ** = ಮೃತನಾದನು. (ಸರ್ವಕೌರವರ ಕುಲ ನಾಶವಾಯಿತು) **ತಾರಕಾಂತಕನ** = ತಾರಕಾಸುರನನ್ನು ಸಂಹರಿಸಿದ ಷಣ್ಮುಖನ, **ಅನುಜ** = ತಮ್ಮನಾದ ಶ್ರೀ ವಿನಾಯಕನೇ, **ಎನ್ನ ಶರೀರದೊಳು** = ನನ್ನ ಸ್ಥೂಲದೇಹದಲ್ಲಿ, **ನೀನಿಂತು** = ನೀನು ವಿದ್ಯಮಾನನಾಗಿದ್ದವನಾಗಿ, **ಧರ್ಮಪ್ರೇರಕನು ನೀನಾಗಿ** = ಮನಸ್ಸನ್ನು ಧರ್ಮಕಾರ್ಯಗಳಲ್ಲಿ ಪ್ರವೃತ್ತವಾಗುವಂತೆ ಪ್ರೇರಿಸಿ, **ಕರುಣದಲಿ** = ಅಂತಃಕರಣಪೂರ್ವಕವಾಗಿ, **ಎನ್ನ ಸಂಕೈಸು** = ನನ್ನನ್ನು ಸಂರಕ್ಷಿಸು. ॥ ೧೩ ॥

## ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ವಿಘ್ನೇಶ್ವರನ್ನ ಧರ್ಮಕಾರ್ಯದಲ್ಲಿ ಬುದ್ಧಿಪ್ರೇರಣಾ ಮಾಡೆಂದು ಪ್ರಾರ್ಥನಾ ಮಾಡತಾರೆ.

ಕೌರವವಂಶದಲ್ಲಿ ಉತ್ಪನ್ನನಾದ ಮೂಲ ಕಲಿ ಅಂಶನಾದ ದುರ್ಯೋಧನನು ಯುದ್ಧಪ್ರಾರಂಭದಲ್ಲಿ, ನಿನ್ನ ಭಜನಿ ಮಾಡದೆ ಇದ್ದ ಕಾರಣದಿಂದ, ಸ್ವಕೀಯಕುಲದವರಾದ ಬಂಧು ಬಳಗಾದಿಗಳೇನು, ಅನ್ಯರಾದ ಯುದ್ಧಕ್ಕೆ ಸಹಾಯಕಾರಿಗಳಾದ ರಾಜರುಗಳೇನು–ಇವರುಗಳ ಸಹಿತ ಪರಸ್ಪರ ಯುದ್ಧದಲ್ಲಿ ಸಂಹೃತರಾಗಿನ್ನು, ದುರ್ಯೋಧನನಾದ ತಾನು, ಜೀವೋತ್ತಮರಾದ ಶ್ರೀವಾಯುದೇವರ ಅಂಶಭೂತಾರದ ಭೀಮಸೇನ ದೇವರ ಗದಾದಿಂದ ಮೃತನಾದನು. ತನ್ನ ತಮ್ಮಂದಿರ ಸಹಿತನಾಗಿ ವಂಶವಿಲ್ಲದಂತೆ ಮಾಡಿಕೊಂಬೋವನಾದ. ತಾರಕಾಸುರನ ಸಂಹಾರ ಮಾಡಿದ ಮನ್ಮಥನ ಅಂಶನಾದ ಷಣ್ಮುಖನ ತಮ್ಮನಾದ ಹೇ ವಿನಾಯಕನೇ, ಎನ್ನ ದೇಹದೊಳು ನೀನು ನಿಂತವನಾಗಿ, ಧರ್ಮಕಾರ್ಯಗಳಿಗೆ ಮನಸ್ಸು ಪ್ರೇರಣ ಮಾಡಿದಂಥಾವನಾಗಿ, ಅಂತಃಕರಣಪೂರ್ವಕದಿಂದ, ಎನ್ನ ಸಂರಕ್ಷಣ ಮಾಡೋವನಾಗಬೇಕು–ಎಂತ ಪ್ರಾರ್ಥನಾ ಮಾಡೋವರಾಗಿದ್ದಾರೆಂತ ತಾತ್ಪರ್ಯ.

**ವಿಶೇಷಾರ್ಥ** : ವೃಕೋದರ–ಎಂದರೆ, ವೃಕವೆಂಬ ಅಂಗುಷ್ಠ ಮಾತ್ರ ಅಗ್ನಿ ಉದರದಲ್ಲುಳ್ಳ ಭೀಮಸೇನ ದೇವರು. ಇನ್ನೊಂದು ಅರ್ಥ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಗ್ರಂಥದಲ್ಲಿ–

**ಭಕ್ತಿಃ ಜ್ಞಾನಂ ಚ ವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃ ಸ್ಥಿತಿಃ ।**
**ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತೀರಿತಃ ॥**

–ಇತಿ ದ್ವಿತೀಯಾಧ್ಯಾಯ ೧೪೪ನೇ ಶ್ಲೋಕ. ॥ ೧೩ ॥

**೨. ಭಾವಪ್ರಕಾಶಿಕೆ** :

ಮೇಲೆ ಹೇಳಿದಂತೆ, ಅನೇಕರು ಕಾರ್ಯಾರಂಭದಲ್ಲಿ ಗಣಪತಿ ಪೂಜೆಯನ್ನು ಮಾಡಿ, ಕಾರ್ಯವನ್ನು ನಿರ್ವಿಘ್ನವಾಗಿ ಪೂರೈಸಿ

ಕೊಂಡಿರುವರು. ಪಾಪಿಯಾದ ದುರ್ಯೋಧನನು ಯುದ್ಧಾರಂಭದಲ್ಲಿ ಗಣಪತಿ ಪೂಜೆಯನ್ನು ಮಾಡದೇ ಇದ್ದುದರಿಂದ, ಇದ್ದ ಬಂಧುಗಳ ಸಹಿತ ನಾಗಿ, ತಾನೂ ಭೀಮಸೇನದೇವರ ಗದಾಪ್ರಹಾರದಿಂದ ಕೊಲ್ಲಲ್ಪಟ್ಟನು. ಇದೇ ವಿಷಯವನ್ನೇ ಭಾಗವತ ಅಷ್ಟಮಸ್ಕಂಧದಲ್ಲಿ, ದೇವತೆಗಳು ಅಮೃತ ಮಥಾನಾರಂಭದಲ್ಲಿ ವಿನಾಯಕನ ಪೂಜೆಯನ್ನು ಮಾಡದೆ, ಉಪಕ್ರಮಿಸಿದುದರಿಂದ, ಬೆಟ್ಟವು ನೀರಿನಲ್ಲಿ ಮುಳುಗಿ ಹೋಯಿತೆಂತಲೂ, ಪರಮಾತ್ಮನು ಕೂರ್ಮಾವತಾರವನ್ನು ಮಾಡಿ, ಮೇಲೆ ಅದನ್ನು ತಂದರೆಂದು–"ವಿಲೋಕ್ಯ ವಿಘ್ನೇಶಗತಿಂ ತದೀಶ್ವರೋ ದುರಂತ ವಿರ್ಯೋವಿತಥಾಭಿ ಸಂಧಿಃ"–ಎಂಬ ಶ್ಲೋಕದಿಂದ ಹೇಳಿರುವವು. ಆಮೇಲೆ, ದೇವದೈತ್ಯರೆಲ್ಲರೂ ಕೂಡಿ "ಅಮೃತೋತ್ಪಾದನಾರ್ಥಾಯ ತಥಾ ದೇವಾಸುರೈರತು"–ಎಂಬ ಗಣೇಶ ಕಥೆಯ ವಾಕ್ಯದಂತೆ ಗಣಪತಿ ಪೂಜೆಯನ್ನು ಮಾಡಿ, ಅಮೃತವನ್ನು ಪಡೆದರೆಂಬ ಅರ್ಥವು ಸಿದ್ಧವಾಗುವುದು. ಆದುದರಿಂದ, ಕಾರ್ಯಾರಂಭದಲ್ಲಿ ಗಣಪತಿಯನ್ನು ಪೂಜಿಸಲೇಬೇಕೆಂದು ತಾತ್ಪರ್ಯ. ಎಲೈ ಷಣ್ಮುಖಾನನುಜನೆ! ನೀನು ಎನ್ನೊಳಗೆ ನಿಂತು, ಕರುಣದಿಂದ ನನ್ನ ಮನಸ್ಸನ್ನು ಧರ್ಮ ವಿಷಯದಲ್ಲಿ ಪ್ರೇರಿಸಿ ನನ್ನನ್ನುದ್ಧರಿಸು. ॥ ೧೩ ॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :

ವ್ಯತಿರೇಕಮಾಹ–"ಕೌರವೇಂದ್ರ" ಇತಿ. ॥

## ಕನ್ನಡಾರ್ಥ

ಗಣಪತಿಯನ್ನು ಪೂಜಿಸದವರು ಅನಿಷ್ಟಪ್ರಾಪ್ತಿಯನ್ನು, ಇಷ್ಟಹಾನಿಯನ್ನು ಹೊಂದಿರುತ್ತಾರೆಂಬ ವ್ಯತಿರೇಕವ್ಯಾಪ್ತಿಯನ್ನು–"ಕೌರವೇಂದ್ರನು"–ಈ ಪದ್ಯದಿಂದ ಹೇಳುತ್ತಾರೆ. ॥ ೧೩ ॥

## ಶ್ರೀ ಗುರುಹೃದಯಪ್ರಕಾಶಿಕೆ

ಕೌರವೇಂದ್ರನು ನಿನ್ನನ್ನು ಭಜಿಸದೆ ಹೋದ್ದರಿಂದಲೇ, ನಿಜಕುಲವೆಂಬ ವಂಶಸಹಿತನಾಗಿ ಗುರವರನಾದ ವೃಕನೆಂಬ ಅಂಗುಷ್ಠಮಾತ್ರ ಅಗ್ನಿ

ಉದರದಲ್ಲಿದ್ದ ಕಾರಣ, ವೃಕೋದರನೆಂದು ಹೆಸರುಳ್ಳ ಭೀಮಸೇನನ ಗದೆಯಿಂದ ಸಂಹಾರ ಹೊಂದಿದನು. ತಾರಕಾಸುರನನ್ನು ಸಂಹರಿಸಿದ ಷಣ್ಮುಖನ ತಮ್ಮನೇ, ನನ್ನ ಶರೀರದಲ್ಲಿ ವಿಶೇಷಾನುಗ್ರಹರೂಪದಿಂದ ನಿಂತು, ಧರ್ಮಪ್ರೇರಕನು ನೀನೇ ಆಗಿ, ನನ್ನನ್ನು ಕರುಣದಿಂದ ರಕ್ಷಿಸು. ॥ ೧೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಕುರುಕುಲಾಧಿಪತಿಯಾದ ದುರ್ಯೋಧನನು **ಕೌರವೇಂದ್ರನು**. ಕುರುಕ್ಷೇತ್ರದ ಮಹಾಸಂಗ್ರಾಮದ ಪ್ರಾರಂಭದಲ್ಲಿ, ಸರ್ವವಿಘ್ನ ಪರಿಹಾರಕ ನಾದ ಶ್ರೀವಿಘ್ನೇಶ್ವರನನ್ನು ಪೂಜಿಸಲಿಲ್ಲ. ವಿಷಯದ ಅರಿವಿದ್ದರೂ, ಸ್ವ ಮದಾಂಧನಾದ ಕಲಿಸ್ವರೂಪನಾದ ದುರ್ಯೋಧನನು ಶ್ರೀ ಗಣನಾಯಕನನ್ನು ಉಪೇಕ್ಷಿಸಿದನು.

"ವಿವಾಹೇ, ವಿದ್ಯಾರಂಭೇ, ಸಂಗ್ರಾಮೇ, ರಿಪುಸಂಕಟೇ"–ಇತ್ಯಾದಿ ಸಮಯಗಳಲ್ಲಿ ಶ್ರೀವಿಘ್ನೇಶ್ವರನ ಪೂಜೆ ಅತ್ಯಗತ್ಯವೆಂದು ಶ್ರೀಹರಿಯಾಜ್ಞೆ ಇದ್ದರೂ, ದುರ್ಯೋಧನನು ಲಕ್ಷ್ಯಗೊಡಲಿಲ್ಲ.

೨. ಈ ಕಾರಣದಿಂದ, ಕೌರವೇಂದ್ರನು ತನ್ನ ಸಕಲ ಅನುಜರ ಪರಿವಾರ ಸಹಿತ, ಸಮೀಪದ ಬಂಧು ಬಾಂಧವರೊಡನೆ ನಾಶ ಹೊಂದಿದನು.

೩. ತ್ರೈಲೋಕ್ಯಾಚಾರ್ಯರೂ, ಜೀವೋತ್ತಮರೂ ಆದ ಶ್ರೀ ವಾಯುದೇವರ ದ್ವಿತೀಯಾವತಾರ ಸಂಭೂತನಾದ ಶ್ರೀಭೀಮಸೇನರು ಪರಮ ಭಾಗವತ್ತೋತ್ತಮರು. ಭಾಗವತ ಧರ್ಮದಲ್ಲಿ ಸದಾನಿರತರು. **ವೃಕ**–ನಾಮಕ ಶ್ರೀಪರಮಾತ್ಮನನ್ನು ತಮ್ಮ ಜಠರಾಗ್ನಿಯಲ್ಲಿ ಹೊಂದಿರು ವುದರಿಂದ–ಭೀಮಸೇನನಿಗೆ **ವೃಕೋದರ**–ನೆಂದು ಹೆಸರು.

ಅಂತಹ ವೃಕೋದರ ನಾಮಕರಾದ ಅಸಮ ಪರಾಕ್ರಮಿಗಳಾದ ಶ್ರೀ ಭೀಮಸೇನದೇವರ ಗದಾಪ್ರಹಾರದಿಂದ ಕೌರವೇಂದ್ರನು ನಿಜಕುಲ ಸಹಿತ ಸಂಪೂರ್ಣವಾಗಿ ಸಂಹೃತನಾದನು.

೪. ತಾರಕಾಸುರ :

ಪ್ರಬಲರಾದ ದೈತ್ಯ ತಾರಾಕ್ಷ-ಕಮಲಾಕ್ಷ-ವಿದ್ಯುನ್ಮಾಲಿ-ಎಂಬ ಮೂವರು ಪುತ್ರರು. ಈ ಮೂವರೂ ಬ್ರಹ್ಮದೇವರನ್ನು ಕುರಿತು, ಉಗ್ರ ತಪಸ್ಸನ್ನು ಆಚರಿಸಿ, ಅನೇಕ ವರಗಳನ್ನು ಪಡೆದು, ತ್ರಿಪುರಾಸುರರೆನಿಸಿ ಕೊಂಡರು. ತಾರಕಾಸುರನ ತಾಯಿ ವರಾಂಗಿ ಎಂಬುವಳು, ವಜ್ರಾಂಗನೆಂಬ ದೈತ್ಯನು ತಾರಕನ ತಂದೆಯು. ತಾರಕಾಸುರನು ಪಾರಿಯಾತ್ರಾ ಪರ್ವತದಲ್ಲಿ ತಪಸ್ಸಿನ ದ್ವಾರಾ ಬ್ರಹ್ಮನಿಂದ ವರ ಪಡೆದನು. ಅಂದಿನವರೆಗೆ ಅವತರಿಸಿದ್ದ ೧, ೨,೩, ೪, ೫ ಮುಖಗಳುಳ್ಳ (ಪಂಚಮುಖ ರುದ್ರದೇವರ ಪರ್ಯಂತ) ಯಾರಿಂದಲೂ ಸಾವು ಬರದಂತೆ ವರ ಪಡೆದನು. ವರದಿಂದ ಮದೋನ್ಮತ್ತನಾಗಿ, ಮೂರ್ಲೋಕವನ್ನೂ ಪೀಡಿಸತೊಡಗಿದ. ಆಗ, ಸಕಲ ದೇವತೆಗಳಿಂದ ಪ್ರಾರ್ಥ್ಯಮಾನರಾದ ಶ್ರೀರುದ್ರದೇವರು ಪಾರ್ವತಿಯ ದ್ವಾರಾ, ಕುಮಾರ (ಸ್ಕಂಧ) ನನ್ನು ಪಡೆದರು. ಕುಮಾರ ಸಂಭವವಾಯಿತು. ಕುಮಾರಸ್ವಾಮಿಯೇ ಕಾಮನ ಅವತಾರನು. ಅವನಿಗೆ ಆರು ಮುಖಗಳು. ಆ ಷಣ್ಮುಖನು ತಾನು ಜನಿಸಿದ ಏಳನೆಯ ದಿನ ತಾರಕಾಸುರನನ್ನು ಸಂಹರಿಸಿದನು. ಇದರಿಂದ ಷಣ್ಮುಖನು-ತಾರಕಾಂತಕನು. ಶ್ರೀವಿನಾಯಕನು ತಾರಕಾಂತಕನ ತಮ್ಮನು (ಅನುಜ).

೫. ಎಲೈ ತಾರಕಾರಿಯಾದ ಷಣ್ಮುಖನ ಅನುಜನೇ, ನೀನು ನನ್ನ ಸ್ಥೂಲದೇಹದಲ್ಲಿ ವಿದ್ಯಮಾನನಾಗಿರು. ಸದಾ ನನ್ನ ಮನಸ್ಸನ್ನು ಧರ್ಮಕಾರ್ಯಗಳಲ್ಲಿ ಪ್ರವೃತ್ತನಾಗುವಂತೆ ಪ್ರೇರಿಸು. ನನ್ನನ್ನು ದುರಿತಗಳಿಂದ ನಿರುತ ಸಂರಕ್ಷಿಸೆಂದು ಪ್ರಾರ್ಥಿಸುತ್ತಾರೆ. ॥ ೧೩ ॥

## ಪದ್ಯ–೧೪

**ಮೂಲ :**

**ಏಕವಿಂಶತಿ ಮೋದಕ ಪ್ರಿಯ ।**
**ಮೂಕರನು ವಾಗ್ಮಿಗಳ ಮಾಳ್ಪ ಕೃ ।**
**ಪಾಕರೇಶ ಕೃತಜ್ಞ ಕಾಮದ ಕಾಯೋ ಕೈಪಿಡಿದು ॥**
**ಲೇಖಕಾಗ್ರಣಿ ಮನ್ಮನದ ದು ।**
**ವ್ಯಾಕುಲವ ಪರಿಹರಿಸು ದಯದಿ ಪಿ ।**
**ನಾಕಿ ಭಾರ್ಯಾ ತನುಜ ಮೃದ್ಭವ ಪ್ರಾರ್ಥಿಸುವೆ ನಿನ್ನ ॥ ೧೪ ॥**

**ಅವತರಣಿಕೆ :**

ಏಕವಿಶಂತಿ ಮೋದಕಪ್ರಿಯನೂ, ಲೇಖಕಾಗ್ರಣಿಯೂ ಆದ ಶ್ರೀ ವಿಘ್ನೇಶ್ವರನನ್ನು ಮನದವ್ಯಾಕುಲವನ್ನು ಪರಿಹರಿಸೆಂದು ಪ್ರಾರ್ಥಿಸುತ್ತಾರೆ. ॥ ೧೪ ॥

**ಪ್ರತಿಪದಾರ್ಥ :**

**ಏಕವಿಂಶತಿ** = ೨೧ ಸಂಖ್ಯಾಕವಾದ, **ಮೋದಕಪ್ರಿಯ** = ಕಡುಬುಗಳನ್ನು ಭಕ್ತಿಯಿಂದ ತನಗೆ ಅರ್ಪಿಸುವ ಭಕ್ತರಲ್ಲಿ ಪರ್ಮಾಂತಃಕರಣವುಳ್ಳವನಾದ, (೨೧ರ ಸಂಖ್ಯಾ ಸಾಂಕೇತ ಇಂದ್ರಿಯಗಳು ೧೦–ಭೂತಗಳು–೫ ತನ್ಮಾತ್ರೆಗಳು–೫–ಮನಸ್ಸು–೧ ಒಟ್ಟು ೨೧ ಎಂಬ ಸಾಂಕೇತಾರ್ಥ). **ಮೂಕರನು** = ಮಾತನಾಡುವದಕ್ಕೆ ಬಾರದವರನ್ನು, **ವಾಗ್ಮಿಗಳ ಮಾಳ್ಪ** = ಉತ್ತಮವಾಗಿ ಮಾತನಾಡುವಂತೆ ಮಾಡುತ್ತೀಯೇ. (ಮೂಕರು–ಅಜ್ಞಾನದಿಂದ ಭಗವನ್ಮಹಿಮಾ ತಿಳಿಯದವರು. ವಾಗ್ಮಿಗಳ–ಅವರ ಅಜ್ಞಾನ ಪರಿಹರಿಸಿ, ವಾಚಾ ಉಚ್ಚರಿಸುವಂತೆ ಮಾಡುವ ಮಹಾ ಸಮರ್ಥನೇ), **ಕೃಪಾ ಆಕರ ಈಶ** = ಶ್ರೀ ಪರಮಾತ್ಮನ ಕರುಣೆಯನ್ನು ಸಂಪಾದಿಸುವುದಕ್ಕೆ ಆಸ್ಪದನಾದವನೇ, (ಆಕರ) ಮಮ ಸ್ವಾಮಿಯೇ, (ಈಶ). (ದಯಾಳುಗಳಲ್ಲಿ ಶ್ರೇಷ್ಠನೇ). **ಕೃತ** = ಜ್ಞಾನ, ಭಕ್ತಿ,

ವೈರಾಗ್ಯಪೂರ್ವಕವಾಗಿ ಶ್ರೀ ಪರಮಾತ್ಮನನ್ನು ಸ್ತೋತ್ರ ಮಾಡುವ ಅಧಿಕಾರಿಗಳನ್ನು ರಕ್ಷಿಸುವ ವಿಷಯದಲ್ಲಿ, **ಜ್ಞ** = ಚೆನ್ನಾಗಿ ತಿಳಿದವನೇ, (ಶ್ರೀಹರಿಯ ವಿಷಯದಲ್ಲಿ ಕೃತಜ್ಞೇ-ಉಪಕಾರ ಸ್ಮರಣೆಯುಳ್ಳವನೇ) **ಕಾಮದ** = ಸಕಲ ವಿಘ್ನಪರಿಹಾರದ್ವಾರಾ ತನ್ನಭಕ್ತರಿಗೆ ಅವರ ಮನೋಭೀಷ್ಟಗಳನ್ನು ಸಲ್ಲಿಸುವವನೇ. (ಕಾಮ-ಇಚ್ಛೆ-ದ-ಕೊಡುವವನು). **ಕೈಹಿಡಿದು ಕಾಯೋ** = ನನ್ನ ಕರಗಳನ್ನು ಹಿಡಿದು ಸಂರಕ್ಷಿಸು. **ಲೇಖಕಾಗ್ರಣಿ** = ಶ್ರೀ ವೇದವ್ಯಾಸಕೃತ ಗ್ರಂಥಗಳನ್ನು ಬರೆದ ಶ್ರೇಷ್ಠನೇ, **ಮನ್ಮನದ** = ನನ್ನ ಮನಸ್ಸಿನಲ್ಲಿರುವ, **ದುರ್ವ್ಯಾಕುಲದ** = ಅಹಂರಮಮತಾದಿಗಳಿಂದ ಹುಟ್ಟುವ ದುಷ್ಟವಾದ ಆಲೋಚನೇ ದುಃಖಗಳನ್ನು ಮನಸ್ಸಿನ ದುಗುಡ, **ಪರಿಹರಿಸು** = ನಿವಾರಿಸು. **ದಯದಿ** = ದಯೆಯಿಂದ ನೋಡು. **ಪಿನಾಕಿಭಾರ್ಯಾ ತನುಜ** = ರುದ್ರದೇವರ ಪತ್ನಿಯಾದ ಶ್ರೀಪಾರ್ವತೀದೇವಿಯರ, **ಮೃದ್ಭವ** = ಶರೀರದಿಂದ ಉತ್ಪತ್ತಿಯಾದ ಮೃತ್ತಿಕಾದಿಂದ ಜನಿಸಿದವನೇ, **ನಿನ್ನ ಪ್ರಾರ್ಥಿಸುವೆ** = ನಿನ್ನನ್ನು ಬೇಡಿಕೊಳ್ಳುತ್ತೇನೆ. ಎನಗೆ <u>ಪರಾವಲಂಬನ</u> ನೀಡಿ ಉದ್ಧರಿಸೆಂದು. ॥ ೧೪ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ವಿಘ್ನೇಶ್ವರನ್ನ ಮನೋವ್ಯಾಕುಲವನ್ನು ಬಿಡಿಸು-ಎಂತ ಪ್ರಾರ್ಥಿಸುತಾರೆ. ಇಪ್ಪತ್ತೊಂದು ಕಡುಬುಗಳು ಅರ್ಪಣೆ ಮಾಡಿದಂತಾ, ತನ್ನ ಭಕ್ತರಲ್ಲಿ ಪರಮಾಂತಃಕರಣ ಮಾಡತಕ್ಕವ. ಇನ್ನೂ ದಶೇಂದ್ರಿಯಗಳು ಹತ್ತು, ಪಂಚಭೂತಗಳು ಐದು, ಪಂಚತನ್ಮಾತ್ರಗಳು ಐದು, ಮನಸ್ಸು ಒಂದು-ಅಂತು, ಇಪ್ಪತ್ತೊಂದು ಇವುಗಳನ್ನ ಮೋದದಿಂದ ದಾರಾದರೆ ಭಗವಂತಗೆ ಅರ್ಪಿಸುತಾರೋ, ಅಂಥಾವರಿಗೆ ಕೇವಲ ಪ್ರೀತಿವಿಷಯನಾದವನೇ, ಮಾತಾಡೋದಕ್ಕೆ ಬಾರದಂಥ ಮೂಕರನ್ನ ಮಾತಾಡೋದಕ್ಕೆ ಬರುವಂತೆ ಮಾಡತಕ್ಕವನೇ ಮತ್ತು ಅಜ್ಞಾನದಿಂದ ಭಗವನ್ಮಹಿಮಾ ಆಲೋಚನದ ಮೂಕತ್ವ ಹೊಂದಿದ ಮನೋಇಂದ್ರಿಯ ಉಳ್ಳವರ ಅಜ್ಞಾನ ಪರಿಹಾರ ಮಾಡಿ, ಭಗವನ್ಮಹಿಮಾ ಚಿಂತನ ಮನಸ್ಸಿಗೆ ತಂದುಕೊಟ್ಟು, ವಾಚ

ಉಚ್ಚರಿಸುವಂತೆ ಮಾಡತಕ್ಕವನೇ, ಸರ್ವೇಶನಾದ ಗುಣಪೂರ್ಣನಾದ ಪರಮಾತ್ಮನ ಕೃಪಾವನ್ನ ಅವಿಘ್ನವಾಗಿ ಸಂಪಾದಿಸೋದಕ್ಕೆ ಆಸ್ಪದ ನಾದವನೇ, ಸ್ವಾಮಿಯೇ, ತಾರತಮ್ಯ ಪಂಚಭೇದಪೂರ್ವಕವಾಗಿ ಹರಿಸರ್ವೋತ್ತಮನೆಂದು ತಿಳಿದು ಜ್ಞಾನ, ಭಕ್ತಿ ವೈರಾಗ್ಯಪೂರ್ವಕವಾಗಿ ಬಿಂಬ ರೂಪೀ ಪರಮಾತ್ಮನ್ನ ಮಾಡಲ್ಪಟ್ಟ ಸ್ತೋತ್ರವುಳ್ಳ ಅಧಿಕಾರಿಗಳ ರಕ್ಷಿಸೋ ವಿಷಯದಲ್ಲಿ ಚಂದಾಗಿ ತಿಳಿದವ. ಇಂತಹಾ ಭಗವದ್ಭಕ್ತರ ಭಗವತ್ಸೇವಾಕ್ಕೆ ವಿಘ್ನಗಳು ಬಾರದೇ ಇರಬೇಕೆಂದು ಮಾಡತಕ್ಕ ಕಾಮನಾ ದಾವದದೆ, ಅದರನ್ನ ಕೊಡತಕ್ಕವ. ಶ್ರೀ .ವೇದವ್ಯಾಸದೇವರಿಂದ ಕೃತಗ್ರಂಥಗಳ ಬರಿಯೋದರಲ್ಲಿ ಅತ್ಯಂತ ಶ್ರೇಷ್ಟನಾದವ, ಅತಿವೇಗದಿಂದ, ಬರೆದವ. ಇಂಥಾ ನೀನು ನನ್ನ ಮನಸ್ಸಿನಲ್ಲಿ ಇದ್ದಂಥಾ ಅಹಂಮಮತಾದಿಗಳಿಂದ ಪ್ರಯೋಜನರಹಿತವಾದ ದುಷ್ಟವಾದ ದುಃಖ ಹುಟ್ಟತಾ ಇರೋದಾಗಿ ಅದೆ. ಇಂಥ ದುಃಖಗಳನ್ನ ನಿವಾರಣ ಮಾಡೋವನಾಗು. ದಯದಿಂದ ನೀನು, ರುದ್ರದೇವರ ಪತ್ನಿಯಾದ ಪಾರ್ವತೀ ದೇವೇರ ದೇಹಗತ ಮೃತ್ತಿಕಾದಿಂದ ಉತ್ಪನ್ನನಾಗಿ, ಈ ಪಾರ್ವತೀದೇವೇರಿಗೆ ಪುತ್ರ–ಎಂತ ಕರಸಿದಿ. ಹೇ ವಿನಾಯಕನೇ ನಿನ್ನನ್ನು ಕುರಿತು ಪ್ರಾರ್ಥನಾ ಮಾಡುವೆ. ಇಷ್ಟಾರ್ಥಗಳ ಕೊಟ್ಟು ಕೈಹಿಡಿದು ಸಲಹೆಂದು ಪ್ರಾರ್ಥನ ಮಾಡಿದ್ದಾರೆಂದು ತಾತ್ಪರ್ಯ. ॥ ೧೪ ॥

**೨. ಭಾವಪ್ರಕಾಶಿಕೆ :**

ಗಣೇಶನ ಕಥೆಯಲ್ಲಿ–"ಅಥೈಕವಿಂಶತಿಂಗೃಹ್ಯಮೋದಕಾನ್ ಘೃತಪಾಚಿಕಾನ್ ಸ್ಥಾಪಯಿತ್ವಾ ಗಣಾಧ್ಯಕ್ಷ ಸಮೀಹೇ ಕುರುನಂದನ" ಎಂದು–ಹೇಳಿರುವರು. ಅದೇ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಏಕವಿಂಶತಿ ಮೋದಕಪ್ರಿಯನೆಂದರು. ಗಣೇಶನ ಪ್ರೀತಿಗೋಸ್ಕರ ೨೧ ಮೋದಕಗಳನ್ನು ಮಾಡಬೇಕೆಂದು ವಿಧಿ ಇರುವುದೇ ಇದರ ಕಾರಣವು. ಮೂಕರನ್ನು ವಾಚಾಳರನ್ನಾಗಿ ಮಾಡುವ ಕರುಣಾಸಮುದ್ರನೇ! ಎಲೈ ಪ್ರಭೋ! ಎಲೈ ಕೃತಜ್ಞ, ಒಂದು ಸಲ ಪೂಜಿಸಲು ಅದನ್ನು ಎಂದಿಗೂ

ಮರೆಯದಿರುವವನು. ಆದುದರಿಂದ, ಕೃತಜ್ಞನೆಂದು ಗಣಪತಿಯನ್ನು ಕೊಂಡಾಡಿದರು. ಭಕ್ತರ ಮನೋಭೀಷ್ಟವನ್ನು ಪೂರೈಸುವವನೇ! ನನ್ನ ಕೈಹಿಡಿದು ಉದ್ಧರಿಸು. ಲೇಖನಮಾಡುವವರಲ್ಲಿ ಅಗ್ರೇಸರನಾದವನೇ! ನನ್ನ ಮನಸ್ಸಿನಲ್ಲಿರುವ ವಿಷಯಸಂಬಂಧವಾದ ವ್ಯಾಕುಲವನ್ನು ಪರಿಹರಿಸು. ಪಾರ್ವತೀದೇವಿಯರ ಮೈಕೊಳೆ ಮಣ್ಣಿನಿಂದ ಉದ್ಭವಿಸಿ, ಪಾರ್ವತೀ ಮಗನೆಂದು ಹೆಸರು ಪಡೆದವನೆ! ನಿನ್ನನ್ನು ಪ್ರಾರ್ಥಿಸುವೆನು. ॥ ೧೪ ॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :

"ಏಕ"–ಇತಿ ॥ ಈಶ ಕೃತಂ ಸಂಕಲ್ಪಂ ಜಾನಾತೀತಿ ತಥೋಕ್ತಃ ॥ ೧೪ ॥

## ಕನ್ನಡಾರ್ಥ

ಈಶನಾದ ಶ್ರೀಹರಿಯು ಮಾಡಿದ ಸಂಕಲ್ಪವನ್ನು ತಿಳಿಯುವುದರಿಂದ, "ಕೃತಜ್ಞ"–ನೆಂದು ಗಣಪತಿಯನ್ನು ಹೇಳುವರು. ॥ ೧೪ ॥

## ಶ್ರೀಗುರುಹೃದಯಪ್ರಕಾಶಿಕೆ

ಏಕವಿಂಶತಿ ಎಂಬ ಇಪ್ಪತ್ತೊಂದು ಮೋದಕ ಭಕ್ಷ್ಯದಲ್ಲಿ ಪ್ರೀತಿವುಳ್ಳವನೇ, ಮೂಕರನ್ನು ಕೂಡಾ ವಾಗ್ಮಿಗಳೆಂಬ ಯುಕ್ತಿಸಮ್ಮತವಾಗಿ ಮಾತನಾಡುವವರನ್ನಾಗಿ ಮಾಡುವ, ಕೃಪಾಳುವಾದ ಸ್ವಾಮಿಯೇ, ಕೃತಜ್ಞನೆಂಬ ಉಪಕಾರವನ್ನು ಮರೆಯದವನೇ, ಇಷ್ಟಾರ್ಥಪ್ರದನೇ, ನನ್ನ ಕೈಹಿಡಿದು ರಕ್ಷಿಸು. ಲೇಖಕರೆಂಬ ಬರವಣಿಗೆ ಬಲ್ಲವರಿಗೆಲ್ಲಾ ಶ್ರೇಷ್ಠನೇ, ನನ್ನ ಮನಸ್ಸಿನ ದುರ್ವ್ಯಾಕುಲವೆಂಬ ಖೇದವನ್ನು ದಯದಿಂದ ಪರಿಹರಿಸು. ಪಿನಾಕಿಯೆಂಬ ರುದ್ರನ ಪತ್ನಿಯಾದ ಪಾರ್ವತಿಯ ಶರೀರದ ಮಣ್ಣಿನಿಂದ ಹುಟ್ಟಿದವನೇ, ನಿನಗೋಸ್ಕರ ಪ್ರಾರ್ಥಿಸುವೆನು. ॥ ೧೪ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **ಏಕವಿಂಶತಿ**–ಇಪ್ಪತ್ತೊಂದು ಸಂಖ್ಯಾಕವಾದ, **ಮೋದಕ**–ಸಿಹಿಕಡುಬುಗಳು. **ಪ್ರಿಯ**–ಅದರಲ್ಲಿ ಪ್ರೀತಿಯುಳ್ಳವನೇ.

ಶ್ರೀವಿಘ್ನೇಶ್ವರನ ಪೂಜಾಕಾಲದಲ್ಲಿ ೨೧ ಪುಷ್ಪಗಳನ್ನೂ, ೨೧ ಗರಿಕೆಯನ್ನೂ ಮತ್ತು ೨೧ ಮೋದಕಗಳನ್ನೂ ಉಪಯೋಗಿಸಬೇಕೆಂದು ವಿಧಿ ಇದೆ.

ಇದರ ಸಾಂಕೇತಾರ್ಥ ಹೀಗಿದೆ–

(೧) ದೇಹಗತ ಇಂದ್ರಿಯಗಳು ೧೦. ಪಂಚಭೂತಗಳು ೫. ತನ್ಮಾತ್ರಾಪಂಚಕ ೫. ಮನಸ್ಸು ೧. ಹೀಗೆ, ೨೧ ಸಂಖ್ಯಾಕವಾದ ಅಧಿಷ್ಠಾನಗಳಲ್ಲಿ ವಿದ್ಯಮಾನನಾಗಿರುವ ವಿಶ್ವಂಭರಮೂರ್ತಿಯನ್ನು ಉಪಾಸಿಸುತ್ತಿರುವನು ಶ್ರೀಗಣನಾಯಕನು. ಈ ರೀತಿ ಅರ್ಪಣಾರೂಪವಾದ ಜ್ಞಾನಾನುಸಂಧಾನ.

(೨) ಶ್ರೀಆಚಾರ್ಯ ಮಧ್ವರು. ೨೧ ಕುಭಾಷ್ಯಗಳನ್ನು ಖಂಡಿಸಿ, ತದ್ದ್ವಾರಾ, ತತ್ತ್ವವಾದವೆಂಬ ಶ್ರೀಹರಿವಾಯುಗಳಿಗೆ ಅತ್ಯಂತ ಪ್ರೀತ್ಯಾಸ್ಪದವಾದ ದರ್ಶನಮಾರ್ಗವನ್ನು ತೋರಿಸಿದ ತ್ರೈಲೋಕ್ಯಾಚಾರ್ಯರು. ಸಿದ್ಧಿಪ್ರದನಾದ, ವಿದ್ಯಾದಾಯಕನಾದ ಶ್ರೀವಿಘ್ನೇಶ್ವರನನ್ನು ಪೂಜಾಪ್ರಾರಂಭದಲ್ಲಿ, ಶಾಸ್ತ್ರಾರಂಭ ಕಾಲದಲ್ಲಿ, ಪೂರ್ವೋಕ್ತ ೨೧ ಕುಭಾಷ್ಯಗಳಲ್ಲಿ ನನ್ನ ಮನಸ್ಸನ್ನು ದೂರವಿರಿಸಿ, (ಆ ಶಾಸ್ತ್ರಗಳೆಲ್ಲವೂ ಸತ್ಸಾಧನೆಗೆ–ಅಂದರೆ, ಶ್ರೀಹರಿಯ ಅನುಗ್ರಹಪ್ರಾಪ್ತಿಗೆ ವಿಘ್ನರೂಪದಲ್ಲಿರುವ ಕಂಟಕಗಳು) ಶ್ರೀಮನ್ಮಧ್ವದರ್ಶನದಲ್ಲಿ ನನ್ನ ಮನಸ್ಸೂ, ಬುದ್ಧಿ, ಇಂದ್ರಿಯಗಳನ್ನು ಅನುಗೊಳಿಸೆಂದು ಸಾಂಕೇತಾರ್ಥ.

೨. **ಮೂಕರನು**–ಮಾತನಾಡಲು ಬಾರದಿರುವನು. **ವಾಗ್ಮಿಗಳ**–ಉತ್ತಮ ವಾಚಾಳಿಯನ್ನಾಗಿ ಮಾಡುವೆ.

ಪ್ರತಿಜೀವರ ನಾಭೀದೇಶಗತ ಆಕಾಶತತ್ತ್ವಕ್ಕೆ ಗಣಪತಿಯು ಅಭಿಮಾನಿಯು. ನಾಭೀಗತ ಪ್ರದೇಶವೇ ಅವನ ಮಂದಿರವು. ನಮ್ಮ ಶರೀರದಲ್ಲಿ ಉತ್ಪತ್ತಿಯಾಗುವ ಸರ್ವಶಬ್ದಗಳೂ ಕಂಪನರೂಪದಲ್ಲಿ ನಾಭೀಕೇಂದ್ರದಿಂದಲೇ ಉತ್ಪತ್ತಿಯಾಗುವುವು. ಶಬ್ದವು ಆಕಾಶತತ್ತ್ವದ ಗುಣವು. ಶ್ರೀಗಣನಾಥನನು ಶಬ್ದಗುಣಗ್ರಾಹಕನು. ಮೂಕರನ್ನೂ ವಾಗ್ಮಿಗಳಾಗಿ ಮಾಡುವ ಸಾಮರ್ಥ್ಯಶಕ್ತಿ ವಿಶ್ವಂಭರನ ಅನುಗ್ರಹದಿಂದ ವಿಘ್ನೇಶ್ವರನಿಗಿದೆ.

ಸಚ್ಛಾಸ್ತ್ರಗಳ ರಹಸ್ಯವನ್ನು ಅರಿಯದ ಅಜ್ಞಾನಿಗಳು ಮೂಕರು. ಶ್ರೀ ಗಣೇಶನ ಅನುಗ್ರಹದಿಂದ ಆ ಪ್ರತಿಬಂಧಕ ರೂಪವಾದ ಅಜ್ಞಾನವು ಪರಿಹಾರವಾಗಿ, ಶಾಸ್ತ್ರಪಠಣ-ಪ್ರವಚನಗಳಲ್ಲಿ ಪ್ರಾವೀಣ್ಯವನ್ನು ನೀಡುತ್ತಾನೆ. ಯುಕ್ತಿಸಮ್ಮತವಾಗಿ ಮಾತನಾಡುವ ಶಕ್ತಿಪ್ರದನು.

೩. ತನ್ನ ಭಕ್ತರ ವಿಷಯದಲ್ಲಿ ಪರಮಕರುಣಾಳು. ಅವರ ಇಷ್ಟಾರ್ಥ ಸಿದ್ಧಿದಾಯಕನು. ಇದರಿಂದ, **ಕೃಪಾಕರೇಶನು** (ಕೃಪಾಮಾಡುವುದರಲ್ಲಿ ಶ್ರೇಷ್ಠನು).

೫. ಗಣಪತಿಯನ್ನು ಪೂಜಿಸುವವರನ್ನು ಅವನು ಎಂದೆಂದಿಗೂ ಕೈಬಿಡನು. ಪರಾವಲಂಬನ ನೀಡಿ, ಉದ್ಧರಿಸುವ ಉಪಕಾರವನ್ನು ಮರೆಯದವನಾದ್ದರಿಂದ-**ಕೃತಜ್ಞನು**.

೬. ಸ್ವಭಕ್ತರ ಸರ್ವಾಭೀಷ್ಟಗಳನ್ನು ಪೂರೈಸುವುದರಿಂದ-**ಕಾಮದನು**. ಕಾಮ-ಮನಸ್ಸಿನ ಅಭಿಲಾಷೆಗಳು. ದ-ಕೊಡುವವನು. ವಿಘ್ನಗಳು ಪುಣ್ಯ ಕಾರ್ಯಗಳಿಗೆ ಪ್ರತಿಬಂಧಕರೂಪದಲ್ಲಿರುವುವು. ಸರ್ವವಿಘ್ನ ಪರಿಹಾರಕ ನಾದ ವಿಶ್ವಂಬರೋಪಾಸಕನು ಅಂತಹ ವಿಘ್ನಗಳನ್ನು ಪರಿಹಾರ ಮಾಡಿ, ಭಕ್ತರ ಪುಣ್ಯಕಾರ್ಯಗಳಲ್ಲಿ ಮಾರ್ಗದರ್ಶನ ಮಾಡಿಸುವವನು. ಇದರಿಂದ-"ಕಾಮದನು."

೭. **ಲೇಖಕ**-ಗ್ರಂಥಗಳನ್ನು ಬರೆಯುವವನು. ಅಗ್ರಣಿ-ಅತ್ಯಂತ ಶ್ರೇಷ್ಠನು. ಶ್ರೀವೇದವ್ಯಾಸರ ಆದೇಶವನ್ನು ಶಿರಸಾವಹಿಸಿ, ಪಂಚವೇದ ವೆಂದು ಪ್ರಖ್ಯಾತವಾದ ಸರ್ವಶಾಸ್ತ್ರ ನಿರ್ಣಾಯಕವಾದ **ಶ್ರೀಮನ್ಮಹಾಭಾರತ**-ಇತಿಹಾಸ ಪ್ರಸ್ಥಾನಗತ ಉದ್ಗ್ರಂಥವನ್ನು ನಿರಾಯಾಸ **ವಾಗಿ** ಬರೆದು ಮುಗಿಸಿ, ಶ್ರೀಬಾದರಾಯಣರ ಅನುಗ್ರಹಕ್ಕೆ ಪಾತ್ರನಾದ **ಲೇಖಕಾಗ್ರಣಿ** ಶ್ರೀ ವಿನಾಯಕನು.

೮. **ಮನಸ್ಸಿನಲ್ಲಿರುವ** ದುಷ್ಟವಿಷಯಗಳಿಂದ ದುಃಖಪ್ರಾಪ್ತಿ. ಈ ದುಃಖದಿಂದ ಮನಸ್ಸು ದುಗುಡ ಹೊಂದುವುದು. ಮನಸ್ಸಿನ ಈ ಪರಿಸ್ಥಿತಿಗೆ **ಮನೋವ್ಯಾಕುಲ**-ವೆಂದಿದ್ದಾರೆ.

ಪರಮದಯಾಳುವಾದ ಶಂಕರಾತ್ಮಜನು. ನಮ್ಮ ಮನೋಗತ ದುಷ್ಟ ವಿಷಯಗಳನ್ನು ದೂರಮಾಡಿ, ತಜ್ಜನಿತ ದುಃಖವನ್ನು ಪರಿಹರಿಸಿ, ಮನಸ್ಸಿನ ವ್ಯಾಕುಲವನ್ನು ದುರ್ವ್ಯಾಪಾರಗಳನ್ನು ಕಳೆಯುವನು.

೮. ಪಿನಾಕಿ–ಎಂಬ ಧನುಸ್ಸನ್ನು ಶ್ರೀ ರುದ್ರದೇವರು ಧರಿಸಿದ್ದಾರೆ. ಈ ಕಾರಣದಿಂದ, ಮಹರುದ್ರದೇವರಿಗೆ **ಪಿನಾಕಿ**–ಎಂತ ನಾಮ. ಪಿನಾಕಿ ನಾಮಕರಾದ ಶ್ರೀರುದ್ರದೇವರ ಭಾರ್ಯಾ–ಅಂದರೆ, ಪತ್ನಿಯು ಶ್ರೀಪಾರ್ವತೀದೇವಿ. ಪಾರ್ವತೀತನಯನಾದ್ದರಿಂದ, (ಮೃದ್ಭವ) ಗಣೇಶನನ್ನು **ಪಿನಾಕಿಭಾರ್ಯಾತನುಜ**–ನೆಂದಿದ್ದಾರೆ. ಇಲ್ಲಿ ಶಬ್ದಪ್ರಯೋಗದ ಚಮತ್ಕಾರ ಗಮನಿಸಬೇಕು. ಗಣೇಶನು ಶಂಕರಾತ್ಮಜನು. ಪಾರ್ವತೀ ತನಯನು. ಇದರಿಂದ, ತಾರತಮ್ಯಕ್ರಮವನ್ನು ದಾಸಾರ್ಯರು ಹೀಗೆ ನಿರೂಪಿಸಿದ್ದಾರೆ–ಎಂದು ತಿಳಿಯಬಹುದು. (ರುದ್ರದೇವರು–ಪಾರ್ವತೀ–ವಿಘ್ನೇಶ್ವರ).

೯. ಪಾರ್ವತೀ ದೇವಿಯರು ಅಭ್ಯಂಜನ ಸಮಯದಲ್ಲಿ, ದ್ವಾರವನ್ನು ಕಾಯುವಂತೆ, ತನ್ನ ಶರೀರದ ಕೊಳೆ (ಮೃತ್) ಯಿಂದ ಒಂದು ಶಿಶುವನ್ನು ರೂಪಿಸಿದಳು–ಎಂದು ಪುರಾಣ ಪ್ರಸಿದ್ಧ ಪ್ರಸಂಗ. ದೇವತೆಗಳ ಶರೀರವು ವೈಕಾರಿಕ ಅಹಂಕಾರದಿಂದ ನಿರ್ಮಾಣವಾಗಿದೆ. ಅವರ ದೇಹದಲ್ಲಿ ಕೊಳೆಯ ಪ್ರಸಕ್ತಿಯೇ ಇಲ್ಲ. (ಪಾಂಚಭೌತಿಕ ಶರೀರವಾದರೆ, ಕೊಳೆ ಉಂಟು). ಇಲ್ಲಿ ಶ್ರೀ ಪಾರ್ವತೀದೇವಿಯು ತನ್ನ ಶರೀರದಿಂದ ಮೃದ್‌ರೂಪವಾದ ಕೊಳೆಯನ್ನು ಉತ್ಪತ್ತಿ ಮಾಡಿ, ತದ್ವಾರಾ ಗಣೇಶನನ್ನು ಉತ್ಪತ್ತಿ ಮಾಡಿದಳು. ಇದರಿಂದ **ಮೃದ್ಭವನು**.

೧೦. ಹೇ ಮೃದ್ಭವ, ಪಿನಾಕಿ ಭಾರ್ಯಾಪುತ್ರ, ನನ್ನ ಕೈಪಿಡಿದು, ಉದ್ಧರಿಸೆಂದು ನಿನ್ನನ್ನು ಪ್ರಾರ್ಥಿಸುವೆನೆಂದು ದಾಸಾರ್ಯರು ತಿಳಿಸಿದ್ದಾರೆ. ॥ ೧೪ ॥

## ಪದ್ಯ–೧೫

**ಮೂಲ :**

**ನಿತ್ಯ ಮಂಗಳ ಚರಿತ ಜಗದು ।**
**ತ್ಪತ್ತಿಸ್ಥಿತಿ ಲಯ ನಿಯಮನ ಜ್ಞಾ ।**
**ನತ್ರಯಪದ ಬಂಧಮೋಚಕ ಸುಮನಸಾಸುರರ ॥**
**ಚಿತ್ತವೃತ್ತಿಗಳಂತೆ ನಡೆವ ಪ್ರ ।**
**ಮತ್ತನಲ್ಲ ಸುಹೃಜ್ಜನಾಪ್ತನ ।**
**ನಿತ್ಯದಲಿ ನೆನೆನೆನೆದು ಸುಖಿಸುವ ಭಾಗ್ಯ ಕರುಣಿಪುದು ॥ ೧೫ ॥**

**ಅವತರಣಿಕೆ :**

ನಿರಂತರವೂ ಶ್ರೀಪರಮಾತ್ಮನನ್ನು ಸ್ಮರಿಸುವ ಭಾಗ್ಯವನ್ನು ನೀಡೆಂದು ಪ್ರಾರ್ಥಿಸುತ್ತಾರೆ. ॥ ೧೫ ॥

**ಪ್ರತಿಪದಾರ್ಥ :**

**ನಿತ್ಯ** = ಅನಾದ್ಯನಂತ ಕಾಲದಿಂದಲೂ ಶಾಶ್ವತ ರೂಪನಾಗಿರುವ, **ಮಂಗಳಚರಿತ** = ಪರಮಮಂಗಲ ಸ್ವರೂಪನಾದ, **ಜಗದ** = ಜಗತ್ತಿನ **ಉತ್ಪತ್ತಿ** = ಸೃಷ್ಟಿಕಾರ್ಯ, **ಸ್ಥಿತಿ** = ಪಾಲನಕಾರ್ಯ, **ಲಯ** = ಸಂಹಾರಕಾರ್ಯ, **ನಿಯಮನ** = ತನ್ನಿಂದ ಸೃಷ್ಟವಾದ ಚರಾಚರಾತ್ಮಕವಾದ ಜಗತ್ತನ್ನು ನಿಯಮನ ಮಾಡುವ ಕಾರ್ಯ, **ಜ್ಞಾನ** = ಜೀವರ ಯೋಗ್ಯತಾನುಸಾರ ಜ್ಞಾನ, **ತ್ರಯಪದ** = ದೈತ್ಯರಿಗೆ ಅಜ್ಞಾನ, ಜೀವರನ್ನು ಕರ್ಮದಿಂದ ಬಂಧಿಸುವ ಕಾರ್ಯ (ಬಂಧನ) ಅವರಸ್ವರೂಪ ಯೋಗ್ಯತಾನುಸಾರ ಗತಿ ಇವುಗಳನ್ನು ಕೊಡುವ, **ಬಂಧಮೋಚಕ** = ಸೃಷ್ಟಿಕಾಲದಲ್ಲಿ ಲಿಂಗದೇಹವನ್ನು ಸ್ವರೂಪದೇಹಕ್ಕೆ ಉಪಚಯ ಮಾಡಿಸಿ, ತದ್ವಾರಾ, ಜೀವರಿಗೆ ಕರ್ಮಬಂಧಕನಾಗಿ, ಬ್ರಹ್ಮ ಪ್ರಳಯಾಂತದಲ್ಲಿ ಲಿಂಗಭಂಗದ್ವಾರಾ, ಕರ್ಮವಿಮೋಚನ ಗೈಸಿ, ಜೀವರ ಸ್ವಸ್ವರೂಪಾಗತ ಆನಂದದ ಆವಿರ್ಭಾವರೂಪವಾದ ನಿತ್ಯವಾದ ಮುಕ್ತಿಸುಖ ವನ್ನು ಕೊಡುವ ಶ್ರೀಪರಮಾತ್ಮನು, **ಸುಮನಸರ** = ದೇವತೆಗಳು, ಅಸುರರ

= ದೈತ್ಯರ, **ಚಿತ್ತವೃತ್ತಿಗಳಂತೆ** = ಅವರ ಮನೋಭೀಷ್ಟನುಸಾರ, **ನಡೆವ** = ಪ್ರವರ್ತಿಸುವವನು, **ಪ್ರಮತ್ತನಲ್ಲ** = ತನ್ನ ಇಚ್ಛಾನುಸಾರ ನಡೆವ ದುರ್ಪ್ರವತ್ತಿ ಇಲ್ಲದವನು. **ಸ್ವಕೃತ್ ಜನಾಪ್ತನ** = ಸಮೀಚೀನವಾದ ಜ್ಞಾನವಂತರಾದ ಭಗವದ್ಭಕ್ತರಿಗೆ ಪರಮಪ್ರಿಯನಾದ ಶ್ರೀ ಪರಮಾತ್ಮನ, **ನಿತ್ಯದಲಿ** = ಪ್ರತಿದಿವಸದಲ್ಲೂ, **ನೆನೆನೆದು** = ಬಾರಿಬಾರಿಗೂ ಸ್ಮರಿಸುವ, **ಸುಖಿಸುವ ಭಾಗ್ಯ** = ಆನಂದಿಸುವ ಸಂಪತ್ತನ್ನು, **ಕರುಣಿಪುದು** = ಅನುಗ್ರಹಿಸುವವನಾಗು. ॥ ೧೫ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ್ನ ಸ್ತುತಿಸುವಂಥಾ ಭಾಗ್ಯವನ್ನು ಕೊಡು ಎಂತ ಪ್ರಾರ್ಥಿಸತಾರೆ.

ಶ್ರೀಪರಮಾತ್ಮ ಎಂತಾವನೆಂದರೆ – ಅನಾದ್ಯನಂತಕಾಲಕ್ಕೂ ಅನಂತಾನಂತ ಬ್ರಹ್ಮಾಂಡಗಳು ಉತ್ಪತ್ತಿ ನಾಶವಾದ ಕಾಲಕ್ಕೂ, ನಿತ್ಯನಾಗಿ ಸದೃಶರಹಿತನಾಗಿ ಒಬ್ಬನಾಗಿ ಇರತಕ್ಕವ. ತದ್ವತ್, ರಮಾದೇವೇರು ಈಶಾಧೀನರಾಗಿ ಇರತಕ್ಕವರು. ಬ್ರಹ್ಮಾದಿ ಜೀವರು ಪ್ರತಿ ಪ್ರತಿಕಲ್ಪಕ್ಕೂ ಬ್ಯಾರೆ ಬ್ಯಾರೆ. ಇಂಥಾ ನಿತ್ಯನಾದವ. ಇನ್ನೂ ಮಂಗಳಸ್ವರೂಪರಾದ ಭಗವದ್ಭಕ್ತರಿಗಾಗಿ ಅವತಾರ ಮಾಡಿ, ಭಗವದ್ವೇಷಿಗಳಾದ ದೈತ್ಯರ ಸಂಹಾರ ರೂಪವಾದ ಚರಿತ್ರೆಗಳುಳ್ಳವ. ಪ್ರಾಣಿಗಳ ಸೃಷ್ಟಿ, ಪಾಲನಿ, ಸಂಹಾರ ಯೋಗ್ಯತಾನುಸಾರ ಪ್ರೇರಣಾ, ಯೋಗ್ಯತಾನುಸಾರ ಜ್ಞಾನ, ಭಕ್ತರಿಗೆ ಜ್ಞಾನ ಭಕ್ತಿ, ವೈರಾಗ್ಯ, ಇನ್ನೂ ವೈಕುಂಠಾದಿ ಸ್ಥಾನಗಳ ಕೊಡತಕ್ಕವ. ದೈತ್ಯರಿಗೆ ಅಜ್ಞಾನ, ಅಭಕ್ತಿ, ಅವೈರಾಗ್ಯ–ಅವರವರ ಯೋಗ್ಯತಾನುಸಾರ ಸ್ಥಾನಗಳ, ಕೊಡತಕ್ಕವ. ಅಸಂಬಂಧವಾಗಿರುವ ಲಿಂಗದೇಹವನ್ನ ಸೃಷ್ಟಿಕಾಲದಲ್ಲಿ ಸ್ವರೂಪಕ್ಕೆ ಗುಣವೈಷಮ್ಯದಿಂದ ಬಂಧನ ಮಾಡತಕ್ಕವ. ಇಂಥಾ ಲಿಂಗದೇಹ ವನ್ನು ಬ್ರಹ್ಮಪ್ರಳಯವ ಅಂತ್ಯಕ್ಕೆ ನಾಶನರೂಪವಾದ ಪರಿಹಾರ ಮಾಡತಕ್ಕವ. ಇಂಥಾ ಶ್ರೀಪರಮಾತ್ಮನೇನು, ಇಂಥಾ ಪರಮಾತ್ಮನ ಭಕ್ತರಾದ ದೇವತೆಗಳೇನು–ಇವರ ಮನೋ ಇಷ್ಟಾನುಸಾರವಾಗಿ

ಪ್ರೇರಣಾದಿ ರೂಪಗಳಿಂದ ಸಂಚಾರಮಾಡತಕ್ಕವ. ಇನ್ನೂ ಸ್ವೋತ್ತಮರಾದ ದೇವತೆಗಳ ಆಜ್ಞಾದಂತೆ ಪ್ರವರ್ತಿಸುವಂಥಾವನು. ದೈತ್ಯರು ಇಚ್ಛಾನುಸಾರಪ್ರವರ್ತಿಸತಕ್ಕವನಲ್ಲದವನು. ಈ ಪ್ರಕಾರ ಇರತಕ್ಕವನು ಎಂದು ಅರ್ಥ. ಇನ್ನು ಪ್ರಕರ್ಷೇಣ ಉತ್ತಮರಲ್ಲದ,ಸಮೀಚೀನವಾದ ಜ್ಞಾನಗಳು ಇರತಕ್ಕ ಭಗವದ್ಭಕ್ತರಿಗೆ ಆಪ್ತನಾದ ಶ್ರೀಪರಮಾತ್ಮನ ಪ್ರತಿದಿನದಲ್ಲೂ ಬಾರಿಬಾರಿಗೂ ಸ್ಮರಣೆ ಮಾಡಿ ಸುಖಪಡುವ ಐಶ್ವರ್ಯ ವನ್ನ ಕೊಡೋವನಾಗು–ಎಂತ ಪ್ರಾರ್ಥನಾ ಮಾಡೋವರಾಗಿದ್ದಾರೆಂದು ತಾತ್ಪರ್ಯ. ॥ ೧೫ ॥

**ಭಾವಪ್ರಕಾಶಿಕೆ :**

ಶ್ರೀಪರಮಾತ್ಮನನ್ನು ಸರ್ವದಾ ಸ್ಮರಿಸಿ ಸ್ಮರಿಸಿ, ಆನಂದಪಡುವುದೇ ಮಹಾಭಾಗ್ಯವು. ಅಂತಹಾ ಭಾಗ್ಯವು ನನಗೆ ಯಾವಾಗಲೂ ಇರುವಂತೆ ಅನುಗ್ರಹಮಾಡೆಂದು ಈ ಪದ್ಯದಿಂದ ಬೇಡುತ್ತಾರೆ. ಆ ಪರಮಾತ್ಮನು ಎಂತಹವನೆಂದರೆ, ಶಬ್ದದೇಹಕ ಪ್ರಕಾರವಾದ ವೇದಗಳಿಂದ ಹೊಗಳಿಸಿಕೊಳ್ಳಲ್ಪಡುವ ಮಂಗಳಕರವಾದ ಚರಿತ್ರೆಗಳುಳ್ಳವನು ಮತ್ತು ಜಗತ್ತಿಗೆ–"ಉತ್ಪತ್ತಿ ಸ್ಥಿತಿ ಸಂಹಾರಾನಿಯತಿ ಜ್ಞಾನಸಮಾವೃತಿಃ ಬಂಧ ಮೋಕ್ಷೌ ಚಪುರುಷಾದ್ಯಸ್ಮಾತ್ಸಹರಿರೇಕರಾಟ್ ॥" – ಎಂಬ ಬ್ರಹ್ಮಸೂತ್ರ ಭಾಷ್ಯದ ವಾಕ್ಯದಂತೆ ಸೃಷ್ಟ್ಯಾದಿ ಅಷ್ಟಕರ್ತೃತ್ವಉಳ್ಳವನು. ದೇವದೈತ್ಯರ ಯೋಗ್ಯತೆಗಳನ್ನರಿತು, "ಬುದ್ಧಿಃ ಕರ್ಮಾಣಿ ಸಾರಿಣೀ"–ಎಂಬ ರೀತಿಯಾಗಿ, ಅವರವರ ಕರ್ಮಾನುಸಾರವಾಗಿ ಭಗವಂತನಿಂದ ದತ್ತವಾದ ಕಿಂಚಿತ್ಸ್ವಾತಂತ್ರ್ಯದಿಂದಲೂ, ಆಯಾಕಾಲದಲ್ಲಿ ಉಂಟಾಗುವ ಭಗವತ್ಪ್ರೇರಣೆಯಿಂದಲೂ, ಅವರವರ ಚಿತ್ತವೃತ್ತಿಗಳು ಬದಲಾಯಿಸು ತ್ತಿರುವಂತೆ, ಪರಮಾತ್ಮನೂ ಅವರವರೊಳಗಿದ್ದು ಆ ಚಿತ್ತವೃತ್ತಿಗಳನ್ನು ಅನುಸರಿಸಿಯೇ ಕರ್ಮಗಳನ್ನು ಮಾಡಿಸಿ, ದೇವತೆಗಳಿಗೆ ಮುಕ್ತಿ, ದೈತ್ಯರಿಗೆ ತಮಸ್ಸನ್ನು ಕೊಡುವನೆಂಬ ಭಾವ. ಕರ್ಮಾನುಸಾರ ಬುದ್ಧಿಯನ್ನು ಪ್ರೇರಿಸುವ ವಿಷಯದಲ್ಲಾಗಲೀ, ಅವರವರ ಯೋಗ್ಯತಾನುಸಾರ ಕರ್ಮಗಳನ್ನು

ಮಾಡಿಸುವ ವಿಷಯದಲ್ಲಾಗಲೀ, ಫಲಗಳನ್ನು ಕೊಡುವ ವಿಷಯದಲ್ಲಾಗಲೀ, ಪ್ರಮತ್ತರಿಗಲ್ಲ–ಅಂದರೆ, ಬಹುಜಾಗರೂಕತನಾಗಿರುವನೆಂಬ ಭಾವ. ಭಕ್ತಜನರಿಗೆ ಪರಮಾಪ್ತನೆಂದೆನಿಸುವನು. ಇಂತಹಾ ಪರಮಾತ್ಮನ ಸ್ಮರಣೆಯಿಂದ ಆನಂದಪಡುವಂತೆ ಮಾಡೆಂದರ್ಥ. ॥ ೧೫ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :**

"ನಿತ್ಯ"–ಇತಿ ॥ ಅಜ್ಞಾನಂ ಅನ್ಯಥಾ ಜ್ಞಾನಂ ಸಜ್ಞಾನಂ ಇತಿ ತ್ರಯಮ್–॥ "ಚಿತ್ತ" ಇತಿ ॥ ತಥಾತಥೇಷ್ವತ್ವಾತ್ । "ನಲ್ಲ"–ಹೇತು ಗರ್ಭಮ್ ಸುಹೃದೇತ್ಯತ್ರ. ॥ ೧೫ ॥

## ಕನ್ನಡಾರ್ಥ

ಜ್ಞಾನತ್ರಯಗಳೆಂದರೆ, ಅಜ್ಞಾನ (ಸಂಶಯಾತ್ಮಕಜ್ಞಾನ), ಮಿಥ್ಯಾ ಜ್ಞಾನ (ಅವಿದ್ಯಮಾನ ಧರ್ಮಗಳನ್ನು ವಿದ್ಯಮಾನವೆಂದು ತಿಳಿಸುವ ಜ್ಞಾನ) "ಸಜ್ಞಾನ"–ಯಥಾಸ್ಥಿತವಾಗಿ ವಿಷಯಗಳನ್ನು ವಿಷಯೀಕರಿಸುವ ಜ್ಞಾನ. ಹೀಗೆ ಮೂರು ಜ್ಞಾನಗಳೆಂದು ತಿಳಿಯಬೇಕು. "ಚಿತ್ತವೃತ್ತಿಗಳಂತೆ"–ಮನಬಂದಂತೆ "ಗಣಪತಿ"ಯು, "ಸುಹೃತ್"–ಎಂಬ ವಿಶೇಷಣಕ್ಕೆ ಕಾರಣ ವನ್ನು ತೋರಿಸುವ ವಿಶೇಷಣ "ಪ್ರಮತ್ತನಲ್ಲ" ಎಂಬುದು. ॥ ೧೫ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ನಿತ್ಯಮಂಗಳಚರಿತ್ರನಾದ ಜಗತ್ತಿಗೆ ಉತ್ಪತ್ತಿ ಸ್ಥಿತಿ ಲಯವೆಂಬ ಮೂರನ್ನು ನಿಯಮನ ಜ್ಞಾನಾಜ್ಞಾನವೆಂಬ ಮೂರನ್ನು ಬಂಧ ಮೋಕ್ಷವನ್ನು ಕೊಡುತ್ತಿರವ, ಸುಮನಸರೆಂಬ ದೇವತೆಗಳ, ಅಸುರರೆಂಬ ಅಸಜ್ಜನರ ಚಿತ್ತವೃತ್ತಿ–ಎಂಬ ಮನೋವ್ಯಾಪಾರದಂತೆ ನಡೆಯದೆ, ಸ್ವತಂತ್ರನಾದ ಜಾಗರೂಕನಾದ ಸುಹೃತ್ತೆಂಬ ಸ್ವಾಭಾವಿಕ ಪ್ರೀತಿವುಳ್ಳವರಿಗೆ ಆಪ್ತನಾದ ಶ್ರೀಹರಿಯನ್ನು ಸದಾ ಸ್ಮರಿಸಿ, ಸಂತೋಷಪಡುವ ಭಾಗ್ಯವನ್ನೇ ನನಗೆ ಕೊಡು. ॥ ೧೫ ॥

## ಸರ್ವವ್ಯಾಖ್ಯಾನುಸಾರ ಸಂಗ್ರಹ

೧. ಶ್ರೀಪರಮಾತ್ಮನು ಆದಿಮಧ್ಯಾಂತರ ರಹಿತನು. ಶಾಶ್ವತ ರೂಪಿಯು. ಚತುರ್ವಿಧನಾಶರಹಿತನು. ಅನಾದ್ಯನಂತಕಾಲದಿಂದಲೂ ಶಸ್ತ್ರದೇಕ ಪ್ರಹಾರನಾಗಿರುವುದರಿಂದ-**ವಿಶ್ವನು.**

೨. ನಿತ್ಯನೂ, ಶಾಶ್ವತನೂ ಆದ ಆ ನಿರಂಜನನು ಶುಭಪ್ರದವಾದ ಚರಿತ್ರೆ ಉಳ್ಳವನು. ಶುಭಗುಣ ಗಣನಿಲಯನು ಮತ್ತು ಚಾರಿತ್ರ್ಯಯುಕ್ತನು. ಇದರಿಂದ, **ಮಂಗಳಚರಿತನು.**

೩. ನಿತ್ಯನೂ, ಮಂಗಳಚರಿತನೂ ಆದ ಆ ಮಂಗಳಾಂಗನು ಈ ಜಗತ್ತಿನ ಉತ್ಪತ್ತಿ (ಸೃಷ್ಟಿ) ಪಾಲನೆ (ಸ್ಥಿತಿ),ಸಂಹಾರ (ಲಯ), ತನ್ನಿಂದ ಸೃಷ್ಟವಾದ ಸಮಗ್ರ ಜಗತ್ತಿನ ನಿಯಮನ ಕಾರ್ಯ (ವಸ್ತುಗತ ಯಥಾಸ್ಥಿತಿ ರೂಪ),ತನ್ನ ಭಕ್ತರಾದವರಿಗೆ ಸಮೀಚೀನವಾದ ಜ್ಞಾನಪ್ರದನು (ಜ್ಞಾನ). ತನ್ನನ್ನೂ ಮತ್ತು ತನ್ನ ಭಕ್ತರನ್ನೂ ದ್ವೇಷಿಸುವ ತಮೋಯೋಗ್ಯ ಜೀವರಿಗೆ ಮೋಹರೂಪವಾದ ಅಜ್ಞಾನಪ್ರದನು (ಅಜ್ಞಾನ). ಸೃಷ್ಟಿಕಾಲದ ಪ್ರಾರಂಭ ದಲ್ಲಿ ನಿತ್ಯಶಾಶ್ವತರಾದ ಜೀವರ ಸ್ವರೂಪದೇಹಕ್ಕೆ ಕರ್ಮಾನುಭವಕ್ಕಾಗಿ (ಕ್ರೀಡೆಗಾಗಿ) ಲಿಂಗದೇಹದ ಉಪಚಯದ್ವಾರಾ,ಸಂಸಾರಬಂಧನಕಾರ್ಯ-ಆ ಕರ್ಮಪರಂಪರೆಗಳಿಂದ ಅಂತ್ಯದಲ್ಲಿ ಲಿಂಗಭಂಗ ದ್ವಾರಾ, ವಿಮೋಚನೆ (ಮೋಚನ)-ಎಂಬ ಎಂಟು ವಿಧವಾದ ಕರ್ತೃತ್ವ ಉಳ್ಳವನು. (ಸೃಷ್ಟಿ-ಸ್ಥಿತಿ-ಲಯ - ನಿಯಮನ - ಜ್ಞಾನ - ಅಜ್ಞಾನ - ಬಂಧ - ಮೋಕ್ಷ - ಎಂಬ ಅಷ್ಟಕರ್ತೃತ್ವವು.)

೪. ನಿತ್ಯನೂ, ಮಂಗಳಚರಿತನೂ, ಸೃಷ್ಟ್ಯಾದಿ ಅಷ್ಟಕರ್ತನೂ ಆದ ಶ್ರೀಪರಮಾತ್ಮನ ಸಂಕಲ್ಪದಂತೆ ನಡೆಯುವವನು-ವಿಶ್ವೋಪಾಸಕನಾದ ಶ್ರೀ ವಿಘ್ನೇಶ್ವರನು.

ಅಲ್ಲದೆ, ಸಮೀಚೀನವಾದ ಮನಸ್ಸನ್ನು ಸದಾ ಸಚ್ಚಿದಾನಂದನಲ್ಲಿ ಆಸಕ್ತಗೊಂಡಿರುವ ದೇವತೆಗಳು-**ಸುಮನಸರು.**

ಭಗದವದ್ವೇಷಿಗಳೂ, ತಮೋಯೋಗ್ಯರೂ ಆದ ಚೇತನರು **ಅಸುರರು**. ಶ್ರೀವಿನಾಯಕನು ದೇವಾಸುರರ ಇಚ್ಛಾನುಸಾರ ಪ್ರವರ್ತಿಸುವವನಲ್ಲ. ಅಂತಹ ಚಿತ್ತವೃತ್ತಿ ಅವನಿಗಿಲ್ಲ. ಕೇವಲ ಈಶ ಪ್ರೇರಣೆಯಿಂದಲೇ ಪ್ರವರ್ತಿಸುವ ಚಿತ್ತಉಳ್ಳವನೆಂದು ತಾತ್ಪರ್ಯ. ಭಗವದುಪಾಸಕರಾದ ದೇವತೆಗಳಿಗೆ ಶುಭವನ್ನೂ, ದೈತ್ಯರಿಗೆ ದುರ್ಗತಿಯನ್ನೂ ಈಶ ಪ್ರೇರಣೆಯಂತೆ, ವರ್ತಿಸುವವನಲ್ಲ ಎಂತ ತಾತ್ಪರ್ಯ. **ಪ್ರಮತ್ತನಲ್ಲ** (ಸ್ವಾತಂತ್ರ್ಯಭಾವದಿಂದ ವರ್ತಿಸುವವನಲ್ಲ.)

೫. **ಸುಹೃತ್**–ಸಮೀಚೀನವಾದ ಮನಸ್ಸುಳ್ಳ ಸುಜನರು. **ಜನಾಪ್ತ**– ಅಂತಹ ಸಜ್ಜನರಿಗೆ ಅತ್ಯಂತ ಪ್ರೀತಿಯ ವಿಷಯನಾದ ಶ್ರೀಹರಿ. ಅಂತಹ ಸುಹೃಜ್ಜನಾಪ್ತನನ್ನು ಸದಾ ಸ್ಮರಿಸುತ್ತಿರುವ ಆನಂದಭಾಗ್ಯವನ್ನು ಅನುಗ್ರಹಿಸೆಂದು ಪ್ರಾರ್ಥಿಸಿದ್ದಾರೆ ದಾಸರಾಯರು. ॥ ೧೫ ॥

## ಪದ್ಯ–೧೬

**ಮೂಲ :**

**ಪಂಚಭೇದ ಜ್ಞಾನವರುಪು ವಿ ।**
**ರಂಚಿಜನಕನ ತೋರು ಮನದಲಿ ।**
**ವಾಂಛಿತಪ್ರದ ಒಲುಮೆಯಿಂದಲಿ ದಾಸನೆಂದರಿದು ॥**
**ಪಂಚವಕ್ತ್ರನ ತನಯ ಭವದೊಳು ।**
**ವಂಚಿಸದೆ ಸಂತೈಸು ವಿಷಯದಿ ।**
**ಸಂಚರಿಸದಂದದಲಿ ಮಾಡು ಮನಾದಿ ಕರಣಗಳ ॥ ೧೬ ॥**

**ಅವತರಣಿಕೆ :**

ಪಂಚಭೇದಾತ್ಮಕವಾದ ತಾರತಮ್ಯಜ್ಞಾನವನ್ನು ನೀಡಿ, ಇಂದ್ರಿಯಗಳು ವಿಷಯಗಳಲ್ಲಿ ಸಂಚರಿಸದಂದದಿ ಮಾಡೆಂದು ಪ್ರಾರ್ಥಿಸುತ್ತಾರೆ. ॥ ೧೬ ॥

**ಪ್ರತಿಪದಾರ್ಥ :**

**ಪಂಚಭೇದಜ್ಞಾನವ** = ಪಂಚಭೇದ, ತಾರತಮ್ಯ ಈ ಸಿದ್ಧಾಂತ ರೂಪವಾದ ಸುಜ್ಞಾನವನ್ನು, **ಅರುಪು** = ತಿಳಿಸುವವನಾಗು. **ಮನದಲಿ** = ನನ್ನ ಮನೋಮಂದಿರದಲ್ಲಿ, **ವಿರಂಚಿ ಜನಕನ** = ಬ್ರಹ್ಮದೇವರ ತಂದೆಯಾದ ನನ್ನ ಬಿಂಬರೂಪೀ ಶ್ರೀಪರಮಾತ್ಮನನ್ನು, **ತೋರು** = ಪರೋಕ್ಷದ್ವಾರಾ ತೋರಿಸುವವನಾಗು. **ವಾಂಛಿತಪ್ರದ** = ನಿನ್ನ ಭಕ್ತರು ಅಪೇಕ್ಷಿಸುವ ಸುಮಾರ್ಗವನ್ನು ತೋರಿಸುವವನಾದ, (ಭಕ್ತರ ಮನೋಭಿಲಾಷೆಗಳನ್ನು ಸಲ್ಲಿಸುವ) **ಒಲುಮೆಯಿಂದಲಿ** = ಪ್ರೇಮಪೂರಿತವಾಗಿ, **ದಾಸನೆಂದರಿದು** = ನಿನ್ನ ದಾಸನೆಂದು ನನ್ನನ್ನು ತಿಳಿದು, **ಪಂಚವಕ್ತ್ರನ ತನಯ** = ಪಂಚಮುಖಿ ನಾಮಕರಾದ ಶ್ರೀರುದ್ರದೇವರ ಪುತ್ರನಾದ ಹೇ ಗಣನಾಯಕನೇ, **ಭವದೊಳು** = ಈ ಸಂಸಾರದಲ್ಲಿ, **ವಂಚಿಸದೆ** = ವಂಚನ ಮಾಡದೆ, (ಮನಸ್ಸನ್ನು ವಿಷಯಾದಿಗಳ ಕಡೆ ತಿರುಗಿಸದೆ), **ಸಂತೈಸು** = ನನ್ನನ್ನು

**ಸಂರಕ್ಷಿಸು, ಮನಾದಿಕರಣಗಳ** = ಮನಸ್ಸೇ ಆದಿಯಾಗಿ ಏಕಾದಶೇಂದ್ರಿಯ ಗಳನ್ನು, **ವಿಷಯಾದಿ** = ದಾರಾ, ಪುತ್ರ, ಧನ, ಧಾನ್ಯಾದಿ ಪ್ರಾಪಂಚಿಕ ಭವ ಸಂಬಂಧವಾದ ವಿಷಯಗಳಲ್ಲಿ, **ಸಂಚರಿಸದಂತಲಿ ಮಾಡು** = ವಿಹರಿಸುವಂತೆ ಮಾಡು. ॥ ೧೬ ॥

## ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಇಂದ್ರಿಯಗಳು ವಿಷಯದಲ್ಲಿ ಸಂಚಾರ ಮಾಡದಂತೆ ಮಾಡೆಂದು ಪ್ರಾರ್ಥನಾ ಮಾಡುತಾರೆ.

ಐದುಮುಖವುಳ್ಳ ರುದ್ರದೇವರ ಪುತ್ರನಾದ ಹೇ ವಿನಾಯಕನೇ, ಭಗವದ್ಭಕ್ತರು ಅಪೇಕ್ಷಿಸುವ ಸುಮಾರ್ಗವನ್ನು ತೋರಿಸಿಕೊಡತಕ್ಕವನೇ, ಇಂಥಾವನಾದ ನೀನು ಪಂಚಭೇದವೇನು, ತಾರತಮ್ಯ ಜ್ಞಾನವೇನು, ಇವುಗಳನ್ನ ತಿಳಿಸೋವನಾಗು. ಮನಸ್ಸಿನಲ್ಲಿ ಶ್ರೀಬಿಂಬರೂಪಿಯಾದ ಬ್ರಹ್ಮದೇವರಿಗೆ ತಂದಿಯಾದ ಶ್ರೀವಾಸುದೇವರೂಪೀ ಪರಮಾತ್ಮನ್ನ ಅಪರೋಕ್ಷದಿಂದ ತೋರಿಸೋವನಾಗು. ಪ್ರೇಮದಿಂದಲಿ ತಾರತಮ್ಯಾನು ಸಾರ ಸ್ವೋತ್ತಮರಿಗೇನು, ಪರಮಾತ್ಮನಿಗೇನು, ನಾನು ದಾಸನೆಂದು, ಅರಿತವನಾಗಿ, ವಂಚನಮಾಡದೆ ಸಂಸಾರಸಮುದ್ರದೊಳು ವಿದ್ಯಮಾನವಾದ ದಾರ ಪುತ್ರ ಧನ ಧಾನ್ಯಾದಿಗಳೆಂಬ ವಿಷಯಾಖ್ಯಜಲದಲ್ಲಿ ಮನಾದಿ ಏಕಾದಶೇಂದ್ರಿಯಗಳ ಅಪೇಕ್ಷಿಸದ ಹಾಂಗೆ, ಅವುಗಳಲ್ಲಿ ಸಂಚರಿಸದ ಹಾಂಗೆ, ಮಾಡೋವನಾಗು, ಎಂದರೆ, ವಿಷಯಾದಿಗಳಲ್ಲಿ ಮನಸ್ಸು ಸಂಚರಿಸದ ಕಾಲಕ್ಕೂ, ಮನ ಅಧಿಷ್ಠಾನದಲ್ಲಿ ಲಕ್ಷ್ಯವಿಡದೆ, ತದಂತರ್ಗತ ಶ್ರೀಪರಮಾತ್ಮನಲ್ಲಿ ಲಕ್ಷ್ಯವಿಟ್ಟು ಸಂಚರಿಸುವಂತೆ ಮಾಡು. ಈ ಪ್ರಕಾರ ಕಾಪಾಡಬೇಕು-ಎಂತ ಪ್ರಾರ್ಥನ ಮಾಡೋವರಾಗಿದ್ದಾರೆಂತ ತಾತ್ಪರ್ಯ.

**ವಿಶೇಷಾರ್ಥ :**

"ಪಂಚಭೇದಜ್ಞಾನವರುಪು"-ಎಂದರೆ, ಜೀವ-ಈಶ್ವರ-ಜಡ-ಎಂಬ ಮೂರು ತತ್ತ್ವದಲ್ಲಿ ಈಶ್ವರನಾದ ಶ್ರೀಹರಿರೂಪಗಳಿಗೆ ಪರಸ್ಪರ

ಭೇದವಿಲ್ಲದ್ದರಿಂದ ಮೂರೆರಡು, ಆರು ಈ ಆರರ ಒಳಗೆ ಒಂದು ಹೋಗಲು, ಐದು ಭೇದ ಸಿದ್ಧವೆಂಬ ಜ್ಞಾನವನ್ನು ಅರುಪು–ಎಂದರೆ, ಉಪದೇಶಿಸು–ಎಂತ ಅರ್ಥ. ॥ ೧೬ ॥

೨. ಭಾವಪ್ರಕಾಶಿಕೆ :

ಪದ್ಯಾರ್ಥದಲ್ಲಿ ಹೇಳಿದಂತೆ ಪಂಚಭೇದಜ್ಞಾನವು ನಮಗೆ ಜ್ಞಾಪಕ ದಲ್ಲಿರುವಂತೆ ಮಾಡು. ಶ್ರೀಪರಮಾತ್ಮನನ್ನು ಅಪರೋಕ್ಷದಲ್ಲಿ ಕಾಣುವಂತೆ ಮಾಡು. ಎಲೈ ವಾಂಛಿತಪ್ರದನೇ! ಇವನು ಹರಿದಾಸನೆಂತಲೂ, ನಿನಗೂ ದಾಸನೆಂದೂ ತಿಳಿದು, ಅಭಿಮಾನಪೂರ್ವಕವಾಗಿ ಸಂಸಾರದಲ್ಲಿ ತಪಸಿ ನಮ್ಮನ್ನು ವಂಚಿಸದೆ ಉದ್ಧರಿಸು. ಎಲೈ ರುದ್ರಕುಮಾರ! ಮನಸ್ಸು ಮೊದಲಾದ ಇಂದ್ರಿಯಗಳು ವಿಷಯಭೋಗದಲ್ಲಿ ಪ್ರವೇಶಿಸದೇ ಇರುವಂತೆ ಮಾಡು. ॥ ೧೬ ॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :

"ಪಂಚ"–ಇತಿ ॥ ಪಂಚವಕ್ತ್ರಃ ॥ ಪಂಚಧಾ (ಬಾ) ಮಾ ಅರೋದೀಃ ಇತಿ ಪಂಚತ್ವಮಾಪ್ನುಹಿ ॥ ಇತಿಧಾತ್ರೋದಿತೇ ತಸ್ಯಪಂಚಾಸನ್ ವದನಾನ್ಯಥ ॥ ತಥೈವ ವರತಃ ತಸ್ಯ ದಶಬಾಹುರಜಾಯತ ॥ ಇತಿ ವಿಷ್ಣುರಹಸ್ಯೇ. ॥ ೧೬ ॥

## ಕನ್ನಡಾರ್ಥ

"ಗಣಪತಿಯ ತಂದೆ ರುದ್ರ. ಅವನಿಗೆ ಐದು ಮುಖಗಳು. ಯಾಕೆಂದರೆ, ಐದು ಫಲ ಸ್ಥಾನಾದಿಗಳಿಗಾಗಿ ರೋದಿಸಿದುದರಿಂದ, ನೀನು ರುದ್ರನೂ, ಐದು ಮುಖ ಉಳ್ಳವನೂ ಆಗು"–ಹೀಗೆ ತಂದೆಯಾದ ಬ್ರಹ್ಮದೇವನು ನುಡಿಯಲು, ರುದ್ರನಿಗೆ ಐದು ಮುಖಗಳಾದುವು. ಅದರಂತೆ, ಆ ಬ್ರಹ್ಮದೇವನ ವರಬಲದಿಂದ ರುದ್ರನಿಗೆ ಹತ್ತು ಬಾಹುಗಳುಂಟಾದವು. ಹೀಗೆ ವಿಷ್ಣುರಹಸ್ಯದಲ್ಲಿ ಹೇಳಲಾಗಿದೆ. ॥ ೧೬ ॥

## ಶ್ರೀಗುರುಹೃದಯಪ್ರಕಾಶಿಕೆ

ಪಂಚಭೇದಜ್ಞಾನವೆಂಬ, ಜೀವ–ಈಶ್ವರ–ಜಡವೆಂಬ ಮೂರು ತತ್ತ್ವಗಳಲ್ಲಿ ಈಶ್ವರನಾದ ಶ್ರೀಹರಿರೂಪಗಳಿಗೆ ಪರಸ್ಪರ ಬೇಧವಿಲ್ಲದ್ದರಿಂದ, ಮೂರೆರಡಲು ಆರರೊಳಗೆ ಒಂದು ಹೋದರೆ, ಐದು ಭೇದ ಸಿದ್ಧವೆಂಬ ಜ್ಞಾನವನ್ನು ಅರುಹು–ಎಂದರೆ, ಉಪದೇಶಿಸು. ವಿರಿಂಚಿ ಎಂಬ ಬ್ರಹ್ಮನ ಜನಕ ಶ್ರೀಹರಿಯನ್ನು ಮನಸ್ಸಿನಲ್ಲಿ ತೋರಿಸು. ವಾಂಛಿತವೆಂಬ ಬೇಕಾದ ಇಷ್ಟಾರ್ಥವನ್ನು ಕೊಡುವವನೇ ಒಬ್ಬ ಭೃತ್ಯನೆಂದು ನನ್ನನ್ನು ತಿಳಿದು, ಪಂಚವಕ್ತ್ರನಾದ ರುದ್ರಪುತ್ರನೇ ಭವವವೆಂಬ ಸಂಸ್ಕೃತಿಯಲ್ಲಿ ವಂಚಿಸದೆ, ಅಂದರೆ, ಆಸಕ್ತಿ ಕೊಟ್ಟು ಮೋಸ ಮಾಡದೆ, ಸಂರಕ್ಷಿಸು. ವಿಷಯವೆಂಬ ಭೋಗದಲ್ಲಿ ಮನಸ್ಸು ಮೊದಲಾದ ಕರಣಗಳನ್ನು ಸಂಚರಿಸಿದ ಹಾಗೆ ಮಾಡು. ॥ ೧೬ ॥

### ಸರ್ವವ್ಯಾಖ್ಯಾನಸಾರಸಂಗ್ರಹ

೧. ಈಶ–ಜೀವ–ಜಡ ಈ ಮೂರರಲ್ಲಿ, ಪರಸ್ಪರ ಭೇದದಿಂದಾಗಿ **ಪಂಚಭೇದಗಳು.** (೧) ಈಶ–ಜೀವ–ಭೇದ (೨) ಈಶ–ಜಡ ಭೇದ (೩) ಜೀವ–ಜೀವ ಭೇದ (೪) ಜೀವ–ಜಡ ಭೇದ ಮತ್ತು (೫) ಜಡ–ಜಡ ಭೇದ ಎಂದು ಪಂಚಭೇದಗಳು ಐದುಪ್ರಕಾರ. ಈ ಪಂಚಭೇದವು ನಿತ್ಯ ಹಾಗೂ ಅನಾದಿ. ಯಾರಿಂದಲೂ ನಿರ್ಮಿತವಲ್ಲ.

ಇಂತಹ ಪಂಚಭೇದಗಳಿಂದ ಯುಕ್ತವಾಗಿರುವುದರಿಂದಲೇ ಜಗತ್ತಿಗೆ–**ಪ್ರಪಂಚ**–ಎಂದು ಹೆಸರು.

ಶ್ರೀಹರಿಯ ಪರಮಾನುಗ್ರಹ ಪ್ರಾಪ್ತಿಗೆ ಈ ಪಂಚಭೇದಜ್ಞಾನ ಹಾಗೂ ತಾರತಮ್ಯಜ್ಞಾನ ಅತ್ಯವಶ್ಯಕ. ಸತ್ಸಾಧನಾಮಾರ್ಗಕ್ಕೆ ಈ ಜ್ಞಾನವು ದಾರಿದೀಪವಾಗಿದೆ.

ಇಂತಹ ಪಂಚಭೇಧ ಮತ್ತು ತಾರತಮ್ಯಜ್ಞಾನವನ್ನು ಕರುಣಿಸೆಂದು ಶ್ರೀವಿಘ್ನೇಶ್ವರನನ್ನು ಪ್ರಾರ್ಥಿಸುತ್ತಾರೆ.

ಈ ಜ್ಞಾನಕ್ಕೆ ಪ್ರತಿಬಂಧಕ-ವಿಘ್ನಗಳು, ಅಜ್ಞಾನ-ಸಂಶಯಜ್ಞಾನ-ಅನ್ಯಥಾಜ್ಞಾನ-ಇತ್ಯಾದಿ. ಸಕಲ ವಿಘ್ನಪರಿಹಾರಕನಾದ ಶ್ರೀವಿಘ್ನನಾಯಕನು ಈ ಪ್ರತಿಬಂಧಕ ಸಾಮಗ್ರಿಗಳನ್ನು ಪರಿಹರಿಸಿ, ಸಜ್ಜನರಿಗೆ ಸುಜ್ಞಾನಮಾರ್ಗವನ್ನು ತೋರಿಸುವನು. ಇದರಿಂದ ಈ ರೀತಿ ಪ್ರಾರ್ಥನಾ.

೨. ಶ್ರೀವಾಸುದೇವನಾಮಕ ಪರಮಾತ್ಮನ ದೆಸೆಯಿಂದ ಮಾಯಾದೇವಿ ನಾಮಕನಾಳ ಶ್ರೀಲಕ್ಷ್ಮೀದೇವಿಯರಲ್ಲಿ ಪುರುಷನಾಮಕ **ವಿರಂಚಿಯ** ಉತ್ಪತ್ತಿ. ಈ ವಿರಂಚಿನಾಮಕರೇ ಚತುರ್ಮುಖ ಬ್ರಹ್ಮದೇವರು. ಇದು ಸೂಕ್ಷ್ಮಸೃಷ್ಟಿಯ ಸಂಗತಿ.

ನಂತರ ಪದ್ಮನಾಭರೂಪೀ ಶ್ರೀಪರಮಾತ್ಮನ ನಾಭೀಕಮಲದಲ್ಲಿ ಸಂಜಾತರಾದವರು ಹಿರಣ್ಯಗರ್ಭನಾಮಕರಾದ ಶ್ರೀ ಬ್ರಹ್ಮದೇವರು. ಇದರಿಂದ, ಶ್ರೀ ಪರಮಾತ್ಮನು **ವಿರಂಚಿಜನಕನು**.

೩. ನನ್ನ ಮನೋಮಂದಿರದಲ್ಲಿ ಅಂತಹ ವಿರಂಚಿಜನಕನನ್ನು ಅಪರೋಕ್ಷದ್ವಾರಾ, ತೋರಿಸೆಂದು ಪ್ರಾರ್ಥಿಸಿದ್ದಾರೆ. ಸೃಷ್ಟಿ ಕಾರ್ಯಕ್ಕೆ ಬ್ರಹ್ಮದೇವರು ಅವಾಂತರಾಭಿಮಾನಿಗಳು. ಅಂತಹ ಬ್ರಹ್ಮದೇವರ ಜನಕನಾದ ಶ್ರೀಪರಮಾತ್ಮನು ಮೂಲರೂಪೀ ಶ್ರೀಮನ್ನಾರಾಯಣನು, ಆದಿ ಮೂಲರೂಪನು.

೪. ಭಕ್ತಜನರ ಮನೋಭಿಲಾಷೆಗಳನ್ನು ಸಲ್ಲಿಸಿ, ಸತ್ಸಾಧನಾ ಸುಮಾರ್ಗವನ್ನು ಶ್ರೀವಿನಾಯಕನು ಮಾಡಿಸುವನು. ಇದರಿಂದ, **ವಾಂಛಿತಪ್ರದನು**. (ವಾಂಛಿತ-ಮನಸ್ಸಿನ ಇಚ್ಛಾರೂಪವಾದ ಅಭಿಲಾಷೆಗಳು).

**೫.** ಹೇ ಗಣನಾಯಕನೇ, ಸಾಂದರ್ಭಿಕ-ತಾರತಮ್ಯ ಜ್ಞಾನದ ಪ್ರಕಾರ, ಶ್ರೀಪರಮಾತ್ಮನಲ್ಲಿ ವಿಶೇಷ ದಾಸತ್ವ ಸ್ವೋತ್ತಮರಲ್ಲಿ ದಾಸತ್ವ-ಹೀಗೆ ಪರಂಪರಾನುಗತವಾಗಿ ತಿಳಿಸಿ, ನನ್ನನ್ನು ನಿನ್ನ ದಾಸನೆಂದರಿತು ಅನುಗ್ರಹಿಸು.

೬. "ಪಂಚಮುಖೋರುದ್ರಃ"-ಎಂಬ ಶಾಸ್ತ್ರವಚನದಂತೆ. ಐದು ಮುಖವುಳ್ಳ ಶ್ರೀರುದ್ರದೇವನಿಗೆ "**ಪಂಚವಕ್ತ್ರ**"ನೆಂದು ಹೆಸರು. ಶ್ರೀರುದ್ರ

ದೇವರು ಬ್ರಹ್ಮದೇವರ ಭ್ರೂಕುಟಿಯಿಂದ (ಹುಬ್ಬಿನ ಗಂಟು) ಜನಿಸಿದರು. ಹುಟ್ಟಿದ ಸಮಯದಲ್ಲಿಯೇ ಐದು ಸ್ಥಾನಾದಿಗಳಿಗಾಗಿ ರೋದನ ಮಾಡಿದ್ದರಿಂದ, "ರುದ್ರ"ನೆಂದು ಹೆಸರಾಯಿತು.

ಅಂತಹ ಪಂಚವಕ್ತನಾಮಕರಾದ ಶ್ರೀರುದ್ರದೇವರ ಪುತ್ರನು–ಶ್ರೀ ಗಣನಾಯಕನು.

೭. ಈ ಸಂಸಾರದಲ್ಲಿ ಬಂಧಕರೂಪದಲ್ಲಿರುವ ಪತ್ನೀ–ಪುತ್ರ–ಬಂಧು ಬಾಂಧವರ ವರ್ಗ–ಧನ–ಧಾನ್ಯಾದಿವಿಷಯಗಳಲ್ಲಿ ನಮ್ಮ ಮನಸ್ಸು ಸದಾ ಪ್ರವೃತ್ತವಾಗಿರುವುದು. ಅಂತಹ ನಶ್ವರವಾದ ಕ್ಷಣಭಂಗುರವಾದ ವಿಷಯ ಸುಖಗಳಲ್ಲಿ ನನ್ನ ಮನಸ್ಸನ್ನು ಅನುಗೊಳಿಸಿ, ನನ್ನ ವಂಚಿಸಬೇಡವೆಂದು ಪ್ರಾರ್ಥಿಸುತ್ತಾರೆ.

ನನ್ನ ಮನಸ್ಸು, ಬುದ್ಧಿ, ದಶೇಂದ್ರಿಯಗಳನ್ನು ವಿಷಯಾದಿ ಸುಖಗಳಲ್ಲಿ ವಿಹರಿಸದಂತೆ, ವಿಷಯೋಪಭೋಗಗಳಿಂದ ದೂರವಿರಿಸಿ, ವಿರಕ್ತಿ ಪಾಲಿಸಿ, ನನ್ನ ಮನಸ್ಸು ಭಗವದ್ವಿಷಯಗಳಲ್ಲಿಯೇ ಸದಾ ನಿರತವಾಗಿರುವಂತೆ ಮಾಡಿ, ಸಂರಕ್ಷಿಸೆಂದು ಪ್ರಾರ್ಥಿಸಿರುತ್ತಾರೆ–ಶ್ರೀಶನಂಘ್ರಿ ಕಮಲಮಧುಪನಾದ ಶ್ರೀ ವಿಘ್ನೇಶ್ವರನನ್ನು. ॥ ೧೬ ॥

## ಪದ್ಯ–೧೭

**ಮೂಲ :**

**ಏನು ಬೇಡುವುದಿಲ್ಲ ನಿನ್ನ ಕು |**
**ಯೋನಿಗಳು ಬರಲಂಜೆ ಲಕುಮೀ |**
**ಪ್ರಾಣಪತಿ ತತ್ತ್ವೇಶರಿಂದೊಡಗೂಡಿ ಗುಣಕಾರ್ಯ ||**
**ತಾನೇ ಮಾಡುವನೆಂಬ ಈ ಸು |**
**ಜ್ಞಾನವನೆ ಕರುಣಿಸುವುದೆಮಗೆ ಮ |**
**ಹಾನುಭಾವ ಮುಹುರ್ಮುಹುಃ ಪ್ರಾರ್ಥಿಸುವೆನಿತೆಂದು || ೧೭ ||**

**ಅವತರಣಿಕೆ :**

ಶ್ರೀಲಕುಮೀವಲ್ಲಭನೂ, ಪ್ರಾಣಪ್ರೇರಕನೂ ಆದ ಬಿಂಬರೂಪೀ ಶ್ರೀಹರಿಯೇ ತತ್ತ್ವೇಶರ ದ್ವಾರಾ, ಸಕಲಗುಣಕಾರ್ಯಗಳನ್ನೂ ಮಾಡಿ ಮಾಡಿಸುತ್ತಿರುವನೆಂಬ ಸುಜ್ಞಾನವನ್ನೇ ಕರುಣಿಸುವುದೆಂದು ತತ್ತ್ವಪತಿಯಾದ ಶ್ರೀವಿಘ್ನೇಶ್ವರನನ್ನು ಪ್ರಾರ್ಥಿಸುತ್ತಾರೆ. || ೧೭ ||

**ಪ್ರತಿಪದಾರ್ಥ :**

**ನಿನ್ನ** = ಹೇ ವಿನಾಯಕನೇ, ನಿನ್ನನ್ನು, **ಏನು ಬೇಡುವುದಿಲ್ಲ** = ಮತ್ತ್ಯಾವ ಐಹಿಕವಿಷಯಸುಖಗಳನ್ನು ಕೊಡೆಂದು ಪ್ರಾರ್ಥಿಸುವುದಿಲ್ಲ. **ಕುಯೋನಿಗಳು** = ನೀಚಜನ್ಮಗಳು, **ಬರಲು ಅಂಜೆ** = ಬಂದರೂ, ನಾನು ಹೆದರುವುದಿಲ್ಲ. **ಲಕುಮೀ** = ಶ್ರೀಲಕ್ಷ್ಮೀದೇವರು, **ಪ್ರಾಣಪತಿ** = ಜೀವೋತ್ತಮರಾದ ಶ್ರೀವಾಯುದೇವರು, **ತತ್ತ್ವೇಶರಿಂದ** = ತತ್ತ್ವಾಭಿಮಾನಿದೇವತೆಗಳ, **ಒಡಗೂಡಿ** = **ಕೂಡಿಕೊಂಡು**, (ಸಹಿತವಾಗಿ) **ಗುಣ** = ಗುಣತ್ರಯಗಳ, **ಕಾರ್ಯ** = ವ್ಯಾಪಾರಾದಿಗಳನ್ನು ದೇಹೇಂದ್ರಿಯಗಳ ದ್ವಾರಾ, **ತಾನೇ** = ಶ್ರೀ ಪರಮಾತ್ಮನೇ ಅವರಲ್ಲೆಲ್ಲಾ ಬಿಂಬರೂಪಿಯಾಗಿದ್ದುಕೊಂಡು, **ಮಾಡುವನೆಂಬ** = ತಾನೇ ಬಿಂಬಕ್ರಿಯಾದ್ವಾರಾ ಮಾಡಿ, ಶ್ರೀವಾಯುದೇವರ ದ್ವಾರಾ ಮಾಡಿಸಿ, ಶ್ರೀ ರುದ್ರಾದೀತರ ತತ್ತ್ವೇಶರ ದ್ವಾರಾ ಮಾಡಿಸಿ,

ದೇಹಗತ ಇಂದ್ರಿಯಗಳಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನ ದ್ವಾರಾಮಾಡಿ ಮಾಡಿಸುತ್ತಿರುವನೆಂಬ, ಈ ಸುಜ್ಞಾನವನ = ಇಂತಹ ಸಮೀಚೀನವಾದ ಜ್ಞಾನವನ್ನು, ಎಮಗೆ = ನಮ್ಮಗಳಿಗೆ, ಕರುಣಿಸುವುದು = ಪ್ರೇಮಪೂರ್ವಕವಾಗಿ ಅನುಗ್ರಹಿಸುವವನಾಗು. ಮಹಾನುಭಾವ = ಪೂಜ್ಯನಾದ ಶ್ರೀ ವಿಘ್ನೇಶ್ವರನೇ, ಮುಹುರ್ಮುಹುಃ = ಬಾರಿಬಾರಿಗೂ, ಪ್ರಾರ್ಥಿಸುವೆ = ನಿನ್ನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನಿತೆಂದು = ಈ ರೀತಿಯಾಗಿ (ಪ್ರಾರ್ಥಿಸುವೆನು). ॥ ೧೭ ॥

## ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀವಿಘ್ನೇಶ್ವರನ್ನ ಬಿಂಬಕ್ರಿಯಾ–ಪ್ರತಿಬಿಂಬಕ್ರಿಯಾ ಅನುಸಂಧಾನ ಕೊಡೆಂದು ಪ್ರಾರ್ಥನಾ ಮಾಡತಾರೆ.

ಹೇ ವಿನಾಯಕನೇ, ವಿಘ್ನೇಶ್ವರನೇ, ನಿನ್ನ ಐಹಿಕ ವಿಷಯಗಳ ಏನೂ ಬೇಡುವುದಿಲ್ಲ ಮತ್ತು ನೀಚ ಯೋನಿಗಳು ಬಾರದಂತೆ ಮಾಡು–ಎಂತಲೂ ಬೇಡುವುದಿಲ್ಲ. ನೀಚ ಯೋನಿಗಳು ಬಂದಕಾಲಕ್ಕೂ, ಅದಕ್ಕಾಗಿ ನಾನು ಅಂಜೋದಿಲ್ಲ. ಆದ್ದರಿಂದ ಇದಕ್ಕಾಗೂ ನಾನು ಪ್ರಾರ್ಥಿಸೋದಿಲ್ಲ. ದಾವ ಜನ್ಮ ಬಂದ ಕಾಲಕ್ಕೂ, ಲಕ್ಷ್ಮೀದೇವರು, ಜೀವೋತ್ತಮರಾದ ವಾಯು ದೇವರು, ಗರುಡಶೇಷಾದಿ ಚತುರ್ವಿಂಶತಿತತ್ತ್ವೇಶರಿಂದ ಕೂಡಿಕೊಂಡು, ದೇಹಗತಚತುರ್ವಿಂಶತಿತತ್ತ್ವಗಳಲ್ಲಿ, ದೇಹಗತ ಗುಣತ್ರಯಗಳಲ್ಲಿ ಪರಮಾತ್ಮನಾದ ತಾನೇ, ಅದಕ್ಕೆ ಬಿಂಬನಾಗಿದ್ದು, ದೇಹೇಂದ್ರಿಯಾದಿ ಕಾರ್ಯಗಳ ಶ್ರೀಪರಮಾತ್ಮ ಪ್ರಥಮತಃ ಬಿಂಬಕ್ರಿಯಾ ದ್ವಾರಾಮಾಡುವ, ಮಾಡಿದ ನಂತರ ವಾಯುದೇವರು ಮಾಡತಾರೆ. ಅನಂತರ, ರುದ್ರಾದಿ ಯಾವತ್ತೂ ತತ್ತ್ವೇಶರು, ತದ್ವಾರಾ ಜೀವನಾದವ ದೇಹದಿಂದ ಮಾಡುವ, ಎನತಕ್ಕ ಇಂಥಾ ಸಮೀಚೀನ ಜ್ಞಾನವೇ, ಪೂಜ್ಯನಾದ ಶ್ರೀವಿನಾಯಕನೇ, ನಮಗೆ ಅಂತಃಕರಣದಿಂದ ಕೊಡತಕ್ಕದ್ದು–ಎಂತ ಈ ಪೂರ್ವೋಕ್ತವಾಗಿ ಬಾರಿ ಬಾರಿಗೂ ಪ್ರಾರ್ಥನ ಮಾಡತೇನೆ ಹೊರ್ತು, ಅನ್ಯ ವಿಷಯಗಳ ಪ್ರಾರ್ಥನ ಮಾಡೋದಿಲ್ಲ–ಎಂತ ಪ್ರಾರ್ಥನ ಮಾಡಿದ್ದಾರೆಂತ ತಾತ್ಪರ್ಯ. ॥ ೧೭ ॥

**೩. ಭಾವಪ್ರಕಾಶಿಕೆ :**

ನಾನು ನಿನ್ನನ್ನು ಕುರಿತು ಸಂಸಾರದಲ್ಲಿ ವಿಷಯಾದಿ ಭೋಗಗಳ ಸುಖವನ್ನು ಕೊಡೆಂದಾಗಲೀ, ಸ್ವರ್ಗಭೋಗವನ್ನಾಗಲೀ ಬೇಡುವುದಿಲ್ಲ. "ದಶಾವರಾಣಾಂ ದೇಹಾನಾಂ ಕೌರವನಾನಿ ಕರೋತ್ಯಸೌ"–ಇತ್ಯಾದಿ ಪ್ರಮಾಣಗಳಂತೆ, ಪ್ರತಿ ಒಂದು ದಿವಸದಲ್ಲೂ ೧೦ ನೀಚ ಜನ್ಮಗಳನ್ನು ಹೊಂದುವುದಕ್ಕೆ ಬೇಕಾಗುವಷ್ಟು ಕರ್ಮಗಳನ್ನು ಒಬ್ಬೊಬ್ಬ ಜೀವನೂ ಮಾಡುವನೆಂಬ ವಿಧಿಯಿಂದ ನನಗೆ ಬೇಕಾದಷ್ಟು ನೀಚ ಜನ್ಮಗಳು ಬಂದರೂ ನಾನು ಹೆದರುವವನಲ್ಲ. ಆದರೆ, ಯಾವಾಗಲೂ ನಾನು ಮಾಡುವ ಪುಣ್ಯ ಪಾಪಾದಿ ಎಲ್ಲ ಕಾರ್ಯಗಳನ್ನೂ ಪರಮಾತ್ಮನೇ ತತ್ತ್ವಾಭಿಮಾನಿ ದೇವತೆಗಳಿಂದೊಡಗೂಡಿ, ನಮ್ಮೊಳಗಿದ್ದು ಮಾಡುವನು. ಎಂಬ ಈ ಉತ್ತಮಜ್ಞಾನವನ್ನು ಮಾತ್ರ ನಮಗೆ ದಯಪಾಲಿಸಬೇಕೆಂದು ಪುನಃ ಪುನಃ ಪ್ರಾರ್ಥಿಸುವೆನು. ಇದರಿಂದ, ಕಾಮ್ಯವನ್ನು ಎಂದಿಗೂ ಅಪೇಕ್ಷಿಸಬಾರದೆಂದು ವಿಧಿ ಇದ್ದರೂ,–"ಕಾಮಾಂತುದಾಸ್ಯೇ ನತು ಕಾಮ ಕಾಮ್ಯಯಾ"–ಎಂಬ ಭಾಗವತವಾಕ್ಯಾನುಸಾರವಾಗಿ ಭಗವಂತನ ದಾಸನಾಗ ಬೇಕೆಂದು ಬೇಡುವುದು ತಪ್ಪಲ್ಲ. ಕಾಮ್ಯವಾದ ವಿಷಯಭೋಗಾದಿಗಳನ್ನು ಮಾತ್ರ ಬೇಡಬಾರದೆಂದು ಸೂಚಿಸಿದಂತಾಯಿತು. ॥ ೧೭ ॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

"ಯೇವ"–ಇತಿ ॥ "ಅಂಜೆನು"–ಇತ್ಯರ್ಥಃ ॥ ನಬಿ ಭೇಮಿ. ॥ ೧೭ ॥

## ಕನ್ನಡಾರ್ಥ

"ಅಂಜೆ"–ಈ ಪದಕ್ಕೆ "ಅಂಜೆನು"–ಅಂಜುವುದಿಲ್ಲವೆಂದು ಅರ್ಥ. ॥ ೧೭ ॥

## ಶ್ರೀಗುರುಹೃದಯಪ್ರಕಾಶಿಕೆ

ನಿನ್ನನ್ನು ಏನೂ ಕೇಳುವುದಿಲ್ಲ. ಕುಯೋನಿ ಎಂಬ ಪಶ್ವಾದಿ ಜನ್ಮ ಬಂದರೂ ನಾನು ಅಂಜುವುದಿಲ್ಲ. ಲಕ್ಷ್ಮೀಪ್ರಾಣಪತಿಯಾದ ಶ್ರೀಹರಿಯು

ತತ್ತ್ವೇಶರಿಂದ ಒಡಗೂಡಿ, ಈ ದೇಹದಲ್ಲಿ ತ್ರಿಗುಣಕ್ರಿಯವೆಂಬ ಪುಣ್ಯಪಾಪಾದಿ ಸಕಲವನ್ನು ತಾನೇ ವ್ಯಕ್ತಿ ಮಾಡುವನೆಂಬ ಈ ಸುಜ್ಞಾನವನ್ನು ನನಗೆ ಕರುಣಿಸು. ಅಂದರೆ, ಕೊಡು. ಮಹಾನುಭಾವನೇ ಮತ್ತೂ ಮತ್ತು ಇದನ್ನೇ ಕೇಳಿಕೊಳ್ಳುತ್ತೇನೆ. ॥ ೧೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. "ದಶಾವರಾಣಾಂ ದೇಹನಾಂ ಕಾರಣಾನಿ ಕರೋತ್ಯಜಸೌ"–ಎಂಬ ಪ್ರಮಾಣ ವಚನದಂತೆ, ಪ್ರತಿ ಜೀವಿಯು ಪ್ರತಿ ದಿವಸದಲ್ಲಿ ಮಾಡುವ ಕರ್ಮಗಳು ೧೦ ನೀಚ ಜನ್ಮಗಳ ಪ್ರಾಪ್ತಿಗೆ ಕಾರಣವಾಗುವುವು. ಅಲ್ಲಿಗೆ ಒಬ್ಬ ಜೀವಿಯ ಆಯುರ್ಮಾನದಲ್ಲಿ ಅನುಷ್ಠಿತ ಕರ್ಮ ಪರಂಪರೆಗಳಿಂದ ಎಷ್ಟು ನೀಚ ಜನ್ಮಗಳು ಬರಬಹುದು?

ಪಶ್ವಾದಿ ನೀಚ ಜನ್ಮಗಳು (**ಕುಯೋನಿಗಳು**) ಬಂದರೂ ಸರಿಯೆ. ನಾನು ಅಂಜವುದಿಲ್ಲ–ಎನ್ನುತ್ತಾರೆ ದಾಸಾರ್ಯರು. ಶ್ರೀಹರಿಯ ಚಿತ್ತಾನುಸಾರ ೮೪ ಲಕ್ಷ ಯೋನಿಗಳಲ್ಲಿ ಜನ್ಮವೆತ್ತುವುದು ನಿಯಮವೇ ಸರಿ. ಅಂತಹ ಯೋನಿಗಳಲ್ಲಿ ಎಷ್ಟು ನೀಚಜನ್ಮಗಳು ಬರಬಹುದು!

೨. ಅಂತಹ ನೀಚಯೋನಿಗಳು ಬಂದಾಗ್ಯೂ, ನನಗೆ ಒಂದು ಜ್ಞಾನಾನುಸಂಧಾನವನ್ನು ಮಾತ್ರ ನೀಡೆಂದು ಪ್ರಾರ್ಥಿಸಿದ್ದಾರೆ.

ಸರ್ವಶಕ್ತನೂ, ಸರ್ವಪ್ರೇರಕನೂ ಆದ ಸರ್ವೇಶ್ವರನೂ ಪ್ರತಿ ಜೀವಿಯಲ್ಲಿ ಅಂತಸ್ಥಿತನಾಗಿದ್ದು, ಶ್ರೀಲಕ್ಷ್ಮೀಸಹಿತನಾಗಿ ಬಿಂಬರೂಪಿ ಯಾಗಿದ್ದು, ಮುಖ್ಯಪ್ರಾಣದೇವರ ದ್ವಾರಾ, ಅವರಿಂದ ಪ್ರೇರಿತರಾದ ಸಕಲ ತತ್ತ್ವಾಭಿಮಾನಿ ದೇವತೆಗಳ ದ್ವಾರಾ. ತ್ರಿಗುಣಜನ್ಯವಾದ ಕರ್ಮರೂಪವಾದ ಶುಭ–ಅಶುಭ–ಮಿಶ್ರರೂಪದ ಸಮಸ್ತವ್ಯಾಪಾರಗಳನ್ನೂ ತಾನೇ ಬಿಂಬಕ್ರಿಯ ದ್ವಾರಾ ಮಾಡಿ, ಶ್ರೀವಾಯುದೇವರು–ತತ್ತ್ವಾಭಿಮಾನಿಗಳ ದ್ವಾರಾ **ಮಾಡಿಸಿ,** ಸ್ಥೂಲ ದೇಹಗತ ಸಕಲೇಂದ್ರಿಯಗಳಲ್ಲಿ **ಪ್ರಕಾಶಕನೋ ವ್ಯಾಪ್ತನಾಗಿರುವ ಜೀವನ ದ್ವಾರಾಮಾಡಿ ಮಾಡಿಸುತ್ತಾ,** ಕರ್ಮಜನಿತ ಫಲಾನುಭವಗಳನ್ನು ಜೀವರಿಗೆ

ಉಣಿಸುತ್ತಿರುವನು–ಎಂಬ ತತ್ತ್ವಾರ್ಥ ರಹಸ್ಯವನ್ನು ಮಾತ್ರ ನನಗೆ ಅನುಗ್ರಹಿಸು. ಈ ಸುಜ್ಞಾನವನ್ನು ಮಾತ್ರ ಕರುಣಿಸುವುದೆಂದು ಶ್ರೀವಿಘ್ನೇಶ್ವರನನ್ನು ಕುರಿತು ಬಾರಿ ಬಾರಿಗೆ ಪ್ರಾರ್ಥಿಸುತ್ತಾರೆ.

ಪಶ್ವಾದಿ ನೀಚಜನ್ಮಗಳು ಬಂದರೂ, ಜೀವಿಯಲ್ಲಿ ಸಂಸ್ಕಾರ ರೂಪವಾದ ಮನಸ್ಸು ಇದ್ದೇ ಇರುವುದು. ಆ ಮನಸ್ಸಿನಲ್ಲಿ ಪೂರ್ವೋಕ್ತ ಸುಜ್ಞಾನವು ಉಂಟಾಗಬೇಕು. ಮೂಕ ಪ್ರಾಣಿಗಳಿಗೆ ವಾಕ್ಶಕ್ತಿಯಿಲ್ಲದಿದ್ದರೂ, ಮನಸ್ಸಿನ ವ್ಯಾಪಾರ ಪ್ರವರ್ತನವಾಗುತ್ತಿರುವುದು. ಅದನ್ನು ಅವು ತಮ್ಮ ಮೂಕ ಸಂವೇದನೆಯ ದ್ವಾರಾ ಪ್ರದರ್ಶಿಸುವುವು. ಇಂತಹ ಸುಜ್ಞಾನ ಪ್ರಾಪ್ತಿಗೆ ಭೂತಾಕಾಶಾಭಿಮಾನಿಯೂ, ಶಬ್ದಗುಣಗ್ರಾಹಕನೂ, ವರಸಿದ್ಧಿ ಪ್ರದಾಯಕನೂ ಆದ ಶ್ರೀವಿನಾಯಕನ ಅನುಗ್ರಹ ಅತ್ಯಗತ್ಯ. ॥ ೧೭ ॥

## ಪದ್ಯ–೧೮

**ಮೂಲ :**

**ನಮೋ ನಮೋ ಗುರುವರ್ಯ ವಿಬುಧೋ ।**
**ತ್ತಮ ವಿವರ್ಜಿತನಿದ್ರ ಕಲ್ಪ ।**
**ದ್ರುಮನೆನಿಪ ಭಜಕರಿಗೆ ಬಹುಗುಣಭರಿತ ಶುಭಚರಿತ ॥**
**ಉಮೆಯನಂದನ ಪರಿಹರಿಸಹಂ ।**
**ಮಮತೆ ಬುದ್ಧ್ಯಾದಿಂದ್ರಿಯಗಳಾ ।**
**ಕ್ರಮಿಸಿ ದಣಿಸುತಲಿಹುವು ಭವದೊಳಗಾವ ಕಾಲದಲಿ ॥ ೧೮ ॥**

**ಅವತರಣಿಕೆ :**

ಅಹಂಮಮತಾದಿಗಳನ್ನು ಬಿಡಿಸೆಂದು ಶ್ರೀಗಣೇಶನನ್ನು (ತಮ್ಮ ಗುರುಗಳಾದ ಶ್ರೀ ಗೋಪಾಲದಾಸರು ಗಣೇಶಾಂಶರು–ಅವರ ಸ್ತುತಿಯೂ ಸಹ) ಪ್ರಾರ್ಥಿಸುತ್ತಾರೆ. ॥ ೧೮ ॥

**ಪ್ರತಿಪದಾರ್ಥ :**

**ಗುರುವರ್ಯ** = ಅಜಾನಜದೇವತೆಗಳಿಗೆ ಗುರುವಾದ, ಕರ್ಮಜರಿಗಿಂತಲೂ ಶ್ರೇಷ್ಠನಾದ ಶ್ರೀವಿಘ್ನರಾಜನೇ (ಗಣೇಶಾಂಶರಾದ ಶ್ರೀ ಗೋಪಾಲದಾಸರನ್ನು ಕುರಿತ ಗುರುಸ್ತೋತ್ರವೂ ಹೌದು) **ನಮೋ ನಮೋ** = ನಿನಗೆ ಪುನಃ ಪುನಃ ನಮನವು. **ವಿಬುಧೋತ್ತಮ** = ಜ್ಞಾನಿಗಳಾದ ಕರ್ಮಜರಿಗಿಂತ ಜ್ಞಾನಶ್ರೇಷ್ಠನೇ, **ವಿವರ್ಜಿತ ನಿದ್ರ** = ನಿದ್ರಾರಹಿತನಾದ (ಎಲ್ಲಾ ದೇವತೆಗಳೂ ಅನಿದ್ರರು), **ಭಜಕರಿಗೆ** = ನಿನ್ನನ್ನು ಭಕ್ತಿಪೂರ್ವಕವಾಗಿ ಪೂಜಿಸುವವರಿಗೆ, **ಕಲ್ಪದ್ರುಮನೆನಿಪ** = ಕಲ್ಪವೃಕ್ಷನೆಂದು ಕರೆಯಿಸುವವನೇ, **ಬಹುಗುಣಭರಿತ** = ಅನೇಕ ಶುಭ ಗುಣಗಳಿಂದ ಯುಕ್ತನಾದವನೇ, **ಶುಭಚರಿತ** = ಮಂಗಳಕರವಾದ ವ್ಯಾಪಾರವುಳ್ಳವನೇ (ಶುದ್ಧಚಾರಿತ್ರ್ಯನೇ), **ಉಮೆಯ ನಂದನ** = ಪಾರ್ವತೀಪುತ್ರನೇ, **ಅಹಂ ಮಮತೆ** = ಅಹಂಕಾರ ಮತ್ತು ಮಮಕಾರಗಳನ್ನು, **ಪರಿಹರಿಸು** = ನಿವಾರಣೆ ಮಾಡು. **ಬುದ್ಧ್ಯಾದಿ**

**ಇಂದ್ರಿಯಗಳ** = ನಮ್ಮ ಬುದ್ಧಿ, ಮನಾದಿ ಏಕಾದಶೇಂದ್ರಿಯಗಳನ್ನು **ಆಕ್ರಮಿಸಿ** = ತಮ್ಮ ವಶಮಾಡಿಕೊಂಡು, **ಭವದೊಳಗೆ** = ಸಂಸಾರದಲ್ಲಿ, **ಅವ ಕಾಲದಲಿ** = ಸರ್ವಕಾಲಗಳಲ್ಲಿ, **ದಣಿಸುತಲಿಹವು** = ಶ್ರಮವನ್ನುಂಟು ಮಾಡುತ್ತಿವೆ. ॥ ೧೮ ॥

## ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಅಹಂಮಮತಾದಿಗಳ ಬಿಡಿಸೆಂದು ವಿನಾಯಕನನ್ನು ಪ್ರಾರ್ಥಿಸಲಾ.

ಅಜಾನಜರಿಗೆ ಗುರುಗಳಾದ ಕರ್ಮಜರಿಗಿಂತಲೂ ಶ್ರೇಷ್ಠನಾ ವಿಘ್ನರಾಜನೇ, ನಿನಗೆ ನಮಸ್ಕಾರ ನಮಸ್ಕಾರ. ನೀನು ಎಂಥಾವನೆಂದರೆ-ಜ್ಞಾನಿಗಳಾದ ಕರ್ಮಜರಿಗಿಂತಲೂ ಜ್ಞಾನಿಗಳಿಂದ ಶ್ರೇಷ್ಠನಾದವ. ಸ್ವಾಭಾ ದೇವಶಬ್ದನಾದವ. ಹೋಗಲ್ಪಟ್ಟ ನಿದ್ರಾ ಉಳ್ಳವ. ನಿನ್ನ ಭಕ್ತಿಪೂರ್ವ ಭಜಿಸುವವರಿಗೆ ಕಲ್ಪವೃಕ್ಷ ಸ್ಥಾನಾಪನ್ನನಾದವ. ಅನೇಕ ಮಂಗಳಕರಗಳಾ ಗುಣಗಳಿಂದ ಪೂರ್ಣನಾದವ. ಮಂಗಳಕರಗಳಾದ ವ್ಯಾಪಾರವುಳ್ಳ ಪಾರ್ವತೀದೇವೇರಿಗೆ ಪುತ್ರನಾದವ. ಅಹಂ ಮಮತ–ಎಂಬ ಎರಡು ಜ್ಞಾನಗಳು, ಅಸ್ಮದಾದಿ ಭಗವದ್ಭಕ್ತರ ಮನಾದಿ ಏಕಾದಶೇಂದ್ರಿಯಗ ತಮ್ಮ ವಶ ಮಾಡಿಕೊಂಡು, ದೇಹೇಂದ್ರಿಯಾದಿಗಳನ್ನು ಆಕ್ರಾಂತಗಳನ್ನಾ ಮಾಡುತಾ ಇರೋವಾಗಿವೆ. ಇದರಿಂದ, ಸಂಸಾರದೊಳಗೆ ಸದಾ ಸರ್ವಕಾ ದಲ್ಲಿ ಸಂಚರಿಸಿ, ಶ್ರೀಪರಮಾತ್ಮನ ಸ್ಮೃತಿಯಿಂದ ರಹಿತನಾಗಿ ಇದ್ದೇನೆ. ಇದರನ್ನ ಪರಿಹಾರ ಮಾಡು–ಎಂತ ಪ್ರಾರ್ಥನ ಮಾಡಿದ್ದಾರೆಂತ ತಾತ್ಪರ್ಯ ॥ ೧೮ ॥

**೨. ಭಾವಪ್ರಕಾಶಿಕೆ :**

ಭಕ್ತಜನರಿಗೆ ಕಲ್ಪವೃಕ್ಷದಂತೆ, ಅವರವರ ಮನೋಭೀಷ್ಟವನ್ನು **ಪೂರೈಸುವ,** ಎಲೈ ದೇವೋತ್ತಮನೇ! ನಿನಗೆ ನಮಸ್ಕಾರ ನಮಸ್ಕಾರ. ನೀನು ಯಾವಾಗಲೂ ನಿದ್ರೆಯನ್ನು ಮಾಡದೆ ಭಕ್ತರನ್ನು ಪಾಲಿಸುವೆ! ಗಂಗಾ ಪರ್ಜನ್ಯರು, ಉಕ್ತಶೇಷ ಶತಸ್ಥರಿಂತಲೂ ಉತ್ತಮವಾದ ಗುರುವೆನಿಸುವೆ ಬಹುಗುಣಪೂರ್ಣನು. ಮಂಗಳಕರವಾದ ಚರಿತ್ರೆಯುಳ್ಳವನು. ಎಲೈ

ಪಾರ್ವತೀಪುತ್ರನೇ! ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಆಕ್ರಮಿಸಿ ಕೊಂಡು, ಬಹಳ ದಣುವಿಕೆಯನ್ನುಂಟು ಮಾಡುತ್ತಿರುವದು. ಆದುದರಿಂದ, ಅಹಂ ಮಮತೆಯನ್ನು ಪರಿಹರಿಸು. ॥ ೧೮ ॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :

"ನಮ" ಇತಿ ॥ "ವಿವರ್ಜಿತ" ಅನಿಮಿಷ. ॥ ೧೮ ॥

## ಕನ್ನಡಾರ್ಥ

"ವಿವರ್ಜಿತನಿದ್ರ"–ಈ ಪದ್ಯಕ್ಕೆ ನಿಮೇಷವನ್ನು ಬಡಿಯದೆ, ತೆರೆದ ರೆಪ್ಪೆಗಳುಳ್ಳ ಕಣ್ಣಿನ ದೇವತೆ–ಎಂದು ಅರ್ಥ. ॥ ೧೮ ॥

## ಶ್ರೀಗುರುಹೃದಯಪ್ರಕಾಶಿಕೆ

ಗುರುಶ್ರೇಷ್ಠನೇ, ನಿನಗೆ ನಮಸ್ಕಾರ ನಮಸ್ಕಾರ. ವಿಬುಧರೆಂಬ ದೇವತೆಗಳಲ್ಲಿ ಉತ್ತಮನೇ, ವಿವರ್ಜಿತನಿದ್ರನೆ ಅಂದರೆ, ಮೋಹರಹಿತನೆ, ಬಹುಗುಣಭರಿತನೆ, ಶುಭಚರಿತ್ರನೆ, ಉಮಾಪುತ್ರನೆ, ನೀನು ಭಜಕರಿಗೆ ಕಲ್ಪವೃಕ್ಷವೆನ್ನಿಸಿಕೊಂಡು ಬೇಕಾದ್ದವನ್ನು ಸದಾ ಕೊಡುವೆ. ಭವವೆಂಬ ದೇಹಾದಿ ಪ್ರಪಂಚದಲ್ಲಿ ಅಹಂಕಾರ ಮಮಕಾರವೆಂಬುವುಗಳು ಬುದ್ಧಿ ಮೊದಲಾದ ಕರಣಗಳನ್ನು ಆಕ್ರಮಿಸಿ, ದಣಿಸುತ್ತಾ ಇವೆ. ಆ ಅಹಂಕಾರ ಮಮಕಾರಗಳನ್ನು ನನಗೆ ಬಿಡಿಸಿ ರಕ್ಷಿಸು. ॥ ೧೮ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಅಜಾನಜ ದೇವತೆಗಳು–ಕರ್ಮಜರು–ಗಂಗಾದೇವಿ–ಪರ್ಜನ್ಯ–ಶೇಷಶತಸ್ಥರಿಗಿಂತಲೂ ತಾರತಮ್ಯದಲ್ಲಿ ಉತ್ತಮನಾಗಿರುವುದರಿಂದ, ಶ್ರೀವಿಘ್ನೇಶ್ವರನನ್ನು ಗುರುವರ್ಯ – ಎಂದು ಸಂಬೋಧಿಸಿದ್ದಾರೆ–ದಾಸ ವರ್ಯರು.

ಇದಲ್ಲದೆ, ತಮಗೆ ೪೦ ವರ್ಷಗಳ ಆಯುರ್ದಾನವನ್ನು ಮಾಡಿ, ತದ್ವಾರಾ, ಶ್ರೀಮದ್ಹರಿಕಥಾಮೃತಸಾರವೆಂಬೀ ಕೃತಿರತ್ನದ ರಚನೆಗೆ ಕಾರಣ ರಾದ ಸ್ವರೂಪೋದ್ಧಾರಕ ತಮ್ಮ ಗುರುಗಳು ಶ್ರೀ ಗೋಪಾಲದಾಸರು. ತಮ್ಮ

ಗುರುಗಳು **ಗಣೇಶಾಂತರೆಂದು** ಸುಪ್ರಸಿದ್ಧರಾಗಿದ್ದಾರೆ. "ಗುರುವರ್ಯ"–ಎಂಬ ಪದಪ್ರಯೋಗದಿಂದ ತಮ್ಮ ಗುರುಸ್ತವನರೂಪವಾದ ಸ್ಮರಣೆಯನ್ನು ಮಾಡಿದ್ದಾರೆ.

೨. ಜ್ಞಾನಿಗಳಿಗೆ–ವಿಬುಧರೆಂದು ಹೆಸರು. ಗಣೇಶನಿಗಿಂತ ತಾರತಮ್ಯದಲ್ಲಿ ಅವರರಾದ, ಅಜಾನಜರು, ಕರ್ಮಜರು–ಇತ್ಯಾದಿ ವರ್ಗ ಉತ್ತಮಜ್ಞಾನಿಗಳು. ಅವರಿಗಿಂತ ತಾರತಮ್ಯದಲ್ಲಿ ಉತ್ತಮನಾದ **ಶ್ರೀವಿನಾಯಕನು–ವಿಬುಧೋತ್ತಮನು.**

೩. ದೇವತೆಗಳಿಗೆ ಕಣ್ಣಿನ ರೆಪ್ಪೆಯಿಲ್ಲ. ಇದರಿಂದ–ಅವರಿಗೆ "ಅನಿಮೇಷ"ರೆಂತ ನಾಮ. ನಿದ್ರಾರಹಿತರಾದ ದೇವತಾವರ್ಗಕ್ಕೆ ಗಣನಾಯಕನು ಸೇರಿರುವುದರಿಂದ **ವಿವರ್ಜಿತನಿದ್ರ**–ನೆಂದರು. (ವಿವರ್ಜಿತ –ಹೋಗಲ್ಪಟ್ಟ, ಅಂದರೆ, ಇಲ್ಲದ, ನಿದ್ರೆ ಎಂದರ್ಥ).

ಅಲ್ಲದೆ, ಮೋಹರಹಿತನಾದ್ದರಿಂದ, ವಿವರ್ಜಿತನಿದ್ರನು. ನಿದ್ರೆಯು ಜಡಸ್ವಭಾವದ ಲಕ್ಷಣ. ಮೋಹ ಅಥವಾ ಸಂಶಯಜ್ಞಾನವು ನಿದ್ರಾ ಸಾಂಕೇತ. ಶ್ರೀವಕ್ರತುಂಡನ ಜ್ಞಾನ ನಿಸ್ಸಂಶಯವಾದದ್ದು ಮತ್ತು ಮೋಹರಹಿತವು.

೪. ನಿನ್ನನ್ನು ಭಕ್ತಿಪೂರ್ವಕವಾಗಿ ಪೂಜಿಸುವ ಭಕ್ತರ ಸಮಸ್ತ ಮನೋಭಿಲಾಷೆಗಳನ್ನು ಸಲ್ಲಿಸುವವನು. ಇಂದ್ರಲೋಕದಲ್ಲಿರುವ ಕಲ್ಪವೃಕ್ಷವು **(ಕಲ್ಪದ್ರುಮ)** ತನ್ನನ್ನು ಪೂಜಿಸಿದ ಭಕ್ತರ ಸಕಲ ಮನೋಭೀಷ್ಟಗಳನ್ನು ಅವರವರ ಯೋಗ್ಯತಾನುಸಾರ ಪೂರೈಸುವುದು. ಇದರಿಂದ, ಶ್ರೀ ಗಣೇಶನು ಭಕ್ತರ ಪಾಲಿಗೆ **ಕಲ್ಪದ್ರುಮಸದೃಶನು.** (ದ್ರುಮ–ವೃಕ್ಷ–ಮರ).

೫. ಅನೇಕ ಶುಭಗುಣಗಳಿಂದ ಯುಕ್ತನು. ಇದರಿಂದ, **ಬಹುಗುಣಭರಿತನು.**

೬. ಅವನ ಚಾರಿತ್ರ್ಯವು ಪವಿತ್ರವಾದದ್ದು. ಮಂಗಳಪ್ರದವು. ಇದರಿಂದ, **ಶುಭಚರಿತನು.**

೭. ಪಾರ್ವತೀದೇವಿಯ ಶರೀರಗತ **ಕೊಳೆ** (ಮೃತ್)ಯಿಂದ ಉದ್ಭವಿಸಿದನಾದ್ದರಿಂದ, ಮದ್ಭವನಾದ ಮಂಗಳಾಂಗನು–ಉಮೆಯ **ನಂದನನು.** (ಉಮಾ–ಪಾರ್ವತೀ–ನಂದನ–ಪುತ್ರ).

೮. ನನ್ನ ಶರೀರಗತವಾದ ಬುದ್ಧಿ, ಚಿತ್ತ, ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು – ಎಲ್ಲವನ್ನೂ ಅಹಂಕಾರ ಮತ್ತು ಮಮಕಾರಗಳೆಂಬ ಮಹಾದೋಷಗಳು ವಶಪಡಿಸಿಕೊಂಡು ನನ್ನನ್ನು ಶ್ರಮಪಡಿಸುತ್ತಿವೆ.

"ನಾನೇ ಸರ್ವಕ್ಕು ಕರ್ತ, ಜಗತ್ತಿನಲ್ಲಿರುವ ಸಕಲವಸ್ತುಗಳೂ ನನ್ನವು"– ಎಂಬ ಈ ಭ್ರಮಾತ್ಮಕವಾದ ಜ್ಞಾನವು–ಅಹಂಕಾರ ಮತ್ತು ಮಮಕಾರವು.

ಅಹಂ ಮಮತಾದಿಗಳಿಂದ ವಶನಾಗಿ, ಜೀವನು ದುರ್ಗತಿಯನ್ನು ಹೊಂದುತ್ತಾನೆ. ಸಂಸಾರ ಸಾಗರದ ಸುಳಿಗೆ ಸಿಕ್ಕಿ ಪ್ರಾಂತವನ್ನು ಕಾಣದೆ ಬಳಲಿ ಬೆಂಡಾಗುತ್ತಾನೆ.

ಸತ್ಸಾಧನಾ ರೂಪವಾದ ಸನ್ಮಾರ್ಗಕ್ಕೆ ಅಹಂ ಮಮತಾದಿಗಳು ಪ್ರತಿಬಂಧಕವಸ್ತುಗಳು. ಸತ್ಪಂಥಕ್ಕೆ ಅಡ್ಡಿಯಾಗಿರುವ ವಿಘ್ನಗಳು. ಇವುಗಳನ್ನು ನಿವಾರಿಸಿ, ವಿಘ್ನಗಳನ್ನು ದೂರ ಮಾಡಿ, ದುಸ್ತರವಾದ ಸಂಸಾರದಿಂದ ಉತ್ತರಿಸುವ ಸನ್ಮಾರ್ಗವನ್ನು ತೋರೆಂದು ವಿನಯಪೂರ್ವಕ ವಿನಾಯಕನಲಿ ದಾಸಾರ್ಯರ ಪ್ರಾರ್ಥನೆ. ॥ ೧೮ ॥

## ಪದ್ಯ–೧೯

**ಮೂಲ :**

**ಜಯ ಜಯತು ವಿಘ್ನೇಶ ತಾಪ ।**
**ತ್ರಯ ವಿನಾಶನ ವಿಶ್ವಮಂಗಳ ।**
**ಜಯ ಜಯತು ವಿದ್ಯಾಪ್ರದಾಯಕ ವೀತಭಯಶೋಕ ॥**
**ಜಯ ಜಯತು ಚಾರ್ವಂಗ ಕರುಣಾ ।**
**ನಯನದಿಂದಲಿ ನೋಡಿ ಜನುಮಾ ।**
**ಮಯ ಮೃತಿಗಳನು ಪರಿಹರಿಸು ಭಕ್ತರಿಗೆ ಭವದೊಳಗೆ ॥ ೧೯ ॥**

**ಅವತರಣಿಕೆ :**

ಜಯಪ್ರದನಾದ ಶ್ರೀವಿನಾಯಕನನ್ನು ಸತ್ಸಾಧನೆಗೆ ಪ್ರತಿಬಂಧಕ ರೂಪವಾದ ರೋಗಾದಿಗಳನ್ನು ಪರಿಹರಿಸಬೇಕೆಂದು ಪ್ರಾರ್ಥಿಸುತ್ತಾರೆ. ॥ ೧೯ ॥

**ಪ್ರತಿಪದಾರ್ಥ :**

**ವಿಘ್ನೇಶ** = ಎಲೈ ವಿಘ್ನರಾಜನೇ, **ಜಯ ಜಯತು** = ನಿನ್ನ ಭಕ್ತರಿಗೆ ಜಯಪ್ರದನೇ, **ತಾಪತ್ರಯ ವಿನಾಶನ** = ಆದಿವ್ಯಾಧಿ ರೂಪವಾದ ತಾಪಗಳನ್ನು ಪರಿಹರಿಸತಕ್ಕವನೇ, **ವಿಶ್ವಮಂಗಳ** = ಜಗತ್ತಿಗೇ ಶುಭವನ್ನು ಕೊಡುವವನು. **ವಿದ್ಯಾಪ್ರದಾಯಕ** = ಭಗವದ್ವಿಷಯಕವಾದ ಸಮೀಚೀನವಾದ ವಿದ್ಯಾ ಸಂಪತ್ತನ್ನು (ವೇದವಿದ್ಯೆ) ಕೊಡತಕ್ಕವನೇ, **ಜಯ ಜಯತು** = ಜಯಪ್ರದನಾಗು. (ಸುಮುಖನಾಗು) **ವೀತಭಯಶೋಕ** = ಭಯ–ದುಃಖರಹಿತನಾದವನೇ, **ಚಾರ್ವಂಗ** = ಸುಂದರವಾದ ಶರೀರವುಳ್ಳವನೇ, **ಭವದೊಳಗೆ** = ಸಂಸಾರಸಾಗರದಲ್ಲಿ, **ಜನುಮ** = ಜನನ, **ಆಮಯ** = ಶರೀರಕ್ಕೆ ಬರುತ್ತಿರುವ **ರೋಗೋಪದ್ರವಗಳು, ಮೃತಿಗಳನು** = ಮರಣ, **ಪರಿಹರಿಸು** = ಇವುಗಳನ್ನು ನಿವಾರಿಸು. **ಕರುಣಾನಯನದಿಂದಲಿ ನೋಡಿ** = ನನ್ನಡೆ ನಿನ್ನ ಕೃಪಾಕಟಾಕ್ಷವೀಕ್ಷಣವನ್ನು ಬೀರು. ॥ ೧೯ ॥

## ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀ ವಿನಾಯಕನ್ನ ರೋಗ ಪರಿಹಾರ ಮಾಡೆಂದು ಪ್ರಾರ್ಥಿಸುತ್ತಾರೆ. ವಿಘ್ನರಾಜನೇ, ನಿನ್ನ ಸಂಬಿದವರಿಗೆ ವಿಶೇಷಾಕಾರವಾಗಿ ಅಹಂ ಮಮತಾ ಬಿಡಿಸ ಜಯಕೊಡತಕ್ಕವನೇ, ಸಮಸ್ತರಿಗೂ ಮಂಗಳವನ್ನು ಕೊಡತಕ್ಕವನೇ, ನಿನಗೆ ಜಯವಾಗಲಿ, ಜಯವಾಗಲಿ. ವೇದವಿದ್ಯವನ್ನು ಉಪದೇಶ ಮಾಡತಕ್ಕವನೇ, ವಿಶೇಷಾಕಾರವಾಗಿ ಉತ್ಪನ್ನನಾಗು. ಇನ್ನೂ ನೀನು ಹೋಗಲ್ಪಟ್ಟ ಅಂಜಿಕೆ, ದುಃಖ ಉಳ್ಳವ. ಮನೋಹರವಾದ ಶರೀರ ಉಳ್ಳವ. ಇಂಥಾ ನೀನು ಸಂಸಾರ ಸಮುದ್ರದೊಳಗೆ ಹುಟ್ಟೋಣವೇನು, ಮರಣ ಐದೋಣವೇನು, ದೇಹಕ್ಕೆ ರೋಗೋಪದ್ರವವೇನು–ಇವುಗಳ ಹೊಂದಿ ಬಳಲುವ ಭಗವದ್ಭಕ್ತರಿಗೆ ಕರುಣಾನಯನದಿಂದಲಿ ಅಂತಃಕರಣ ದಿಂದ ಒಲಿದವನಾಗಿ, ಅವರನ್ನ ಆದರದಿಂದ ನೋಡಿದವನಾಗಿ, ಪೂರ್ವೋಕ್ತ ತಾಪತ್ರಯಗಳನ್ನು ಪರಿಹರಿಸಿ, ಸಂರಕ್ಷಣ ಮಾಡೋವನಾಗು– ಎಂತ ಪ್ರಾರ್ಥಿಸಿದ್ದಾರೆ ಎಂತ ತಾತ್ಪರ್ಯ. ॥ ೧೯॥

೨. **ಭಾವಪ್ರಕಾಶಿಕೆ** :

ಎಲೈ ವಿಘ್ನೇಶ್ವರನೇ, ನಿನ್ನ ಜಯವನ್ನು ಲೋಕದಲ್ಲಿ ಪ್ರಸಿದ್ಧಿಪಡಿಸು. ಸ್ವತಃ ಜಯಶೀಲನಾದ ವಿಘ್ನೇಶ್ವರ ನಿನಗೆ ಜಯವಾಗಲಿ, ಜಯವಾಗಲಿ– ಎಂದು ನಾವು ಹರಸುವುದರಿಂದೇನು? ಭಾಗವತ ಶ್ರುತಿಗೀತೆಯ ಮೊದಲನೆಯ ಶ್ಲೋಕದಲ್ಲಿ–"ಜಯ ಜಯ ಜಹ್ಯಜಾಂ"–ಎಂಬಲ್ಲಿ ನಿತ್ಯ ಜಯಶೀಲನಾದ ಪರಮಾತ್ಮನನ್ನು ನಿನಗೆ ಜಯವಾಗಲಿ ಎಂದು ವೇದಗಳು ಆಶೀರ್ವಾದ ಮಾಡಲಿಲ್ಲ. ನಿನ್ನ ಜಯವನ್ನು ಲೋಕದಲ್ಲಿ ಪ್ರಸಿದ್ಧಿಪಡಿಸೆಂದು ಪ್ರಾರ್ಥಿಸಿದರೆಂದು ವ್ಯಾಖ್ಯಾನ ಮಾಡಿರುವರು. ಅದೇ ಅರ್ಥವನ್ನೇ ಇಲ್ಲಿ ತೆಗೆದುಕೊಳ್ಳಬೇಕು. ಆದುದರಿಂದ, ಜಯ–ನಿನ್ನ ಜಯವು ಜಯತು– ಜಯಶೀಲವಾಗಲಿ. ಅಂದರೆ, ಲೋಕಪ್ರಸಿದ್ಧಿಯಾಗಲಿ–ಎಂದು ಅರ್ಥವು ಬರೆಯಲ್ಪಟ್ಟತು. ತಾಪತ್ರಯವೆಂದರೆ ೧. ಮನೋವ್ಯಾಧಿ ೨. ದೈವ ಸಂಬಂಧವಾದ ತಾಪಗಳು ಕಾಲಾಕಾಲಗಳಲ್ಲಿ ಮಳೆ ಬೆಳೆಇಲ್ಲದೆ ಹೋಗುವಿಕೆ

-ಮೊದಲಾದ ದೈವಸಂಕಲ್ಪದಿಂದ ಪ್ರಾಪ್ತವಾಗುವ ದುಃಖಗಳು. ೩. ಪಾಂಚಭೌತಿಕವಾದ ಈ ದೇಹದಲ್ಲಿ ಕಣ್ಣು ಕಾಣದೇ ಹೋಗುವುದು, ಕಿವಿ ಕೇಳದೇ ಹೋಗುವದು-ಮೊದಲಾದ ಪಂಚಭೂತ ಸಂಬಂಧವಾದದು; ಬಂಧಗಳು; ಈ ಮೂರು ವಿಧವಾದ ದುಃಖಗಳಿಗೆ ತಾಪತ್ರಯವೆನ್ನುವರು. ಇವುಗಳನ್ನು ಪರಿಹಾರ ಮಾಡುವವನು. ಪ್ರಪಂಚಕ್ಕೆ ಮಂಗಳವನ್ನುಂಟು ಮಾಡುವವನು. ಸಕಲರಿಗೂ ವಿದ್ಯೆಯನ್ನು ಕೊಡುವವನು. ಅಂದರೆ, ವಿದ್ಯಾರಂಭದಲ್ಲಿ ಗಣಪತಿ ಪೂಜೆಯನ್ನು ಮಾಡಿ, ವಿದ್ಯಾ ಪ್ರಾರಂಭ ಮಾಡಿದರೆ, ವಿದ್ಯೆಗೆ ಮಧ್ಯೇ ವಿಛೇದ ಬರದೇ, ಸಂಪೂರ್ಣ ವಿದ್ಯೆಯು ಬರುವದೆಂಬ ತಾತ್ಪರ್ಯ. ವೀತಭಯನೆಂದರೆ, ಯಾವ ಕಾಲದಲ್ಲೂ ತನ್ನಕ್ಕಿಂತಲೂ ಉತ್ತಮರಾದವರನ್ನುಳಿದು, ಮಿಕ್ಕ ಜನರಿಂದ ಗಣಪತಿಗೆ ಯಾವ ಭಯವೂ ಇಲ್ಲವೆಂದರ್ಥ. ಪರಮಾತ್ಮನ ಭಯವು ಬ್ರಹ್ಮಾದಿಗಳಿಗೂ ಇರುವಾಗ ಗಣಪತಿಗೆ ಇಲ್ಲದೆ ಹೋಗುವುದಿಲ್ಲ. ಭಯವಿಲ್ಲದವನೆಂದರೆ, ನಾನು ಹೇಗೆ ನಮ್ಮಕ್ಕಿಂತಲೂ ಕಮ್ಮಿಯಾದ ಹುಲಿ, ಹಾವು ಮೊದಲಾದವುಗಳಿಂದ ಭಯಪಡುವೆವೋ ಹಾಗೆ, ತಾರತಮ್ಯದಲ್ಲಿ ಗಣಪತಿ ಕಿಂತಲೂ ಕಮ್ಮಿಯಾದ ಯಾವ ಜನರಿಂದಲೂ ಭಯವಿಲ್ಲದವನೆಂದರ್ಥ. ವಿಷಯಸಂಬಂಧಾದ ಯಾವ ಬಗೆಯಾದ ಶೋಕವು ಇಲ್ಲದವನು. ಲಂಬೋದರನಾಗಿಯೂ, ಗಜಮುಖನಾಗಿದ್ದರೂ, ಅವನ ಅಂಗಗಳು ನೋಡುವವರಿಗೆ ಮನೋಹರವಾಗಿಯೇ ಕಾಣುವುವು. ಆದುದರಿಂದ, ಚಾರ್ವಾಂಗನೆಂದರು. ಇಂತಹ ನಿನ್ನ ಜಯವು ಲೋಕಪ್ರಖ್ಯಾತವಾಗಿ ಯಾವಾಗಲೂ ಇರಲಿ! ಅಂದರೆ, ಜಯವನ್ನು ಲೋಕದಲ್ಲಿ ಪ್ರಖ್ಯಾತಿ ಪಡಿಸೆಂದು ಪ್ರಾರ್ಥನೆ ಎಂದರ್ಥ. ನೀನು ಕರುಣಾದೃಷ್ಟಿಯಿಂದ ನೋಡಿ, ನಿನ್ನ ಭಕ್ತರಿಗೆ ಸಂಸಾರದಲ್ಲಿ ಉಂಟಾಗುವ ಹುಟ್ಟುವಿಕೆ, ಸಾಯುವಿಕೆ, ರೋಗಗಳನನುಭವಿಸುವಿಕೆ-ಮೊದಲಾದವುಗಳನ್ನು ಪರಿಹರಿಸು-ಅಂದರೆ, ಮುಕ್ತಿಯನ್ನು ಕೊಡುವ ಯೋಗ್ಯತೆಯು ಗಣಪತಿಗಿಲ್ಲವಾದರೂ, ಪರಮಾತ್ಮನಲ್ಲಿ ಭಕ್ತಿಯನ್ನು ಕೊಟ್ಟು, ಮುಕ್ತಿಸಾಧನವನ್ನು ಉದ್ಧರಿಸಲೆಂಬ ತಾತ್ಪರ್ಯ. ॥ ೧೯ ॥

**ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

ಜಯ–ಇತಿ ॥ ಕಡು–ಬಹು. ॥ ೧೯॥

## ೫. ಶ್ರೀಗುರುಹೃದಯಪ್ರಕಾಶಿಕೆ

ತಾಪತ್ರಯಪರಿಹಾರಕನೇ. ಜಗನ್ಮಂಗಳನೆ ಜಯ ಜಯ. ನಿನ್ನ ಉತ್ಕೃಷ್ಟತೆಯನ್ನು ತೋರಿಸು. ವಿಘ್ನೇಶ್ವರನೇ ಜಯ ಜಯ. ವಿದ್ಯಾಪ್ರದಾಯಕನೆ, ಲೋಕಭಯರಹಿತನೆ ಜಯ ಜಯ. ಚಾರ್ವಾಂಗನೆಂಬ ಮನೋಹರ ರೂಪನೆ ಜಯ ಜಯ. ಭವವೆಂಬ ಪ್ರಪಂಚದಲ್ಲಿ ಭಕ್ತರಿಗೆ ಜ್ಞಾನವನ್ನು ಕೊಟ್ಟು ಜನ್ಮ, ಆಮಯವೆಂಬ ಹುಟ್ಟೋಣ, ರೋಗಮೃತಿ ಯೆಂಬ ಮರಣಾದಿ ದುಃಖಗಳನ್ನು ಪರಿಹರಿಸು. ಕರುಣಾಕಟಾಕ್ಷದಿಂದ ನೋಡು. ॥ ೧೯ ॥

### ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀವಿಘ್ನೇಶ್ವರನು ಯಾವಾಗಲೂ ಜಯಶೀಲನೇ. ಆತನಿಗೆ ಅಮಂಗಳವಿಲ್ಲ. ಆತನಿಗೆ ಜಯವಾಗಲಿ–ಎಂದರೆ, ನಿನ್ನ ಜಯವನ್ನು (ಸಿದ್ಧಿ ಸಾಧನ) ಲೋಕದಲ್ಲಿ ಪ್ರಸಿದ್ಧಪಡಿಸೆಂದು ತಾತ್ಪರ್ಯ. ಜಯ–ನಿನ್ನ ಜಯವು (ಸಿದ್ಧಿಯು) ಜಯವು–ಜಯಶೀಲವಾಗಲಿ. ಸಮಗ ಕಾರ್ಯಗಳಲ್ಲಿ ಜಯಪ್ರದನಾಗೆಂದು ಪ್ರಾರ್ಥನೆ.

೨. ಅನಂತವಿಘ್ನಗಳನ್ನು ಸಜ್ಜನರಿಗೆ ಪರಿಹಾರ ಮಾಡುವುದರಿಂದ, **ವಿಘ್ನೇಶ**–ವಿಂತನಾಮ (ಸಕಲ ವಿಘ್ನಪರಿಹಾರಕನು).

೩. ಆದಿಭೌತಿಕ – ಆದಿದೈವಿಕ – ಆಧ್ಯಾತ್ಮಿಕ – ಎಂಬ ಮೂರು ವಿಧವಾದ ತಾಪಗಳಿಗೆ **ತಾಪತ್ರಯಗಳೆಂದು** ಹೆಸರು.

ಪಂಚಭೂತಗಳಿಂದ ಉಂಟಾಗುವ ನಾನಾ ವಿಧವಾದ ಬಾಧೆಗಳು–ದೇಹಕ್ಕೆ ಒದಗುವ ರೋಗಾದ್ಯುಪದ್ರವಗಳು–ದೈವಸಂಕಲ್ಪದಂತೆ ಆಕಸ್ಮಿಕವಾಗಿ ಬರುವ ತಾಪಗಳು. ಇವೆಲ್ಲವೂ ಸತ್ಸಾಧನೆಗೆ ಪ್ರತಿಬಂಧರೂಪದಲ್ಲಿರುವ ವಿಘ್ನಗಳು. ತಾಪತ್ರಯರೂಪವಾದ ಸಕಲ

ವಿಘ್ನಗಳನ್ನು ಪರಿಹರಿಸಿ, ತನ್ನ ಭಕ್ತರನ್ನು ಸಂರಕ್ಷಿಸುವವನು-ವಿನಾಯಕ ಮೂರ್ತಿಯು.

೪. ಜಗತ್ತಿಗೇ ಮಂಗಳವನ್ನುಂಟು ಮಾಡುವುದರಿಂದ, **ವಿಶ್ವಮಂಗಳನು.** ವಿಶ್ವಂಭರೋಪಾಸಕನು ಮತ್ತು ವಿಘ್ನಪರಿಹಾರದ್ವಾರಾ, ಶುಭಪ್ರದನು.

೫. "ವಿವಾಹೇ ವಿದ್ಯಾರಂಭೇ"- ಎಂಬ ಶಾಸ್ತ್ರನಿಯಮದಂತೆ, ಆದಿಪೂಜಿತನು. ಶ್ರೀಹರಿಯ ಅನಂತಗುಣಗಳನ್ನು ಸ್ತೋತ್ರಗೈಯ್ಯುವ ವೇದಗಳನ್ನು ಅಧ್ಯಯನ ಮಾಡುವುದಕ್ಕೆ ಸಿದ್ಧಿಪ್ರದನು. ಇದರಿಂದ, **ವಿದ್ಯಾಸಿದ್ಧ ಗಣಪತಿಯು.**

೬. ತನಗಿಂತ ಅವರರಾದ ಯಾರಿಂದಲೂ ಅವನಿಗೆ ಯಾವಾಗಲೂ ಭಯವಿಲ್ಲ. ತಜ್ಜನ್ಯವಾದ ದುಃಖವಿಲ್ಲ, ಇದರಿಂದ, **ವೀತಭಯಶೋಕನು.**

೭. ಪರಮ ಸುಂದರವಾದ ಶರೀರವುಳ್ಳವನು. ಅವನ ಶರೀರಗತ ಅಂಗಾಂಗಗಳೆಲ್ಲವೂ ಮನೋಹರವಾಗಿವೆ. ಇದರಿಂದ, **ಚಾರ್ವಂಗನು** (ಚಾರು+ಅಂಗ).

೮. ನನ್ನೆಡೆಗೆ ಕೃಪಾದೃಷ್ಟಿಯಿಂದ ಈಕ್ಷಿಸು. ನಿನ್ನ ದಯ ಸದಾ ನಮ್ಮ ಮೇಲಿರಲಿ.

೯. ನಿನ್ನ ಕೃಪಾಕಟಾಕ್ಷವೀಕ್ಷಣದಿಂದ, ಜನನ-ಮರಣ ಜೀವನದ ಉದ್ದಕ್ಕೂ ಶರೀರಕ್ಕೆ ಬಂದೊದಗುತ್ತಿರುವ ನಾನಾ ಪ್ರಕಾರಗಳಾದ ರೋಗಗಳು-ಉಪದ್ರವರೂಪವಾದ ಪೀಡೆಗಳು, ಮಾನಸಿಕ ವ್ಯಾಧಿಗಳನ್ನು ನಿವಾರಿಸಿ, ನಿನ್ನ ಭಕ್ತರಿಗೆ ಸಂಸಾರದಿಂದ ಮುಕ್ತರಾಗುವ ಸನ್ಮಾರ್ಗವನ್ನು ತೋರಿಸೆಂದು ಪ್ರಾರ್ಥಿಸುತ್ತಾರೆ-ದಾಸಾರ್ಯರು. ॥ ೧೯ ॥

## ಪದ್ಯ–೨೦

**ಮೂಲ :**

**ಕಡುಕರುಣಿ ನೀನೆಂದರಿದು ಹೇ ।**
**ರೊಡಲ ನಮಿಸುವೆ ನಿನ್ನಡಿಗೆ ಬೆಂ ।**
**ಬಿಡದೆ ಪಾಲಿಸು ಪರಮ ಕರುಣಾಸಿಂಧು ಎಂದೆಂದು ॥**
**ನಡು ನಡುವೆ ಬರುತಿಪ್ಪ ವಿಘ್ನವ ।**
**ತಡೆದು ಭಗವನ್ನಾಮ ಕೀರ್ತನೆ ।**
**ನುಡಿದು ನುಡಿಸೆನ್ನ ಪ್ರತಿ ದಿವಸದಲಿ ಮರೆಯದಲೆ ॥ ೨೦ ॥**

**ಅವತರಣಿಕೆ :**

ಅಡಿಗಡಿಗೆ ಬಂದು ಒದಗುತ್ತಿರುವ, ಸಕಲ ವಿಧವಾದ ವಿಘ್ನಗಳನ್ನು ಪರಿಹರಿಸಿ, ಭಗವನ್ನಾಮ ಸಂಕೀರ್ತನೆಯನ್ನು, ಎನ್ನ ದ್ವಾರಾ ಮಾಡಿಸೆಂದು ಪ್ರಾರ್ಥಿಸುತ್ತಾರೆ. ॥ ೨೧ ॥

**ಪ್ರತಿಪದಾರ್ಥ :**

**ಕಡುಕರುಣಿ** = ಭಗವದ್ಭಕ್ತರಲ್ಲಿ ಅತ್ಯಂತ ಕಾರುಣ್ಯ ಉಳ್ಳವನೇ, **ನೀನೆಂದು ಅರಿದು** = ನೀನೆಂದು ತಿಳಿದು, **ಹೇರೊಡಲ** = ಹೇರಂಬ ನಾಮಕನಾದ ಎಲೈ ವಿಘ್ನರಾಜನೇ, **ನಿನ್ನಡಿಗೆ ನಮಿಸುವೆ** = ನಿನ್ನ ಚರಣಗಳಿಗೆ ನಮಸ್ಕರಿಸುತ್ತೇನೆ. **ಪರಮಕರುಣಾಸಿಂಧು** = ಅತ್ಯಂತ ದಯಾಸಾಗರನೇ, **ಎಂದೆಂದು ಪಾಲಿಸು** = ಸದಾ ನನ್ನನ್ನು ಸಂರಕ್ಷಿಸು. **ನಡುನಡುವೆ** = ಭಗವತ್ಸೇವೆಗೆ ಮಧ್ಯೆ ಮಧ್ಯೆ, **ಬರುತಿಪ್ಪ** = ಬಂದೊದಗುತ್ತಿರುವ, **ವಿಘ್ನವ ತಡೆದು** = ಪ್ರತಿಬಂಧಕಗಳನ್ನು ಪರಿಹರಿಸಿ, **ಭಗವನ್ನಾಮ ಕೀರ್ತನೆ** = ಶ್ರೀಹರಿಯ ನಾಮಕೀರ್ತನೆಯನ್ನು, **ನುಡಿದು** = ಬಿಂಬನಾದ, ಪರಮಾತ್ಮನಿಂದ ನುಡಿದು, **ನುಡಿಸೆನ್ನ** = ನಂತರ, ನನ್ನ ಮುಖದ್ವಾರಾ ನುಡಿಸುವವನಾಗು. **ಪ್ರತಿದಿವಸದಲಿ** = ಪ್ರತಿದಿನವಲ್ಲೂ, **ಮರೆಯದಲೆ** = ಮರೆಯದ ಹಾಗೆ ಭಗವತ್ಸೇವಾ ಮಾಡಿಸುವವನಾಗು. ॥ ೨೦ ॥

## ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀವಿನಾಯಕನನ್ನ ಭಗವನ್ನಾಮಸ್ಮರಣೆ ಮಾಡಿಸೆಂದು ಪ್ರಾರ್ಥಿಸುತ್ತಾರೆ. ಭಗವದ್ಭಕ್ತರಲ್ಲಿ ಅತ್ಯಂತವಾದ ಕರುಣಾವುಳ್ಳವನು ನೀನು–ಎಂತ ತಿಳಿದು, ಎಲೈ ವಿಘ್ನರಾಜನೇ, ನನ್ನ ದೇಹೇಂದ್ರಿಯಾದಿಗಳನ್ನು ನಿನ್ನ ಪಾದಗಳಿಗೆ ಅರ್ಪಿಸಿ ನಮಸ್ಕಾರ ಮಾಡುವೆ. ನನ್ನ ಬಿಡದೆ ಸಂರಕ್ಷಣ ಮಾಡು. ನೀನು ನಿನ್ನ ಭಕ್ತರಲ್ಲಿ ಅತ್ಯಂತವಾದ ಕರುಣಾ ಉಳ್ಳವನು. ಎಂದೆಂದಿಗಾದರೂ ಭಗವತ್ಸೇವಾಕ್ಕೆ ಮಧ್ಯ ಮಧ್ಯೆ ಬರತಾ ಇರತಕ್ಕ ಪ್ರತಿಬಂಧಕಗಳ ಪರಿಹಾರ ಮಾಡಿ, ಶ್ರೀಪರಮಾತ್ಮನ ನಾಮಕೀರ್ತನೆಯನ್ನು ಬಿಂಬನಾದ ಪರಮಾತ್ಮನಿಂದ ನುಡಿದು, ಅನಂತರ ನನ್ನಿಂದ ನುಡಿಸೋವ ನಾಗು. ದಿನ ಪ್ರತಿದಿನವಲ್ಲೂ ಮರೀಧಾಂಗೆ, ಶ್ರೀಪರಮಾತ್ಮನ ನಾಮೋಚ್ಚಾರಣೆ ಮಾಡಿಸು–ಎಂತ ಪ್ರಾರ್ಥನ ಮಾಡಿದ್ದಾರೆಂತ ತಾತ್ಪರ್ಯ.

**ವಿಶೇಷಾರ್ಥ–ಹೇರೊಡಲ–ಎಂದರೆ** ಲಂಬೋದರನೇ–ಎಂತಲೂ **ಅರ್ಥ.** ॥ ೨೦ ॥

**೨. ಭಾವಪ್ರಕಾಶಿಕೆ :**

ಎಲೈ ಲಂಬೋದರನೇ! ನೀನು ಪರಮ ದಯಾಳುವೆಂದು ತಿಳಿದು, ನಿನ್ನ ಪಾದಕಮಲಗಳಿಗೆ ನಮಸ್ಕರಿಸುವೆನು. ಪರಮ ಕರುಣಾಸಮುದ್ರನಾದ ನೀನು ನನ್ನನ್ನು ಕ್ಷಣಬಿಡದೆ ಹಿಂಬಾಲಿಸು. ನಾನು ಮಾಡುವ ಸತ್ಕರ್ಮಗಳಿಗೆ ಆಗಿಂದಾಗ್ಗೆ ಬರುತ್ತಿರುವ ವಿಘ್ನಗಳನ್ನು ಪರಿಹರಿಸಿ, ಪ್ರತಿ ದಿವಸದಲ್ಲೂ ಮರಿಯದೆ, ನನ್ನೊಳಗಿದ್ದು, ಭಗವನ್ನಾಮ ಸಂಕೀರ್ತನೆಯನ್ನು ಮಾಡಿ ನನ್ನಿಂದಲೂ ಮಾಡಿಸು. ॥ ೨೦ ॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :**

"ಕಡು"–ಇತಿ ॥ "ಬಹು", "ಹೇರೊಡಲ"–ಮಹೋದರ. ॥ ೨೦ ॥

## ಕನ್ನಡಾರ್ಥ

ಕಡು–ಬಹಳ. "ಹೇರೊಡಲ"–ಈ ಪದಕ್ಕೆ "ಮಹೋದರ". (ದೊಡ್ಡ ಹೊಟ್ಟೆಯುಳ್ಳವನು) ಹೀಗೆ ಅರ್ಥ. ॥೨೦ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಹೇರೊಡಲನೆಂದರೆ–ಲಂಬೋದರನೇ, ಕಡುಕರುಣಿ ನೀನು ಎಂದು ತಿಳಿದು, ನಿನ್ನ ಪಾದಗಳಿಗೆ ನಮಿಸುವೆ. ಪರಮ ಕರುಣಾಸಮುದ್ರನೇ, ಸದಾ ಬೆನ್ನು ಬಿಡದೆ ನನ್ನನ್ನು ರಕ್ಷಿಸು. ನಡುನಡುವೆ–ಅಂದರೆ, ಮಧ್ಯಮಧ್ಯದಲ್ಲಿ ಬರತಕ್ಕ ವಿಘ್ನವನ್ನು ಸದಾ ಪರಿಹರಿಸಿ, ಭಗವಂತನಾದ ಶ್ರೀಹರಿಯ ನಾಮಕೀರ್ತನೆಯನ್ನು ನನ್ನಲ್ಲಿ ನುಡಿದು–ಅಂದರೆ, ವ್ಯಕ್ತ ಮಾಡಿ ನುಡಿಸು ಮರೆಯದೆ. ॥ ೨೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ತನ್ನನ್ನು ಭಕ್ತಿಪೂರ್ವಕವಾಗಿ ಭಜಿಸುವ ಭಗವದ್ಭಕ್ತರ ವಿಷಯದಲ್ಲಿ ಅತ್ಯಂತ ಕರುಣವುಳ್ಳವನಾದ್ದರಿಂದ, **ಕಡು ಕರುಣಿಯು**. (ಕಡು–ಹೆಚ್ಚಾದ, ಅಂದರೆ, ಶ್ರೇಷ್ಠ) ಅಂದರೆ, ಕರುಣಿಗಳಲ್ಲಿ ಉತ್ತಮನೆಂದರ್ಥ.

೨. ಶ್ರೀವಿನಾಯಕನ ಉದರವು ಡೊಳ್ಳಾಗಿದೆ. ವಿಶ್ವಂಭರನಾಮಕ ಶ್ರೀಪರಮಾತ್ಮನು ಅಖಿಳಕೋಟಿ ಬ್ರಹ್ಮಾಂಡಗಳನ್ನು ತನ್ನ ಉದರದಲ್ಲಿ ಧರಿಸಿದ್ದಾನೆ. ವಿಶ್ವಂಭರೋಪಾಸಕನಾದ ಶ್ರೀವಿಘ್ನೇಶ್ವರನಿಗೆ **ಲಂಬೋದರ ನೆಂಬ ನಾಮ**. ಇದರಿಂದ, **ಹೇರೊಡಲ** ಎಂದಿದ್ದಾರೆ. (ಹೇರ್+ಒಡಲ = ಡೊಳ್ಳು ಹೊಟ್ಟೆ, ದಪ್ಪನಾಗಿರುವ ಉದರಪ್ರದೇಶ).

೩. ಕಡುಕರುಣಿಯಾದ ಹೇರೊಡಲನೇ, ನಿನ್ನ ಚರಣಕಮಲಗಳಿಗೆ ಸಾಷ್ಟಾಂಗ ನಮಿಪೆವು. ನನ್ನ ಬೆನ್ನು ಬಿಡದೆ, ಅಂದರೆ, ಸದಾ ಸರ್ವಕಾಲದಲ್ಲೂ ನಮ್ಮ ಸಂರಕ್ಷಕನಾಗಿರು. ಏಕೆಂದರೆ, ನೀನು ಪರಮ ಕರುಣಾಸಿಂಧು, ಅಂದರೆ ಶ್ರೇಷ್ಠನಾದ ದಯಾಸಾಗರನು. ನಿನ್ನ ಅನುಗ್ರಹದ ರಕ್ಷೆ ಯಾವಾಗಲೂ ನನ್ನ ಮೇಲಿರಲಿ.

೪. ಶ್ರೀಶನ ಪರಮಾನುಗ್ರಹ ಪ್ರಾಪ್ತಿಗೆ ಕಾರಣವಾದ ಸತ್ಸಾಧನಾ ಮಾರ್ಗದಲ್ಲಿ ಬಾರಿಬಾರಿಗೂ ಅನೇಕ ಪ್ರಕಾರವಾಗಿ ವಿಘ್ನಗಳು ಬಂದೊದಗುತ್ತಲೇ ಇರುವುವು. ಈ ವಿಘ್ನಗಳು ಸತ್ಕರ್ಮಾನುಷ್ಠಾನಕ್ಕೆ ಪ್ರತಿಬಂಧಕ ಸಾಮಗ್ರಿಗಳು. ಅವುಗಳನ್ನು ನಿವಾರಿಸಿ, **(ವಿಘ್ನದ ತಡೆದು)** ನನ್ನ ಮನಸ್ಸನ್ನು ಸದಾ ಶ್ರೀಹರಿಯ ನಾಮಸ್ಮರಣೆಯಲ್ಲಿ ಆಸಕ್ತವಾಗಿರುವಂತೆ ಮಾಡು.

ನನ್ನ ಮುಖದಿಂದ ಭಗವನ್ನಾಮಕೀರ್ತನೆಯ ತರಂಗಿಣಿಯು ನಿರಂತರ ಪ್ರವಹಿಸುತ್ತಿರುವಂತೆ ಅನುಗ್ರಹ ಮಾಡು.

ವಿದ್ಯಾಸಿದ್ಧಿ ಪ್ರದನಾದ ನೀನು, ತತ್ತ್ವಪತಿಯಾಗಿ ನನ್ನಲ್ಲಿ ನಿಂತು, ಶ್ರೀಹರಿವಾಯುಗಳ ಪ್ರೇರಣಾನುಸಾರ, ನೀನು ಪ್ರೇರಿಸಿ, ಭಗವನ್ನಾಮ ಸಂಕೀರ್ತನೆಯನ್ನು ನುಡಿದು, ಪ್ರತಿದಿನದಲ್ಲಿ ನುಡಿಸೆಂದು ಪ್ರಾರ್ಥಿಸುತ್ತಾರೆ- ಆ ಪಾರ್ವತೀ ಪುತ್ರನನ್ನು. ॥ ೨೦ ॥

## ಪದ್ಯ–೨೧

**ಮೂಲ :**

**ಏಕವಿಂಶತಿ ಪದಗಳೆನಿಸುವ ।**
**ಕೋಕನದ ನವಮಾಲಿಕೆಯ ಮೈ ।**
**ನಾಕಿತನಯಾಂತರ್ಗತ ಶ್ರೀಪ್ರಾಣಪತಿಯನಿಪ ॥**
**ಶ್ರೀಕರ ಜಗನ್ನಾಥವಿಠ್ಠಲ ।**
**ಸ್ವೀಕರಿಸಿ ಸ್ವರ್ಗಾಪವರ್ಗದಿ ।**
**ತಾ ಕೊಡುವ ಸೌಖ್ಯಗಳ ಭಕ್ತರಿಗಾವ ಕಾಲದಲಿ ॥ ೨೧ ॥**

**ಅವತರಣಿಕೆ :**

ಪ್ರಸಕ್ತ ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾ, ದಾಸವರ್ಯರು ೨೧ ಪದ್ಯಗಳೆಂಬ ಕಮಲಪುಷ್ಪಗಳ ನೂತನ ಮಾಲಿಕೆಯನ್ನು ಮೈನಾಕಿತನಯಾಂತರ್ಗತ ಶ್ರೀವಾಯ್ವಂತರ್ಗತ ಶ್ರೀವಿಶ್ವಂಭರಾಭಿನ್ನ ಶ್ರೀಜಗನ್ನಾಥವಿಠ್ಠಲನಿಗೆ ಭಕ್ತಿಪೂರ್ವಕವಾಗಿ ಅರ್ಪಿಸುತ್ತಾರೆ. ॥ ೨೧ ॥

**ಪ್ರತಿಪದಾರ್ಥ :**

**ಏಕವಿಂಶತಿ** = ಇಪ್ಪತ್ತೊಂದು ಸಂಖ್ಯಾಕವಾದ, **ಪದಗಳೆನಿಸುವ** = ಪದ್ಯಗಳೆಂಬ ಶ್ರೀ ವಿಘ್ನೇಶ್ವರನ ಸ್ತೋತ್ರರೂಪವಾದ, **ಕೋಕನದ** = ೨೧ ಕಮಲಪುಷ್ಪಗಳ, **ನವಮಾಲಿಕೆಯ** = ನೂತನವಾದ ಮಾಲೆಯನ್ನು (ಕಮಲಹಾರ), **ಮೈನಾಕಿತನಯ** = ಹಿಮಾಚಲನ ಪತ್ನಿ ಮೇನಕೆಯ, ಪುತ್ರಿಯಾದ ಪಾರ್ವತಿಯ ಪುತ್ರನಾದ ವಿನಾಯಕನ, (ಮೈನಾಕಿ–ಮೇನಕೆಯ) **ಅಂತರ್ಗತ** = ಅಂತರ್ಯಾಮಿಯಾದ, **ಶ್ರೀ** = ಶ್ರೀಲಕ್ಷ್ಮೀದೇವಿಯರಿಗೆ, **ಪ್ರಾಣ** = ಶ್ರೀವಾಯುದೇವರಿಗೆ, **ಪತಿ** = ಪ್ರಭು, **ಎನಿಪ** = ಎಂತ ಕರೆಯಿಸತಕ್ಕ, **ಶ್ರೀಕರ** = ಮಹದೈಶ್ವರ್ಯಪ್ರದನಾದ, **ಜಗನ್ನಾಥವಿಠ್ಠಲ** = ಜಗತ್ಪತಿಯಾದ ದಾಸರ ಅಂಕಿತನಾಮ ರೂಪವಾದ ವಿಠ್ಠಲಮೂರ್ತಿಯು, **ಸ್ವೀಕರಿಸಿ** = ಅರ್ಪಿತ ಮಾಲಿಕೆಯನ್ನು ತೆಗೆದುಕೊಂಡು,

ಭಕ್ತರಿಗೆ = ಈ ಸ್ತೋತ್ರವನ್ನು ಪಠಿಸುವ ಭಗವದ್ಭಕ್ತರಿಗೆ, ಆವಕಾಲದಲಿ = ಸದಾಕಾಲವೂ, ಸ್ವರ್ಗ = ಸ್ವರ್ಗ ಸುಖಗಳನ್ನೂ, (ಸ್ಥಿತಿಕಾಲದಲ್ಲಿ) ಅಪವರ್ಗದಿ = ವೈಕುಂಠಾದಿ ಪರಲೋಕಗಳಲ್ಲಿ ನಿತ್ಯಾನಂದ ರೂಪವಾದ ಮುಕ್ತಿಸುಖ ವನ್ನು, (ಇಹಪರಗಳಲ್ಲಿ ಸುಖಪ್ರದನಾಗಿ), ಈ ಕೊಡುವ = ಸ್ವಯಂ ನೀಡುವವನಾಗುತ್ತಾನೆ. ॥ ೨೧ ॥

॥ ೨೮ನೆಯ ಸಂಧಿಗತ ೨೧ನೆಯ ಈ ಅಂತ್ಯಪದ್ಯದ ಪ್ರತಿಪದಾರ್ಥ ಸಮಾಪ್ತಿ ॥
॥ ಶ್ರೀ ಕೃಷ್ಣಾರ್ಪಣಮಸ್ತು ॥

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಈ ಸ್ತೋತ್ರ ಶ್ರೀ ಭಗವಂತನಿಗೆ ಅರ್ಪಿತವಾದದ್ದೆಂದು ಹೇಳತಾರೆ.

ಇಪ್ಪತ್ತೊಂದು ಸಂಖ್ಯಾಕವಾದ ಶ್ಲೋಕಗಳು–ಎನಿಸುವ ವಿಘ್ನರಾಜ ಸ್ತೋತ್ರರೂಪವಾದ ಇಪ್ಪತ್ತೊಂದು ಕಮಲಪುಷ್ಪಗಳ ನೂತನವಾದ ಮಾಲಾವನ್ನು ಹಿಮಾಚಲನ ಪತ್ನಿ ಮೇನಕೆ, ಇವಳ ಪುತ್ರಿ ಪಾರ್ವತೀ, ಈ ಪಾರ್ವತೀಪುತ್ರನಾದ ವಿನಾಯಕನ ಅಂತರ್ಗತನಾದ ಶ್ರೀಲಕ್ಷ್ಮೀ ದೇವೇರಿಗೆ, ವಾಯುದೇವರಿಗೆ ಸ್ವಾಮಿ–ಎಂತ ಕರಸತಕ್ಕ ಮಹದೈಶ್ವರ್ಯ ವನ್ನು ಕೊಡತಕ್ಕಂಥಾ, ಜಗತ್ತಿಗೇ ಸ್ವಾಮಿಯಾದ ವಿಠ್ಠಲರೂಪಿಯಾದ ಶ್ರೀ ಪರಮಾತ್ಮ ಈ ಮಾಲೆಯನ್ನು ಸ್ವೀಕರಿಸಿ, ಈ ಸ್ತೋತ್ರವನ್ನು ಭಕ್ತಿಪೂರ್ವಕ ಪಠನಾ ಮಾಡುವಂಥಾ, ತನ್ನ ಭಕ್ತರಿಗೆ ಯಾವಕಾಲದಲ್ಲೂ, ವಿಘ್ನಗಳು ಬಾರದಂತೆ ಮಾಡಿ, ಜ್ಞಾನಭಕ್ತಿ ಐಶ್ವರ್ಯ ಅತಿಶಯವಾಗಿ, ಅಪಕ್ವದಶಾದಲ್ಲಿ ಸ್ವರ್ಗಸುಖವೇನು, ಪಕ್ವದಶಾದಲ್ಲಿ ವೈಕುಂಠಾದಿ ಲೋಕಗಳಲ್ಲೇನು, ಇನ್ನೂ ಐಹಿಕದಲ್ಲಿ ಐಶ್ವರ್ಯಾದಿಗಳೇನು, ಇತ್ಯಾದಿ ಸುಖಗಳ ಕೊಡೋದ ನಾಗತಾನೆ–ಎಂತ ತಾತ್ಪರ್ಯ. ॥ ೨೧ ॥

॥ ಶ್ರೀಮತ್ಸಕಲಪರಮಹಂಸಪರಿವ್ರಾಜಕಾಚಾರ್ಯಶ್ರೀಮತ್ಸಂಕರ್ಷಣತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತಸಾರ ಕನ್ನಡ ಭಾಷಾ ಟೀಕಾಯಾಂ ವಿಘ್ನೇಶ್ವರ ಸ್ತೋತ್ರ ಸಂಧಿವ್ಯಾಖ್ಯಾನಂ ಸಂಪೂರ್ಣಂ ॥

೨. **ಭಾವಪ್ರಕಾಶಿಕೆ :**

ಗಣಪತಿಯು, ಯಾವಾಗಲೂ ೨೧ ಸಂಖ್ಯೆಯಲ್ಲಿ ಪ್ರೀತಿಯುಳ್ಳವ ನೆಂದು ಅವನ ಪೂಜಾಕಲ್ಪದಿಂದ ಗೊತ್ತಾಗುವುದು. ಹೇಗೆಂದರೆ, ೨೧ ನಾಮಗಳಿಂದ ದೂರ್ವಾಯುಗ್ಮವನ್ನು (ಗರಿಕೆ ಹುಲ್ಲುಗಳನ್ನು) ಸಮರ್ಪಿಸ ಬೇಕೆಂತಲೂ, ೨೧ ಮೋದಕಗಳನ್ನು ನೈವೇದ್ಯಕ್ಕೋಸ್ಕರ ಮಾಡ ಬೇಕೆಂತಲೂ, ಹೇಳಿರುವರು. ಅದರಂತೆ, ದಾಸಾರ್ಯರು ಗಣಪತಿ ಸ್ತೋತ್ರ ರೂಪವಾದ ೨೧ ಪದ್ಯಗಳನ್ನು ರಚಿಸಿ, ಈ ಪದ್ಯಗಳೇ ಕೆಂಪು ಕಮಲಗಳು. ಇವುಗಳಿಂದ ರಚಿತವಾದ ಈ ಹೊಸಮಾಲಿಕೆಯನ್ನು ಶ್ರೀಗಣಪತ್ಯಂತರ್ಗತ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಜಗನ್ನಾಥ ವಿಠಲನು ಸ್ವೀಕರಿಸಿ, ತನ್ನ ಭಕ್ತರಿಗೆ ಸರ್ವಕಾಲದಲ್ಲೂ, ಸ್ವರ್ಗದಲ್ಲೂ ಮುಕ್ತಿಯಲ್ಲೂ ಸಹ ದೇವತಾಯೋಗ್ಯವಾದ ಸೌಖ್ಯವನ್ನು ಕೊಡುವನು. ॥ ೨೧ ॥

೪. **ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :**

ಉಪಸಂಹರತಿ–"ಏಕ" ಇತಿ. ॥ "ಕೋಕನದಂ"–ಪದ್ಮಮ್. ॥ ೨೧ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಹೀಗೆ ಇಪ್ಪತ್ತೊಂದು ಪದಗಳೆನಿಸುವ ಕೋಕನದವೆಂಬ ಕೆಂದಾವರೆಯ ನೂತನಮಾಲೆಯನ್ನು ಮೈನಾಕಿತನಯನೆಂಬ ಪಾರ್ವತೀಪುತ್ರ ವಿಘ್ನೇಶ್ವರನ ಅಂತರ್ಯಾಮಿ ಪ್ರಾಣಪತಿಯೆಂದು ಕರೆಸುವ ಶ್ರೀಕರ ಜಗನ್ನಾಥವಿಠ್ಠಲಸ್ವಾಮಿ ಇದನ್ನು ಸ್ವೀಕರಿಸಿ, ಸ್ವರ್ಗದಲ್ಲೂ ಅಪವರ್ಗ ವೆಂಬ ಮೋಕ್ಷದಲ್ಲೂ ಸದಾ ಸೌಖ್ಯವನ್ನುಭಕ್ತರಿಗೆ ಸದಾ ಕೊಡುವನು.

॥ ಇಂತು ಗುರುಹೃದಯಪ್ರಕಾಶಿಕಾ–ಎಂಬ ವ್ಯಾಖ್ಯಾನ ಸಹಿತ ಶ್ರೀಹರಿಕಥಾಮೃತಸಾರದಲ್ಲಿ ವಿಘ್ನೇಶ್ವರಸ್ತೋತ್ರಸಂಧಿ–ಎಂಬ ೨೮ನೇ ಸಂಧಿ ಸಂಪೂರ್ಣಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಏಕವಿಶಂತಿ–೨೧ ಸಂಖ್ಯಾಕವಾದ ಪ್ರಸಕ್ತ ವಿಘ್ನೇಶ್ವರ ಸ್ತೋತ್ರಸಂಧಿಯಲ್ಲಿ ೨೧ ಪದ್ಯಗಳಿವೆ. ೨೧ ಎಂಬ ಸಂಖ್ಯೆ ಗಣಪತಿಗೆ ಅತ್ಯಂತ ಇಷ್ಟವಾದದ್ದು. ನಮ್ಮ ಶರೀರಗತ ಮನಸ್ಸು, ಪಂಚ ಜ್ಞಾನೇಂದ್ರಿಯಗಳು – ಪಂಚಕರ್ಮೇಂದ್ರಿಯಗಳು – ಪಂಚಭೂತಗಳು–ತನ್ಮಾತ್ರಾ ಪಂಚಕ–ಎಲ್ಲಾ ಸೇರಿ ಆಗುವ ಸಂಖ್ಯೆ ೨೧. ಈ ತತ್ತ್ವಗಳಲ್ಲಿ ನೀನಿದ್ದು, ತದಂತರ್ಯಾಮಿ ವಿಶ್ವಂಭರನ ಸೇವೆಯನ್ನು ಅನುಗ್ರಹಿಸುವವನು–ಅಂಬರಾಧಿಪನೂ, ತತ್ವಪತಿಯೂ ಆದ ಅಂಬಿಕಾತನಯನು.

ಅಲ್ಲದೆ, ೨೧ ಕುಭಾಷ್ಯಗಳನ್ನು ಖಂಡಿಸಿ, ತದ್ವಾರಾ ಸತ್ಸಿದ್ಧಾಂತ ಸ್ಥಾಪನಾಚಾರ್ಯರಾದ ಆಚಾರ್ಯ ಮಧ್ವರ ತತ್ತ್ವಾರ್ಥಗಳನ್ನು ಜೀವರಿಗೆ ತಿಳಿಸಿ ಕೊಡಬಲ್ಲ ಅಧಿಕಾರಿಯು.

೨. ಪ್ರಸಕ್ತಸಂಧಿಯ ವಿಷಯವು–**ಶ್ರೀ ವಿಘ್ನೇಶ್ವರ ಸ್ತೋತ್ರಸಂಧಿ.** ಇದರಲ್ಲಿ ರಚಿತವಾಗಿರುವ ೨೧ ಪದ್ಯಗಳು–೨೧ ಕಮಲಪುಷ್ಪಗಳಂತಿವೆ. ನೂತನವಾದ ೨೧ ಕಮಲಪುಷ್ಪಗಳಿಂದ ಮಾಡಿದ ಹೊಸ ಮಾಲಿಕೆಯನ್ನು ಗಣೇಶಾಂತರ್ಗತ ವಿಶ್ವಂಭರಮೂರ್ತಿಗೆ ಅರ್ಪಿಸುತ್ತಿದ್ದೇನೆ–ಎಂತ ದಾಸರಾಯರ ಅಂತರ್ಭಾವವು.

೩. ಹಿಮಾಚಲೇಂದ್ರನ ಪತ್ನಿ ಮೇನಕೆ. ಆ ಮೇನಕೆಯ ಪುತ್ರಿಯಾದ ಪಾರ್ವತಿಯು. **ಮೈನಾಕಿ** ಮೈನಾಕಿತನಯನೆಂದರೆ–ಪಾರ್ವತೀಪುತ್ರನಾದ ಶ್ರೀವಿನಾಯಕನು. ಶ್ರೀವಿನಾಯಕಾಂತರ್ಗತ ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತನು ವಿಶ್ವಂಭರಮೂರ್ತಿಯು. (**ಮೈನಾಕಿತನಯಾಂತರ್ಗತ ಶ್ರೀಪ್ರಾಣಪತಿ ಎನಿಸ**).

೪. ಅಂತಹ ಮೈನಾಕಿತನಯಾಂತರ್ಗತನು ಸಜ್ಜನರಿಗೆ ಮಹದೈಶ್ವರ್ಯಪ್ರದನು. ಇದರಿಂದ–**ಶ್ರೀಕರ**–ಎಂದಿದ್ದಾರೆ. (ಶ್ರೀ–ಸಂಪತ್ತು–ಇಹಪರಗಳ ಐಶ್ವರ್ಯ. ಕರ–ಉಂಟುಮಾಡುವವನು.)

೫. ಶ್ರೀಕರನಾಮಕನಾದ ಜಗತ್ಪ್ರಭುವೇ ಪಿತಲಮೂರ್ತಿಯಾದ ಶ್ರೀ ನ್ನಾಥವಿಠ್ಠಲನು. ಆತನೇ ದಾಸವರ್ಯರ ಅಂಕಿತನಾಮಸಾಂಕೇತ ೂರ್ತಿಯು.

೬. ಅಂತಹ ಶ್ರೀ ಜಗನ್ನಾಥಪಿಠ್ಠಲ ಸ್ವಾಮಿಯು, ೨೧ ಕಮಲಪುಷ್ಪಗಳ ಮಾಲಿಕೆಯನ್ನು ಅಂತಃಕರಣದಿಂದ ಸ್ವೀಕರಿಸುವನು.

೭. ತನ್ನ ಭಗವದ್ಭಕ್ತರಿಗೆ ಸದಾ ಸರ್ವಕಾಲಗಳಲ್ಲೂ, ಅಪೇಕ್ಷಾದೆಶೆಯಲ್ಲಿ ್ಕರ್ಮಗಳ ಫಲರೂಪವಾದ ಸ್ವರ್ಗಸುಖಗಳನ್ನೂ, ಅನುಗ್ರಹ ಪವಾಗಿ, ನಿತ್ಯಾನಂದರೂಪವಾದ ಮುಕ್ತಿ ಸುಖವನ್ನೂ ನೀಡುವನು.

**॥ ಇಂತು ೨೧ನೆಯ ಅಂತ್ಯ ಪದ್ಯದ ಸರ್ವವ್ಯಾಖ್ಯಾನಾಸಾರ ಸಂಗ್ರಹವು ಸಮಾಪ್ತಿಯಾಯಿತು ॥**